UNIVERSAL LIBRARY
OU_200908
UNIVERSAL LIBRARY

OUP—23—4-4-69—5,000.

**OSMANIA UNIVERSITY LIBRARY**

Call No. K 81.4 H53N    Accession No. K1154

Author ಹರ್ಡೇಕರ, ಜಿ.ಜಿ.

Title ನೃಶಿಕೆ ವಚನಗಳು. 1931

This book should be returned on or before the date last marked below.

ಶಿವಾನುಭವ ಗ್ರಂಥಮಾಲಾ ನಂ॥ ೧೦

# ನೈತಿಕ ಮತ್ತು ಭಕ್ತಿಯ

## ವಚನಗಳು.

ಸಂಪಾದಕರು

**ರಾ॥ ಸಾ॥ ಫ. ಗು. ಹಳಕಟ್ಟಿ**
ಬಿ. ಎ. ಎಲ್. ಎಲ್. ಬಿ. ವಕೀಲ.

**ವಿಜಾಪುರ.**
೧೯೩೧

೨ನೇ ಆವೃತ್ತಿ

**ಬೆಲೆ ೧೦ ಆಣೆ**

ಇದನ್ನು ವಿಜಾಪುರದಲ್ಲಿ ರಾ॥ ಸಾ॥ ಫ. ಗು. ಹಳಕಟ್ಟಿ ಇವರು ತಮ್ಮ
**ಹಿತಚಿಂತಕ ಪ್ರಿಂಟಿಂಗ ಪ್ರೆಸ್ಸಿನಲ್ಲಿ** ಮುದ್ರಿಸಿದರು ಮತ್ತು
ಅವರು ವಿಜಾಪುರದಲ್ಲಿ ಉಪಲೀಬುರುಜದ ಹತ್ತರ ತಮ್ಮ
೧೬೨೦ ( ಅ ) ನೇ ಮನೆಯಲ್ಲಿ ಪ್ರಕಟಿಸಿದರು.

(ಈ ಗ್ರಂಥದ ಸ್ವಾಮಿತ್ವವು ಗ್ರಂಥಕರ್ತರಿಂದ ಕಾದಿಡಲ್ಪಟ್ಟಿದೆ)

# ಪ್ರಸ್ತಾವನೆ.

ವೀರಶೈವ ಶಿವಶರಣರು ತಮ್ಮ ಗ್ರಂಥಗಳಲ್ಲಿ ನೈತಿಕಾಚರಣೆಗೂ ಭಕ್ತಿಗೂ ಅತ್ಯಂತ ಶ್ರೇಷ್ಠ ಸ್ಥಾನವನ್ನು ಕೊಟ್ಟಿರುತ್ತಾರೆ. ಈ ವಿಷಯಗಳ ಬಗ್ಗೆ ಇರುವ ಅವರ ವಾಕ್ಯಗಳು ಬಹಳ ಉದಾತ್ತವಾಗಿರುತ್ತವೆ. ಅವುಗಳನ್ನು ಆಬಾಲವೃದ್ಧರೂ ನಿತ್ಯ ಪಠಿಸುವಂತೆ ಇವೆ. 'ವಚನಶಾಸ್ತ್ರಸಾರ' ಗ್ರಂಥದಲ್ಲಿ ಈ ಬಗ್ಗೆ ಇರುವ ಮಹತ್ವದ ವಾಕ್ಯಗಳನ್ನು ನಾನು ಆರಿಸಿ ತೆಗೆದು ಈ ಸಣ್ಣ ಗ್ರಂಥವನ್ನು ರಚಿಸಿದ್ದೇನೆ. ವಚನ ಗ್ರಂಥಗಳಿಂದ ಹಿಂದೂಧರ್ಮದ ಸಾಮಾನ್ಯ ತತ್ವಗಳನ್ನೂ ಸಹ ಅರಿಯಬಹುದಾಗಿದೆ. ಯಾಕಂದರೆ ಈ ಉಕ್ತಿಗಳು ಈ ತತ್ವಗಳನ್ನು ಅವಲಂಬಿಸಿಯೇ ರಚಿಸಲ್ಪಟ್ಟವಿರುತ್ತವೆ. ಇದಲ್ಲದೆ ವಚನಗಳ ಭಾಷೆಯಾದರೂ ಬಹು ಸುಂದರವಾಗಿರುತ್ತದೆ. ಅವುಗಳು ಕನ್ನಡ ನುಡಿಯ ಸ್ವಾಭಾವಿಕ ತೇಜಸ್ಸನ್ನೂ ಬಲವನ್ನೂ ಬಹು ಚನ್ನಾಗಿ ಹೊರಪಡಿಸುತ್ತವೆ. ಆದ್ದರಿಂದ ವಚನ ವಾಙ್ಮಯದ ಉಪಯುಕ್ತತೆಯನ್ನು ಎಲ್ಲರ ನಿದರ್ಶನಕ್ಕೆ ತರಬೇಕೆಂದು ಉದ್ದೇಶಿಸಿ, ನಾನು ಈ ಚಿಕ್ಕ ಪುಸ್ತಕವನ್ನು ಪ್ರಸಿದ್ಧಿಸಿದ್ದೇನೆ.

ಶಿವಶರಣರು ಎಲ್ಲ ವೀರಶೈವರಿಗೆ ಅತ್ಯಂತ ಪೂಜ್ಯರಾಗಿರುತ್ತಾರೆ. ಆದ್ದರಿಂದ ಅವರಿಗೆ ವಿಶೇಷ ಈ ಗ್ರಂಥವು ಉಪಯೋಗವಾಗಬಹುದೆಂದು ಎಣಿಸಿದ್ದೇನೆ.

ವಾಚಕರಿಗೆ ಅನುಕೂಲವಾಗಬೇಕೆಂದು ಕಠಿಣಶಬ್ದಗಳ ಒಂದು ಸಣ್ಣ ಕೋಶವನ್ನೂ ರಚಿಸಿ ಈ ಪುಸ್ತಕದ ಅಂತ್ಯದಲ್ಲಿ ಕೊಟ್ಟಿದ್ದೇನೆ.

**ವಿಜಾಪುರ** **ಫ. ಗು. ಹಳಕಟ್ಟಿ.**

**ತಾ॥ ೨೫—೩—೨೭**

# ೨ನೇ ಆವೃತ್ತಿಯು ಪ್ರಸ್ತಾವನೆ.

ಇದು ಈ ಗ್ರಂಥದ ೨ನೇ ಆವೃತ್ತಿಯು ಆಗಿದ್ದು ಮೊದಲಿನಂತೆಯೇ ಇದು ಲೋಕಾದರಕ್ಕೆ ಪಾತ್ರವಾಗುವದೆಂದು ಭಾವಿಸಿದ್ದೇವೆ. ಮೊದಲಿನ ಆವೃತ್ತಿಯಲ್ಲಿ ಯಾವ ಹೆಚ್ಚುಕಡಿಮೆಗಳನ್ನು ಮಾಡದೆ ಇದನ್ನು ಪುನಃ ಪ್ರಕಟಪಡಿಸಿರುತ್ತೇವೆ.

**ವಿಜಾಪುರ** **ಫ. ಗು. ಹಳಕಟ್ಟಿ.**

ತಾ॥ ೪—೫—೩೧

# ವಿಷಯಾನುಕ್ರಮಣಿಕೆ.

## ನೈತಿಕ ವಚನಗಳು ಭಾಗ ೧


೧ ವಚನಗಳ ಮಹತ್ವ ೧
೨ ಸತ್ಯವನ್ನು ನುಡಿ ೨
೩ ಕಳವು ಮಾಡಬೇಡ ೩
೪ ಸ್ವಾರ್ಥನೆಯಿಂದಿರು ೪
೫ ನೀತಿಯ ಸಾಮಾನ್ಯ ವಚನಗಳು ಭಾಗ ೧ ೬
೬ ಜೀವಹಿಂಸೆ ಮಾಡಬೇಡ ೮
೭ ಸಮಾಧಾನಿಯಾಗಿರು ೧೦
೮ ಸಿಟ್ಟಿಗಬೇಡ ೧೨
೯ ಸ್ಥೈರಣೆಯುಳ್ಳವನಾಗಿರು ೧೩
೧೦ ನೀತಿಯ ಸಾಮಾನ್ಯ ವಚನಗಳು ಭಾಗ ೨ ೧೪
೧೧ ನಿಷ್ಕಪಟಿಯಾಗಿರು ೧೭
೧೨ ದುರಾಶೆಯುಳ್ಳವನಾಗಬೇಡ ೧೮
೧೩ ದಾನಮಾಡು ೨೨
೧೪ ಲೋಭಿಯಾಗಬೇಡ ೨೪
೧೫ ನೀತಿಯ ಸಾಮಾನ್ಯ ವಚನಗಳು ಭಾಗ ೩ ೨೬
೧೬ ಅಹಂಕಾರಿಯಾಗಬೇಡ ೨೭
೧೭ ಜ್ಞಾನಿಯೇ ಶ್ರೇಷ್ಠನೆಂದು ಭಾವಿಸು ೨೯
೧೮ ಸ್ತ್ರೀಯರನ್ನು ಮನ್ನಿಸು ೩೧
೧೯ ವ್ಯಭಿಚಾರ ಮಾಡಬೇಡ ೩೨
೨೦ ಸಜ್ಜನರ ಸಂಗಮಾಡು ೩೩
೨೧ ದೈನ್ಯ ಭಾವದಿಂದಿರು ೩೫
೨೨ ವಿದ್ಯಾವಂತನಾದರೂ ಸದಾಚಾರಿಯಾಗಿರುವುದು ೩೭
೨೩ ಶರಣರನ್ನು ಮನ್ನಿಸು ೪೦
೨೪ ನೈತಿಕಸಾಮಾನ್ಯ ವಚನಗಳು ಭಾಗ ೪ ೪೨

| | | |
|---|---|---|
| ೨೫ | ನಿಷ್ಠೆಯುಳ್ಳವನಾಗಿರು | ೪೪ |
| ೨೬ | ಎಂಥ ಕಷ್ಟಗಳು ಬಂದರೂ ನಿನ್ನ ಕರ್ತವ್ಯಗಳನ್ನು ಬಿಡಬೇಡ | ೪೫ |
| ೨೭ | ನಿನ್ನ ಕರ್ತವ್ಯಗಳಲ್ಲಿ ಧೈರ್ಯವುಳ್ಳವನಾಗಿರು | ೪೭ |
| ೨೮ | ಬಡತನದಲ್ಲಿ ಧೈರ್ಯಗುಂದಬೇಡ | ೪೮ |
| ೨೯ | ದೇವಪೂಜೆಯು ಸದಾಚಾರವಿಲ್ಲದಿದ್ದರೆ ವ್ಯರ್ಥ | ೫೦ |
| ೩೦ | ಲಿಂಗಾಂಗಿಗಳು ಸದಾಚಾರಿಗಳಾಗಿರಬೇಕು | ೫೨ |
| ೩೧ | ಸದಾಚಾರವೇ ಲಿಂಗಚಿನ್ಹ | ೫೫ |


### ಭಕ್ತಿಯ ವಚನಗಳು ಭಾಗ ೨


| | | |
|---|---|---|
| ೩೨ | ಮೋಕ್ಷಪದವನ್ನು ಬಯಸು | ೫೯ |
| ೩೩ | ಶುದ್ಧ ಮನಸ್ಸುಳ್ಳವನಾಗಿರು ಭಾಗ ೧ | ೬೦ |
| ೩೪ | ಸಂಸಾರವು ದುಃಖಮಯವು | ೬೨ |
| ೩೫ | ಭಕ್ತಿಯುಳ್ಳವನಾಗಿರು | ೬೪ |
| ೩೬ | ಪರಮಾತ್ಮನ ರಕ್ಷಣೆ | ೬೭ |
| ೩೭ | ಪರಮಾತ್ಮನ ಕ್ಷಮೆ | ೭೦ |
| ೩೮ | ಶುದ್ಧಮನಸ್ಸುಳ್ಳವನಾಗಿರು ಭಾಗ ೨ | ೭೩ |
| ೩೯ | ಪರಮಾತ್ಮನ ಕಾರುಣ್ಯ ಭಾಗ ೧ | ೭೬ |
| ೪೦ | ಪರಮಾತ್ಮನಿಗೆ ಶರಣು ಹೊಗು | ೭೯ |
| ೪೧ | ಸದ್ವರ್ತನೆಯನ್ನು ಕರುಣಿಸಲು ಪರಮಾತ್ಮನನ್ನು ಬೇಡಿಕೊಳ್ಳು | ೮೦ |
| ೪೨ | ಪರಮಾತ್ಮನ ಕಾರುಣ್ಯಭಾಗ ೨ | ೮೩ |
| ೪೩ | ಪರಮಾತ್ಮನ ಪೂಜೆ | ೮೫ |
| ೪೪ | ಪರಮಾತ್ಮನ ಧ್ಯಾನ ಭಾಗ ೧ | ೮೮ |
| ೪೫ | ಪರಮಾತ್ಮನ ಧ್ಯಾನ ಭಾಗ ೨ | ೯೦ |
| | ಕಠಿಣ ಶಬ್ದಗಳಕೋಶ | ೯೫ |

# ನೈತಿಕ ವಚನಗಳು.

## ವಚನಗಳ ಮಹತ್ವ.

೧. ಆದ್ಯರ ವಚನ ಪರುಷ ಕಂಡಯ್ಯಾ! ಸದಾಶಿವನೆಂಬ ಲಿಂಗವ ನಂಬುವುದು. ನಂಬಲೊಡನೆ, ಸೀ ವಿಜಯ ಕಂಡಯ್ಯಾ! ಅಧರಕ್ಕೆ ಕಹಿ, ಉದರಕ್ಕೆ ಸಿಹಿ. ಕೂಡಲಸಂಗನ ಶರಣರ ವಚನ ಬೇವ ಸವಿದಂತೆ.

೨. ಪಾತಾಳ ದಗ್ಗಣಿಯ ನೇಣಿಲ್ಲದೆ, ಸೋಪಾನದ ಬಲವಿಂದಲ್ಲದೆ, ತೆಗೆಯ ಬಹುದೇ? ಶಬ್ದ ಸೋಪಾನವ ಕಟ್ಟಿ ನಡಿಸಿದರು ಪುರಾತನರು ದೇವಲೋಕಕ್ಕೆ ಬಟ್ಟೆ ಕಾಣಿರೋ. ಮರ್ತ್ಯಲೋಕದವರ ಮನದ ಮೈಲಿಗೆಯ ಕಳೆಯಲೆಂದು ಗೀತಮಾತೆಂಬ ಜ್ಯೋತಿಯ ಬೆಳಗಿ ಕೊಟ್ಟರು ಕೂಡಲಸಂಗನ ಶರಣರು.

೩. ಕಡೆಗೋಲಿಲ್ಲದ ಬಂಡಿ ಹೊಡೆಗೆಡುವುದು ಮಾಬುದೇ? ಕಡೆಗೋಲು ಬಂಡಿಗಾಧಾರ. ಕಡು ದರ್ಪವೇರಿದ ಒಡಲೆಂಬ ಬಂಡಿಗೆ ವೃಡಶರಣರ ನುಡಿಗಡಣವೇ ಕಡೆಗೋಲು ಕಾಣಾ ರಾಮನಾಥಾ.

೪. ಕರಿಯನಿತ್ತೊಡೆ ಒಲ್ಲೆ. ಸಿರಿಯನಿತ್ತೊಡೆ ಒಲ್ಲೆ. ಹಿರಿದಪ್ಪ ರಾಜ್ಯವನಿತ್ತೊಡೆ ಒಲ್ಲೆ. ನಿಮ್ಮ ಶರಣರ ಸೂಳು ನುಡಿಯ ಒಂದರಗಳಿಗೆ ಇತ್ತೊಡೆ, ನಿನ್ನ ನಿತ್ತೆ ಕಾಣಾ ರಾಮನಾಥಾ.

೫. ಹಾಲತೊರೆಗೆ ಬೆಲ್ಲವಂತಹ ಕೆಸರು, ಸಕ್ಕರೆಯಂತಹ ಮಳಲು, ತವರಾಜದಂತಹ ನೊರೆ ತೆರೆಗಳು. ಇಂತಪ್ಪ ಆದ್ಯರ ವಚನವಿರಲು, ಬೇರೆ ಬಾವಿಯ ತೋಡಿ, ಉಪ್ಪುನೀರ ಸವಿದಂತಾಯಿತ್ತಯ್ಯಾ ಎನ್ನ ಯುಕ್ತಿ. ನಿಮ್ಮ ವಚನಂಗಳ ಕೇಳದೆ, ಅನ್ಯ ಪುರಾಣಗಳ ಕೇಳಿ, ಕೆಟ್ಟೆನಯ್ಯಾ ಕೂಡಲ ಸಂಗಮದೇವಾ.

೬. ಆಚಾರ ವಿಚಾರ ತಪ್ಪಿದಲ್ಲಿ ಶರಣರ ವಾದವಲ್ಲದೆ, ಮತ್ತೊಂದರಲ್ಲಿ ವಾದವಿಲ್ಲ. ಶರಣರ ವಾದ ಮೋಕ್ಷದ ಬೀಡು, ಶರಣರ ವಾದ ಲಿಂಗದ ನಾಡು, ಶರಣರ ವಾದ ಕಾಳಿಲಿಂಗದೇವನು ಮಾಡಿದ ಮಾಯೆಯ ಕೇಡು.

---

## ಸತ್ಯವನ್ನು ನುಡಿ.

೧. ದೇವಲೋಕ ಮರ್ತ್ಯಲೋಕವೆಂಬುವು ಬೇರಿಲ್ಲ ಕಾಣಿರೋ. ಸತ್ಯವ ನುಡಿವುದೇ ದೇವಲೋಕ. ಅಸತ್ಯವ ನುಡಿವುದೇ ಮರ್ತ್ಯಲೋಕ. ಆಚಾರವೇ ಸ್ವರ್ಗ, ಅನಾಚಾರವೇ ನರಕ. ಇದಕ್ಕೆ ನೀವೇ ಪ್ರಮಾಣು ಕೂಡಲಸಂಗಮದೇವಾ.

೨. ಹೊಲೆಯರ ಬಾವಿಯಲೊಂದು ಎಲು ನಟ್ಟಿದ್ದರೆ ಹೊಲೆ ಹೊಲೆ ಎಂಬುದೀ ಲೋಕವೆಲ್ಲ. ಹಲವೆಲುವಿದ್ದ ಬಾಯಲ್ಲಿ ಅಲ್ಲದುದ ನುಡಿದರೆ, ಅದು ಹೊಲೆಯರ ಬಾವಿಂದ ಕರಕಷ್ಟ ಕಾಣಾ ರಾಮನಾಥಾ.

೩. ಅಟಮಟವೇ ಆಧಾರ, ಕಪಟವೇ ಸದಾಚಾರ, ಕುಟಿಲವೇ ಘನವಾಯಿತ್ತು ಕೆಲಬರಿಗೆ. ಹುಸಿಮುಸಕವೇ ವರ್ತನವಾಯಿತ್ತು ಕೆಲಬರಿಗೆ. ಯಂತ್ರ ತಂತ್ರವೇ ವ್ಯವಹಾರವಾಯಿತ್ತು ಕೆಲಬರಿಗೆ. ಪಟಿಯ ಸಾಗರದೊಳಗೆ ತೇಂಕಾಡುತಿರ್ದರು ಕೆಲಬರು, ಸಕಳೇಶ್ವರ ದೇವರ ನಂಬಲರಿಯದವರೆಲ್ಲರು.

೪. ಹೆಣನ ಕಂಡರೆ, ನಾಯಿ ಕಚ್ಚಿದಲ್ಲದೆ ಮಾಣ್ಬುದೇ? ಹಣವ ಕಂಡರೆ, ಮನ ಕರಗದಲ್ಲದೆ ಮಾಣ್ಬುದೇ? ಬಿಸಿಯ ಕಂಡರೆ, ಬೆಣ್ಣೆ ಕರಗದಲ್ಲದೆ ಮಾಣ್ಬುದೇ? ಹುಸಿಯ ಕಂಡರೆ, ಲೋಕ

ಮೆಚ್ಚುವದು, ನೆಚ್ಚುವದು, ಮಹಾಲಿಂಗ ಗುರು ಶಿವಸಿದ್ಧೇಶ್ವರ ಪ್ರಭುವೇ.

೫. ಜಂಬೂದ್ವೀಪ ನವಖಂಡ ಪೃಥ್ವಿಯೊಳಗೆ ಕೇಳಿರಣ್ಣಾ ಎರಡಾಳಿನ ಭಾಷೆಯ. ಕೊಲುವೆನೆಂಬ ಭಾಷೆ ದೇವನದು, ಗೆಲುವೆನೆಂಬ ಭಾಷೆ ಭಕ್ತನದು. ಸತ್ಯವೆಂಬ ಕೂರಲಗನೇ ಕಳೆದು ಕೊಂಡು, ಸದ್ಭಕ್ತರು ಗೆದ್ದರು ಕಾಣಾ ಕೂಡಲ ಸಂಗಮದೇವ.

೬. ದಿಟವ ನುಡಿವುದು. ನುಡಿದಂತೆ ನಡೆವುದು. ಹುಸಿಯ ನಡೆದು ತಪ್ಪುವ ಪ್ರಪಂಚಿಯನೊಲ್ಲ ಕೂಡಲ ಸಂಗಮದೇವ.

೭. ಸತ್ಯದಲ್ಲಿ ನಡೆವುದು ಶೀಲ. ಸತ್ಯದಲ್ಲಿ ನುಡಿವುದು ಶೀಲ. ಸಜ್ಜನ ಸದಾಚಾರದಲ್ಲಿ ವರ್ತಿಸಿ, ಸತ್ಯವನರಿವುದೇ ಶೀಲ, ಕಾಣಿರೋ ಮಹಾಲಿಂಗ ಗುರು ಶಿವಸಿದ್ಧೇಶ್ವರ ಪ್ರಭುವೇ.

೮. ಸತ್ಯವಿಲ್ಲದವರೊಡನೆ ಸಹಸ್ರಕ್ಕೊಮ್ಮೆ ನುಡಿಯಲಾಗದು, ಲಕ್ಷಕ್ಕೊಮ್ಮೆ ನುಡಿಯಲಾಗದು, ಕೋಟಿಗೊಮ್ಮೆ ನುಡಿಯಲಾಗದು. ಸುಡಲವಂದಿರೊಡತನ. ಮಾರಿ ಹೊರಲಿ. ಗುಹೇಶ್ವರಾ ನಿಮ್ಮ ಶರಣರಲ್ಲದವರೊಡನೆ ಬಾಯ್ದೆರೆಯಲಾಗದು.

---

## ಕಳವು ಮಾಡಬೇಡ.

೧. ಬಟ್ಟೆಯಲ್ಲಿ ಹೊನ್ನು ವಸ್ತ್ರ ಬಿದ್ದಿದ್ದರೆ, ನಾನು ಕೈಮುಟ್ಟಿ ಎತ್ತಿದೆನಾದರೆ, ನಿಮ್ಮಾಣೆ ನಿಮ್ಮ ಪ್ರಮಥರಾಣೆ. ಅದೇನು ಕಾರಣವೆಂದೊಡೆ, ನೀವಿಕ್ಕಿದ ಭಿಕ್ಷೆಯಲ್ಲಿಪ್ಪೆನಾಗಿ. ಇಂತಲ್ಲದೆ ನಾನು ಆಳಿಮನವ ಮಾಡಿ, ಪರದ್ರವ್ಯಕ್ಕೆ ಆಶೆ ಮಾಡಿದೆನಾದೊಡೆ ನೀನಾಗಲೇ ಎನ್ನ ನರಕದಲ್ಲದ್ದಿ ನೀನೆದ್ದು ಹೋಗಾ ಶಂಭು ಜಕ್ಕೇಶ್ವರಾ.

೨. ಹಣ, ಬಂಗಾರ, ವಸ್ತ್ರ, ಕಪ್ಪಟ ಬಟ್ಟೆಯಲ್ಲಿ ಸೆಟ್ಟನೆ ಬಿದ್ದಿರಲು, ಕಂಡು ಕಾತರಿಸಿ ಕೈಮುಟ್ಟಿ ಎತ್ತದ ಭಾಷೆ. ಕೊಟ್ಟೊಡೆ ಮುಟ್ಟುವ ಭಾಷೆ. ಪರಧನ ಪರಸತಿಗೆ ಅಳುಪದ ಭಾಷೆ. ಇಂತಿದಕ್ಕಳುಪಿದೆನಾದೊಡೆ, ಸೌರಾಷ್ಟ್ರ ಸೋಮೇಶ್ವರಾ, ನಿಮ್ಮಾಣೆ ನಿಮ್ಮ ಪ್ರಮಥರಾಣೆ.

೩. ತೊರೆಯ ಮೀವಣ್ಣಗಳಿರಾ, ತೊರೆಯುರೋ ಪರಧನವ. ಪರದ್ರವ್ಯವ ಬಿಡದೆ ಹೋಗಿ ತೊರೆಯಲ್ಲಿ ಮಿಂದರೆ, ಆ ತೊರೆ ಎಲ್ಲ ಬರುದೊರೆ ಕಂಡಯ್ಯಾ! ಕಳವ ತೊರೆದು ಮಿಂದರೆ, ಒಲಿದು ಕೂಡಿಕೊಂಬ ನಮ್ಮ ಕೂಡಲ ಸಂಗಮದೇವ.

೪. ಕುಳಿತು ಲಿಂಗವ ಪೂಜಿಸಿ, ಅಲ್ಲದಾಟವನಾಡುವರಯ್ಯಾ. ಬೆಳ್ಳಿತ್ತಿನ ಮರೆಯಲ್ಲಿ ಹುಲ್ಲೆಗಂಬ ತೊಡುವಂತೆ, ಲೋಗರರ್ಥವ ಕಳುವ ಕಳ್ಳರ ಕಯ್ಯ ಪೂಜೆಯನೊಲ್ಲ ನೋಡಾ ನಮ್ಮ ಕೂಡಲ ಸಂಗಮದೇವಾ.

೫. ಊರ ಮುಂದೆ ಹಾಲಹಳ್ಳ ಹರಿವುತ್ತಿರಲಿ. ನಾಳೆ ಆವಿನ ಬೆನ್ನ ಮೇಲೆ ಹರಿಯಲಿ. ಅದೇಕಯ್ಯಾ, ಲಜ್ಜೆಗೆಡಲೇಕಯ್ಯಾ? ನಾಣುಗೆಡಲೇಕೆ? ಕೂಡಲ ಸಂಗಮದೇವರುಳ್ಳನ್ನಕ್ಕರ ಬಿಜ್ಜಳನ ಭಂಡಾರ ಎನಗೇಕಯ್ಯಾ?

## ಸಭ್ಯ ವರ್ತನೆಯಿಂದಿರು.

೧. ಪುಣ್ಯ ಪಾಪಂಗಳೆಂಬವು ತಮ್ಮ ಇಷ್ಟವು ಕಂಡಿರಯ್ಯಾ! "ಅಯ್ಯಾ" ಎಂದೊಡೆ ಸ್ವರ್ಗ. "ಎಲವೋ" ಎಂದೊಡೆ ನರಕ. "ದೇವ ಭಕ್ತ ಜಯ ಜಯ" ಎಂಬ ನುಡಿಯೊಳಗೆ ಕೈಲಾಸವೈದುದು ಕೂಡಲ ಸಂಗಮದೇವಾ.

೨. ಎನಗೆ ನಾನೇ ಹಗೆ ನೋಡಯ್ಯಾ! ಎನಗೆ ನಾನೇ ಕೆಳೆ ನೋಡಯ್ಯಾ! ನಿಮ್ಮ ಸದ್ಭಕ್ತರೊಡನೆ ವಿರೋಧವ ಮಾಡಿದೊಡೆ, ಎನ್ನ ಕೊಲುವುದಾಗಿ, ನಿಮ್ಮ ಪುರಾತನರಿಗಂಜಿ ಬೆಸಗೊಂಡೊಡೆ, ಎನ್ನ ಕಾಯ್ವುದಾಗಿ, ಅನ್ಯರು ಹಗೆಯಲ್ಲ, ಕೆಳೆಯಲ್ಲ. ಬಾಗಿದ ತಲೆಯ, ಮುಗಿದ ಕಯ್ಯಾಗಿರಿಸು, ಕೂಡಲ ಸಂಗಮದೇವಾ.

೩. ಹಾವಾಡಿಗ ಹಾವನಾಡಿಸುವಲ್ಲಿ ತನ್ನ ಕಾಯ್ದುಕೊಂಡು ಹಾವನಾಡಿಸುವಂತೆ, ಆವ ಮಾತನಾಡಿದಡೂ ತನ್ನ ಕಾಯ್ದು ಆಡಬೇಕು. ಅದೆಂತೆಂದೊಡೆ, ತನ್ನ ವಚನವೇ ತನಗೆ ಹಗೆಯಹುದಾಗಿ. ಅಂತಿಗರಿಂದ ಬಂದಿತೆನಬೇಡ. ಅಳಿವುದು ಉಳಿವುದು ತನ್ನ ವಚನದಲ್ಲಿಯೇ ಇದೆ. ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ ಹಗೆಯೂ ಕೆಳೆಯೂ ತನ್ನ ವಚನವೇ. ಬೇರಿಲ್ಲ.

೪. ಕಂಡ ಭಕ್ತಂಗೆ ಕೈಮುಗಿವಾತನೇ ಭಕ್ತ. ಮೃದು ವಚನಂಗಳೇ ಸಕಲ ಜಪಂಗಳಯ್ಯಾ. ಮೃದು ವಚನಂಗಳೇ ಸಕಲ ತಪಂಗಳಯ್ಯಾ. ಸದುವಿನಯವೇ ಸದಾಶಿವನ ಒಲುಮೆಯಯ್ಯಾ. ಕೂಡಲ ಸಂಗಮದೇವಯ್ಯಾ ನಂತಲ್ಲದೊಲ್ಲನಯ್ಯಾ.

೫. ಬಲ್ಲವರು ಬೆಸಗೊಂಡಡೆ, ಮೆಲ್ಲನಾಡೈದು ಮೆಲ್ಲನೆ ನುಡಿಯಬೇಕು. ಕಲ್ಲು ಕಲ್ಲುತಾಗಿದಂತೆ ಸೊಲ್ಲು ಬಿರಿಯಾದೊಡೆ, ಅಲ್ಲಿ ನಿಲ್ಲನೈಯ್ಯ ಅಖಂಡೇಶ್ವರಾ.

೬. "ಇತ್ತ ಬಾರಯ್ಯಾ, ಇತ್ತ ಬಾರಯ್ಯಾ" ಎಂದು ಭಕ್ತರೆಲ್ಲರೂ ಕೂರ್ತು ಹತ್ತೆ ಕರೆವುತ್ತಿರಲು ಮತ್ತೆ ಕೆಲಕ್ಕೆ ಹೋಗಿ ಶರಣೆಂದು ಹಸ್ತ ಬಾಯನೇ ಮುಚ್ಚಿ ಕಿರಿದಾಗಿ ಭೃತ್ಯಾಚಾರವ ನುಡಿದು, ವಿನಯ ಧ್ಯಾನ ಉಳ್ಳರೆ, ಎತ್ತಿಕೊಂಬನಯ್ಯಾ ಕೂಡಲಸಂಗಮದೇವ ಪ್ರಮಥರ ಮುಂದೆ.

೭. ಸುಗಂಧವ ಕೊಡುವ ಮೃಗವೆಂದೊಡೆ, ನೋಯಿಸಿ ಬಂಧಿಸಿದೊಡೆ ಗಂಧ ಬಂದುದುಂಟೇ, ದುರ್ಗಂಧವಲ್ಲದೆ? ಇಂತೀ

ಅರಿವಿನ ತೆರದಲ್ಲಿ ನುಡಿವ ಮಾತಿನ ಬ್ರಹ್ಮವ ಬಲ್ಲೆವೆಂದು ಒತ್ತಿ ನುಡಿಯಬಹುದೇ? ಸಾತ್ವಿಕ ಸದಾತ್ಮರು ಅವರಿಚ್ಛೆಯೊಳಿರ್ದು ಸುಚಿತ್ರವನರಿವುದು. ಭೃತ್ಯತ್ವದಿಂದ ತನಗೆ ಸಿಕ್ಕಿಚ್ಛೆಯ ಕಾಣಿಸಿಕೊಳಬೇಕಲ್ಲದೆ, ತಾ ಕಷ್ಟನಾಗಿ ಆ ಮಹಾತ್ಮರ ದೃಷ್ಟವ ನೋಡಿಹೆನೆಂದೊಡೆ ಸ್ವಪ್ನದಲ್ಲಿಯೂ ತಲೆದೋರನಾಗಿ ಇಂತೀ ಸಿಕ್ಷಯುವ ವಸ್ತುವನರಿದು ನಿಃಕಳಂಕ ಮಲ್ಲಿಕಾರ್ಜುನ ಲಿಂಗದಲ್ಲಿ ಬೆಚ್ಚುತಿರಬೇಕು.

---

## ನೀತಿಯ ಸಾಮಾನ್ಯ ವಚನಗಳು.

### ಭಾಗ ೧

೧. ಆಡಿ ಅಳುಪದಿರಾ. ಲೇಸ ಮಾಡಿ ಮರುಗದಿರಾ. ಎಲೆ ಮನವೇ ಕೂಡಿ ತಪ್ಪದಿರಾ. ಬೇಡಿದವರಿಗೆ ನೀಸಿಲ್ಲೆನ್ನದಿರು, ಕಂಡೆಯಾ. ನಾಡಮಾತು ಬೇಡ. ಸೆರೆಗೊಡ್ಡ ಬೇಡು ಕೂಡಲಸಂಗಯ್ಯನ ಶರಣರಾ.

೨. ಕಡೆ ನಡೆಯದೆ, ಕಡೆ ನುಡಿಯದೆ, ಅನ್ಯವನು ಪ್ರತಿಪಾದಿಸದಿರ್ದೊಡೆ. ಏನು ಕೊಡನಯ್ಯ ಲಿಂಗವು? ತಾನೇನ ಬೇಡಿದ್ದ ಈವನಾಗಿ, ನಂಬುಗೆಯುಳ್ಳ ಶಿವಭಕ್ತಂಗೆ ಇದೇ ದಿಬ್ಯ, ಕೂಡಲಸಂಗಮದೇವಾ.

೩. ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ. ಮುನಿಯ ಬೇಡ. ಅನ್ಯರಿಗೆ ಅಸಹ್ಯವ ನುಡಿಯಲು ಬೇಡ. ತನ್ನ ಬಣ್ಣಿಸಬೇಡ. ಇದಿರ ಹಳಿಯಲು ಬೇಡ. ಇದೇ ಅಂತರಂಗದ ಶುದ್ಧಿ, ಇದೇ ಬಹಿರಂಗದ ಶುದ್ಧಿ, ಇದೇ ನಮ್ಮ ಕೂಡಲಸಂಗಮ ದೇವರ ನೊಲಿಸುವ ಪರಿ.

೪. ಅರ್ಥವಡಗದು, ಕ್ರೋಧ ತೊಲಗದು. ಕ್ರೂರ ಕುಹಕ, ಕುಭಾಷೆ ಬಿಡದನ್ನಕ್ಕರ, ನೀನೆತ್ತ, ಶಿವನೆತ್ತ, ಹೋಗತ್ತ ಮರುಳೇ.

ಭವರೋಗವೆಂಬ ತಿಮಿರ ತಿಳಿಯುವನ್ನಕ್ಕರ, ಕೂಡಲಸಂಗಯ್ಯನೆತ್ತ. ನೀನೆತ್ತ ಮರುಳೇ?

೫. ತುಮುರಿಯ ಕೊಳ್ಳಿಯಂತೆ, ಉರಿವಾತ ಭಕ್ತನೇ? ಹುಸಿಮ ತಂದು ಮಾಡುವಾತ ಭಕ್ತನೇ? ಭಕ್ತರ ಕುಲವನೆತ್ತಿ ನಿಂದಿಸುವಾತ ಭಕ್ತನೇ? ತನ್ನ ಪ್ರಾಣದ ಮೇಲೆ ಬಂದರೂ ಬರಲಿ, ಇವರ ಬಿಡಬೇಕು. ಇವರ ಬಿಡದಿರಲು ಉಳಿಲಿಂಗ ಪೆದ್ದಿಗಳರಸನೊಲ್ಲನವ್ವಾ.

೬. ಆತ್ಮಸ್ತುತಿ ಪರನಿಂದೆಯ ಕೇಳಿಸದಂತೆ ಇರಿಸಯ್ಯ, ನಿಮ್ಮ ಧರ್ಮ. ಆನು ಭಕ್ತ, ಎನ್ನಲ್ಲಿ ಲೇಸುಂಟೆಂದು ಪರಿಣಾಮಿಸಿದರೆ, ನಿಮಗಾನು ದ್ರೋಹಿಯಯ್ಯಾ. ಕೂಡಲ ಸಂಗಮದೇವ, ನಿಮ್ಮ ಶರಣರ ಲೇಸೇ ಎನ್ನ ಲೇಸಯ್ಯ.

೭. ನುಡಿದರೆ ಮುತ್ತಿನ ಹಾರದಂತಿರಬೇಕು. ನುಡಿದರೆ ಲಿಂಗ ಮೆಚ್ಚಿ ಅಹುದೆನಬೇಕು. ನುಡಿಯೊಳಗಾಗಿ ನಡೆಯದಿದ್ದರೆ, ಕೂಡಲ ಸಂಗಮದೇವನೆಂತೊಲಿವನಯ್ಯ?

೮. ನುಡಿಯಲ್ಲಿ ಕರ್ಕಶವಿಲ್ಲದೆ, ನಡೆಯಲ್ಲಿ ಬೇಸರವೋಗದ, ಹಿಡಿದ ಭಕ್ತಿಯ ಕಡೆತನಕ ಬಿಡದೆ, ಬಡತನ ಎಡರು ಕಂಟಕಗಳು ಬಂದಲ್ಲಿ ಚಿಂತೆಯಿಂದ ಕಾಂತಿಗುಂದದೆ, ಅಡಿಗಡಿಗೆ, ''ಶಿವಶಿವಾ'' ಎಂಬ ನುಡಿಯ ಮರೆಯದಿರ್ಪ ಸದ್ಭಕ್ತರಿಗೆ ಬೇಡಿದ ಪದವಿಯ ನೀವ ನಮ್ಮ ಅಖಂಡೇಶ್ವರಾ.

೯. ತಪವೆತ್ತ, ಹೆರರ ಕೇಡಿಂಗೆ ಬಗೆವುದೆತ್ತ? ಜಪವೆತ್ತ, ಶರಣರ ಮೇಲೆ ಅನೃತವ ನುಡಿವುದೆತ್ತ? ಪಂಚಾಚಾರವೆತ್ತ, ಪಾತಕಕ್ಕೆ ಮನ ಬಗೆವುದೆತ್ತ? ಇಂತೀ ಹೊರಬಳಕೆಯ ಲೋಕರಂಜನೆಯಲ್ಲಿಪ್ಪವರಿಗೆ ನಾನಂಜುವೆ. ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ ನೀನು ಅಂಜಿ ದೂರದಲ್ಲಿ ಓಡುವೆ.

೧೦. ಜನಮೆಚ್ಚಿ ಶುದ್ಧನಲ್ಲದೆ, ಮನಮೆಚ್ಚಿ ಶುದ್ಧನಲ್ಲವಯ್ಯ. ನುಡಿಯಲ್ಲಿ ಜಾಣನಲ್ಲದೆ, ನಡೆಯಲ್ಲಿ ಜಾಣನಲ್ಲವಯ್ಯ. ವೇಷದಲ್ಲಿ ಅಧಿಕನಲ್ಲದೆ, ಭಾಷೆಯಲ್ಲಿ ಅಧಿಕನಲ್ಲವಯ್ಯ. ಧನ ದೊರಕದೆ ನಿಸ್ಪೃಹನಲ್ಲದೆ, ಧನ ದೊರಕಿ ನಿಸ್ಪೃಹನಲ್ಲವಯ್ಯ. ಏಕಾಂತ ದ್ರೋಹಿ, ಗುಪ್ತಪಾತಕಿ, ಯುಕ್ತಿ ಶೂನ್ಯರಿಗೆ ಸಕಳೇಶ್ವರ ದೇವರು ಒಲಿ, ಒಲಿ, ಎಂದರೆ ಎಂತೊಲಿವನಯ್ಯಾ?

೧೧. ಆಚಾರವನನಾಚಾರವ ಮಾಡಿ ನುಡಿವರು. ಅನಾಚಾರವನು ಆಚಾರವ ಮಾಡಿ ನುಡಿವರು. ಸತ್ಯವನು ಅಸತ್ಯವ ಮಾಡಿ ನುಡಿವರು. ಅಸತ್ಯವ ಸತ್ಯವ ಮಾಡಿ ನುಡಿವರು. ವಿಷವ ಅಮೃತವೆಂಬರು. ಅಮೃತವ ವಿಷವೆಂಬರು. ಸಹಜವನರಿಯದ ಅಸಹಜರಿಗೆ ಶಿವನೊಲಿ ಎಂದೊಡೆ, ಎಂತೊಲಿವನಯ್ಯಾ? ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ, ನೀ ಮಾಡಿದ ಮಾಯೆಯ ನೋಡಿ ನಾನು ಬೆರಗಾದೆನು.

೧೨. ಲಂಚ ವಂಚನೆಗೆ ಕಯ್ಯಾನದ ಭಾಷೆ. ಬಟ್ಟೆಯಲ್ಲಿ ಹೊನ್ನು ವಸ್ತ್ರ ಬಿದ್ದಿದ್ದರೆ, ಕೈಮುಟ್ಟಿ ಎತ್ತಿದೆನಾದೊಡೆ, ಅಯ್ಯಾ, ನಿಮ್ಮಾಣೆ ನಿಮ್ಮ ಪ್ರಮಥರಾಣೆ. ನೀನಿಕ್ಕಿದ ಭಿಕ್ಷೆಯೊಳಗಿಪ್ಪೆನಯ್ಯಾ, ಶಂಭುಜಕ್ಕೇಶ್ವರದೇವಯ್ಯಾ ನಿಮ್ಮಾಣೆ

---

## ಜೀವಹಿಂಸೆ ಮಾಡಬೇಡ.

೧. ನಾನೊಂದು ಸುರಗಿಯನೇನೆಂದು ಹಿಡಿವೆನು? ಏನಕೆ ಕ್ರೀನಸಿರಿವೆನು? ಜಗವೆಲ್ಲ ನೀನಾಗಿಪ್ಪೆ, ಕಾಣಾ ರಾಮನಾಥಾ.

೨. ದಯವಿಲ್ಲದ ಧರ್ಮವದಾವುದಯ್ಯಾ? ದಯವೇ ಬೇಕು ಸಕಲ ಪ್ರಾಣಿಗಳಲ್ಲಿ. ದಯವೇ ಧರ್ಮದ ಮೂಲವಯ್ಯಾ. ಕೂಡಲಸಂಗಮದೇವರಂತಲ್ಲದೊಲ್ಲನಯ್ಯಾ.

೩. ಲಿಂಗದ ಗುಣದಿಂದ ಲಿಂಗೈಕ್ಯವೆಂಬರು. ಲಿಂಗದ ಗುಣದಿಂದ ಲಿಂಗೈಕ್ಯವಿಲ್ಲ ನೋಡಾ. ಭಾವಾದ್ವೈತಂ ಪರಹಿತಂ ಕೂಡಲಚನ್ನಸಂಗಾ ಲಿಂಗೈಕ್ಯವು.

೪. ಬೆಟ್ಟದ ಮೇಲಣ ಗಿಡಗಳು ಬೆಟ್ಟವ ಮುಟ್ಟದಿಪ್ಪವೇ? ವಿವರಿಸಿ ನೋಡಿದೊಡೆ, ಸೃಷ್ಟಿಯೊಳಗಣ ಪ್ರಾಣಿಗಳು ಪರಮನ ಮುಟ್ಟದಿಪ್ಪವೆ? ಕಷ್ಟರು ಬೇಡವೆಂದು ಬಿಟ್ಟೋಡುತಿಪ್ಪ ಪ್ರಾಣಿಗಳ ನಟ್ಟಿ, ಹಿಡಿದು ಕೊಂದವರೆ, ಪ್ರತಿಷ್ಠಿಸಿದೀಶ್ವರನಿಕ್ಕದಿರ್ಪನೇ ನರಕದಲ್ಲಿ? ಸಕಲ ಪ್ರಾಣಿಗಳಲ್ಲಿ ಮೇಲಾರೈಕೆ ನಮ್ಮ ಸಕಳೇಶ್ವರನಲ್ಲದೆ ಮತ್ತೊಬ್ಬರುಂಟೇ?

೫. ಜಾಲಗಾರನೊಬ್ಬ ಜಲವ ಹೊಕ್ಕು ಶೋಧಿಸಿ, ಹಲವು ಪ್ರಾಣಿಗಳ ಕೊಂದು ನಲಿದಾಡುವ! ತನ್ನ ಮನೆಯಲೊಂದು ಶಿಸು ಸತ್ತರೆ, ಅವಕೆ ಮರುಗುವಂತೆ, ಅವಕೇಕೆ ಮರುಗನು? ಇದು ಕಾರಣ ಚನ್ನಮಲ್ಲಿಕಾರ್ಜುನಯ್ಯನ ಭಕ್ತನಾಗಿರ್ದು, ಜೀವಹಿಂಸೆಯ ಮಾಡುವ ಮಾದಿಗರನೇನೆಂಬೆನಯ್ಯಾ?

೬. ನುಡಿಯಲ್ಲಿ ಕಿಂಕರತ್ವವನರಿದು, ಕರವ ಬೀಸುವಲ್ಲಿ ತುಷಾರ ಕೀಟವನರಿದು, ಅಡಿ ಇಡುವಲ್ಲಿ ಪೊಡವಿಯಲ್ಲಿ ಹೊರಹೊಮ್ಮಿದ ಜೀವನ ಚೇತನಾದಿಗಳನರಿದು, ಮತ್ತೆ ಗಿಡವ ಹಿಡಿವಲ್ಲಿ ಮತ್ತೊಂದು ಒಡಗೂಡುವಲ್ಲಿ, ಒಡಗೂಡಿ ಬಿಡುವಲ್ಲಿ, ಸರ್ವದಯಕ್ಕೆ ಪುದಿಪುಚ್ಚವಿಲ್ಲದಿರಬೇಕು. ಇಂತೀ ಸಡಗರದ ಚಿತ್ತ ದಸರೇಶ್ವರಲಿಂಗವನೊಡಗೂಡುವ ಭಕ್ತಿ.

ಅರ್ಥ:— ಒಬ್ಬರ ಕೂಡ ಪ್ರಸಂಗವ ಮಾಡುವಲ್ಲಿ, ಅವರು ಕರ್ತೃ ತಾ ಭೃತ್ಯನೆಂದರಿದು ಮಾತನಾಡುವುದು. ದಾರಿಯ ನಡೆವಲ್ಲಿ ಹಸ್ತವ ಹಿಂದಕ್ಕೆ ಮುಂದಕ್ಕೆ ಬೀಸುವಲ್ಲಿ ನೊರಜು ಮೊದಲಾದ ರ[illegible]ಗಳು [illegible]ಂದಾವು ಸತ್ತಾವು ಎಂದರಿದು ನಡೆವುದು. ಹೆಜ್ಜೆ ಇಡುವಲ್ಲಿ, ಭೂಮಿಯಲ್ಲಿ ಹೊರಹೊರಟು ಬಂದು

ಜೀವರುಗಳ ಚೈತನ್ಯವುಳ್ಳ ಇರುವೆ ಮೊದಲಾದ ಪ್ರಾಣಿಗಳು ನೊಂದಾವು ಸತ್ತಾವೆಂದರಿದು ಮೆಲ್ಲಗೆ ಹೆಜ್ಜೆ ಇಡುವುದು. ಮರಳಿ ಪುಷ್ಪದ ಗಿಡವ ಹಿಡಿವಲ್ಲಿ ಬಳಿಕ ಒಂದು ಕೊನೆಯು ಒಡನೆ ಹಿಡಿವಲ್ಲಿ, ಆ ಕೊನೆಯಿಂದ ಮತ್ತೊಂದು ಕೊನೆಯು ಹಿಡಿದು, ಮೊದಲು ಹಿಡಿವ ಕೊನೆಯು ಬಿಡುವಲ್ಲಿ, ಮೆಲ್ಲನೆ ಬಿಡುವುದು. ಸರ್ವ ಜೀವ ದಯಾ ಪಾರತ್ವಕ್ಕೆ ಹೆಚ್ಚು ಕಡಿಮೆ ಇಲ್ಲದೆ ಒಂದೇ ಸಮವಾಗಿ ಚರಪ್ರಾಣಿಗಳಲ್ಲಿರ್ದ ದಯವೇ ಅಚರ ಪ್ರಾಣಿಗಳಲ್ಲಿ ಹಿಡಿವ ಬಿಡುವ ಮೊನೆಗಳಲ್ಲೆಲ್ಲ ಇರಬೇಕು. ಇಂತೀ ಸರ್ವ ಜೀವ ದಯಾಪಾರತ್ವ ಸಂಭ್ರಮವನುಳ್ಳ ನೆನಹೇ ಲಿಂಗದಲ್ಲಿ ಸಮರಸವಾಗುವ ಶ್ರದ್ಧೆಯಾಗಿಪ್ಪುದೆಂಬರ್ಥ.

---

## ಸಮಾಧಾನಿಯಾಗಿರು.

೧. ದೊರೆಕೊಂಡಂತೆ ಮನದಣಿದಿಪ್ಪವರ, ದುಃಖಕ್ಕೆ ದೂರಾಗಿಪ್ಪವರ, ಒಳಗನರಿದು ಹೊರಗೆ ಮರೆದವರ, ಸದಾನಂದದಲ್ಲಿ ಸುಖಿಯಾಗಿಪ್ಪವರ ಎನಗೊಮ್ಮೆ ತೋರಾ, ಸಕಳೇಶ್ವರ ದೇವಾ. ಎನಗಿದೇ ವರವನೀವುದು ಕಂಡ್ಯಾ ತಂದೆ.

೨. ಆರೇನೆಂದರೂ ಓರಂತಿಪ್ಪುದೇ ಸಮತೆ. ಆರು ಜರಿದರೂ, ಅವರೆನ್ನ ಮನದ ಕಾಳಿಕೆಯ ಕಳೆದರೆಂಬುದೇ ಸಮತೆ. ಆರು ಸ್ತೋತ್ರವ ಮಾಡಿಹರೆನ್ನ ಜನ್ಮದ ಹಗೆಗಳೆಂಬುದೇ ಸಮತೆ. ಇಂತಿದು ಗುರುಕಾರುಣ್ಯ. ಮನ ವಚನ ಕಾಯದಲ್ಲಿ ಅಹಿತವಿಲ್ಲದೆ ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ, ನಿಮ್ಮವರ ನೀನೆಂಬುದೇ ಸಮತೆ.

೩. ಅವನಾಗಿ ಒಬ್ಬನು ನಿಡುಮುಳ್ಳಿನ ಮೇಲೆ ಪೊರಳ್ಳುಗೆಯ. ಮೇಣು ಪಾಂಸೆಯ ಹಾಸಿನ ಮೇಲೆ ಪೊರಳ್ಳುಗೆಯು. ಮೊರಳ್ಕ

ದೊಡೆ ಮನ ವಿಸ್ಕಂದವಾಗದೊಂದೀಯುಂವದಲ್ಲಿಪ್ಪಂತಪ್ಪ ನಿಮ್ಮದೊಂದು ಸಮತಾಗುಣ ಎನ್ನನೆಂದು ಪೊರ್ದಿಪ್ಪುದು ಹೇಳಾ ಕಪಿಲಸಿದ್ಧಮಲ್ಲಿಕಾರ್ಜುನಾ?

೪. ಆವನಾಗಿ ಒಬ್ಬನು ಅವಿಚಾರದಿಂದ ಶಿರಸ್ಸಿನ ಮೇಲೆ ಕ್ಕೈದುವ ನಿಕ್ಕುಗೆಯು. ಮೇಣು ಗಂಧಾಕ್ಷತೆಯು ಪುಷ್ಪದಲ್ಲಿ ಪೂಜೆ ಮಾಡುಗೆಯು. ಪೂಜೆ ಮಾಡಿದೊಡೆ ಮನ ವಿಸ್ಕಂದವಾಗದೊಂದೀಯುಂವದಲ್ಲಿಪ್ಪಂತಪ್ಪ ನಿಮ್ಮದೊಂದು ಸಮತಾಗುಣ ಎನ್ನನೇಂದು ಬಂದು ಪೊರ್ದಿಪ್ಪುದು ಹೇಳಾ ಕಪಿಲಸಿದ್ಧ ಮಲ್ಲಿಕಾರ್ಜುನಾ?

೫. ಆವನಾಗಿ ಒಬ್ಬನು ಕರನ ಪಿಡಿದು ಒಡಗೊಂಡೊಯ್ದು ಒಪ್ಪಿತ್ತನಾದಡೂ ನೀಡುಗೆಯು. ಮೇಣು ಮಣ್ಣಾನಾದಡೂ ನೀಡುಗೆಯ. ನೀಡಿದೊಡೆ ಮನವಿಸ್ಕಂದವಾಗದೊಂದೀಯುಂದದಲ್ಲಿಪ್ಪಂತಪ್ಪ ನಿಮ್ಮದೊಂದು ಸಮತಾಗುಣ ಎನ್ನನೇಂದು ಬಂದು ಪೊಂದಿಪ್ಪುದು ಹೇಳಾ ಕಪಿಲಸಿದ್ಧ ಮಲ್ಲಿಕಾರ್ಜುನಾ?

೬. ಸಿರಿಯಾಯಿತ್ತೆಂದು ಉಚ್ಚಹದಿಂದುಬ್ಬದೆ, ಕೆಟ್ಟಿತೆಂದು ಮನನೊಂದು ಭಿನ್ನವಾದಂತಿರಬೇಡಾ ಹಿರಿಯರ ಮನ. ಮನ ವಿಸ್ಕಂದವಾಗದೊಂದೀಯುಂವದಲ್ಲಿಪ್ಪಂತಪ್ಪ ನಿಮ್ಮದೊಂದು ಸಮತಾಗುಣ ಎನ್ನನೆಂದು ಬಂದು ಪೊಂದಿಪ್ಪುದು ಹೇಳಾ ಕಪಿಲ ಸಿದ್ಧಮಲ್ಲಿಕಾರ್ಜುನಾ?

೭. ಇಂದಿಂಗೆಂದು ನಾಳಿಂಗೆಂದು ಚಿಂತಿಸಲೇಕೆ? ತಂದಿಕ್ಕುವ ಶಿವಂಗೆ ಬಡತನವೇ ರಾಮನಾಥಾ?

೮. ತಮ ತಮಗೆ ಸಮತೆಯ ಹೇಳಬಹುದಲ್ಲದೆ, ತಮ ತಮಗೆ ಸಮತೆಯ ನುಡಿಯ ಬಹುದಲ್ಲದೆ ಕನಲಿಕೆಯ ಕಳೆದಿಪ್ಪರಾರು ಹೇಳಾ? ಒಬ್ಬರನೊಬ್ಬರು ಹಳಿಯದಿಪ್ಪವರಾರು ಹೇಳಾ? ಮುನಿಸು ಮುಂದಿಟ್ಟಿಪ್ಪರು. ಇದು ಯೋಗಿ ಮಹಾಯೋಗಿಗಳಿಗರಿದಪ್ಪುದು ನೋಡಾ. ಸಕಳೇಶ್ವರ ದೇವಾ, ನೀ ಕರುಣಿಸಿದವರಿಗಲ್ಲದಿಲ್ಲ.

೯. ರೂಪು ಕುರೂಪು ವಿಕಾರಂಗಳು ಮುಕುರವ ನೋಡುವರ ಗುಣವಲ್ಲದೆ, ಮುಕುರಕ್ಕೆ ವಿಕಾರಗುಣ ಉಂಟೇ? ಪಾಪಿಗಳು ಕೋಪಿಗಳು ಪರಿಭ್ರಷ್ಟರು ದುರ್ವಿಕಾರಿಗಳು ತಮ್ಮ ತಮ್ಮ ಗುಣವಂತೆ ತಿಳಿದು ಮಾಡಿದರು. ಬಿತ್ತಿದ ಬೆಳೆಯನುಂಬಂತೆ, ನಿಂದಿಸಿದವರು ಪಾಪದ ಫಲವನನುಭವಿಸುವರು. ಸ್ತುತಿಸಿದವರು ಪುಣ್ಯದ ಫಲವನನುಭವಿಸುವರು. ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ ನಿಮ್ಮ ಸತ್ಯ ಶರಣ ನಿತ್ಯ ಮುಕ್ತಂಗೆ ನಿಂದೆ ಸ್ತುತಿ ಎಂಬುದರಿದು. ಇಹ ಪರ ಭೋಗಂಗಳ ಹೇಯೋಪಾಯದಿಂದ ತೊಲಗಿಸುವದೇ ವೈರಾಗ್ಯ. ಇದು ಕಾರಣ ವೈರಾಗ್ಯವುಳ್ಳವನೇ ಸದ್ಯೋನ್ಮುಕ್ತನಯ್ಯ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ.

## ಸಿಟ್ಟಾಗಬೇಡ.

೧. ತನಗೆ ಮುನಿವರಿಗೆ ತಾ ಮುನಿಯಲೇಕಯ್ಯ? ಅವರಿಗಾದೊಡೆಗೇನು? ತನಗಾದೊಡೆಗೇನು? ತನುವಿನ ಕೋಪ ತನ್ನ ಹಿರಿಯತನದ ಕೇಡು. ಮನದ ಕೋಪ ತನ್ನ ಅರುವಿನ ಕೇಡು. ಮನೆಯೊಳಗಣ ಕಿಚ್ಚು ಮನೆಯ ಸುಟ್ಟಲ್ಲದೆ, ನೆರೆಮನೆ ಬೇವುದೇ ಕೂಡಲಸಂಗಮದೇವಾ?

೨. ಕಾಣದ ಠಾವಿನಲ್ಲಿ ಜರಿದೊಡೆ ಕೇಳಿ ಪರಿಣಾಮಿಸಬೇಕು. ಅದೇನು ಕಾರಣ? ಕೊಳ್ಳದೆ ಕೊಡದೆ, ಅವರಿಗೆ ಸಂತೋಷವಹುದಾಗಿ. ಎನ್ನ ಮನದ ತದ್ವೇಷವಳಿದು, ನಿಮ್ಮ ಶರಣರಿಗೆ ಶರಣೆಂಬುದ ಕರುಣಿಸು, ಕೂಡಲಸಂಗಮದೇವಾ.

೩. ಬೆಟ್ಟದ ಮೇಲೊಂದು ಮನೆಯ ಮಾಡಿ, ಮೃಗಂಗಳಿಗಂಜಿದೊಡೆಂತಯ್ಯ? ಸಮುದ್ರದ ತಡೆಯಲ್ಲಿ ಮನೆಯ ಮಾಡಿ

ನೊರೆ ತೆರೆಗಳಿಗಂಜಿದೊಡೆಂತಯ್ಯಾ? ಸಂತೆಯೊಳಗೊಂದು ಮನೆಯ ಮಾಡಿ ಶಬ್ದಕ್ಕೆ ನಾಚಿದೊಡೆಂತಯ್ಯಾ? ಚನ್ನಮಲ್ಲಿಕಾರ್ಜುನ ಕೇಳಯ್ಯಾ! ಲೋಕದೊಳಗೆ ಹುಟ್ಟಿರ್ದ ಬಳಿಕ, ಸ್ತುತಿ ನಿಂದೆಗಳು ಬಂದೊಡೆ ಮನದಲ್ಲಿ ಕೋಪವ ತಾಳದೆ, ಸಮಾಧಾನಿಯಾಗಿರಬೇಕು.

೪. ಲೋಕ ಒಂದನೆಂದೊಡೆ, ತಾನೊಂದನೆನಬೇಡ. ಮತ್ತಾರನೆಂದೊಡೆಯೂ, ತನ್ನನೆಂದರೆನಬೇಡ. ಇದನರಿದು, ಛತ್ರಕ್ಕೆ ಬೆಂಗುಂಡ ನಿಕ್ಕಿದಂತಿರಬೇಕು ಹಿರಿಯರು ಗುಹೇಶ್ವರಾ.

೫. ಮನಕ್ಕೆ ನಾಚದ ವಚನ, ವಚನಕ್ಕೆ ನಾಚದ ಮನ. ಕುಂದು ಹೆಚ್ಚು ನುಡಿವೆ. ಒಂದು ಮಾತಿನ ಗೆಲಕ್ಕೆ ಹಿಡಿದು ಹೋರುವೆ. ಕೂಡಲಸಂಗನ ಶರಣರು ಎನ್ನಾಳ್ದರೆಂಬೆ.

---

## ಸೈರಣೆಯುಳ್ಳವನಾಗಿರು.

೧. ಹೊಯಿದವರೆನ್ನ ಹೊರೆದವರೆಂಬೆನು. ಬೈದವರೆನ್ನ ಬಂಧುಗಳೆಂಬೆನು. ನಿಂದಿಸಿದವರೆನ್ನ ತಾಯಿತಂದೆಗಳೆಂಬೆನು. ಆಳಿಗೊಂಡವರು ಆಪ್ತರೆಂಬೆ. ಜರಿದವರೆನ್ನ ಜನ್ಮ ಬಂಧುಗಳೆಂಬೆ. ಕೊಂಡಾಡಿದವರೆನ್ನ ಹೊನ್ನಶೂಲದಲಿಕ್ಕಿದವರು ಕೂಡಲ ಸಂಗಮದೇವಾ.

೨. ಇರಿಸಿಕೊಂಡು ಭಕ್ತರಾದರೆನ್ನುವರು. ತರಿಸಿಕೊಂಡು ಭಕ್ತರಾದರೆನ್ನುವರು. ಕೊರಿಸಿಕೊಂಡು ಭಕ್ತರಾದರೆನ್ನುವರು. ಜರಿಸಿಕೊಂಡು ಭಕ್ತರಾದರೆನ್ನುವರು. ಕೂಡಲಸಂಗನ ಶರಣರಿಗೆ ಮುನಿಸ ತಾಳಿ, ಎನ್ನ ಭಕ್ತಿಯುರಿಯಾಯಿತ್ತು.

೩. ಚಂದನವ ಕಡಿದು, ಕೊರದು ತೇದೊಡೆ, ನೊಂದೆನೆಂದು ಕಂಪ ಬಿಟ್ಟಿತ್ತೇ? ತಂದು ಸುವರ್ಣವ, ಕಡಿದೊರೆದೊಡೆ ಬೆಂದು ಕಳಂಕ

ಹಿಡಿದಿತ್ತೇ? ಸಂದು ಸಂದು ಕಡಿದ ಕಬ್ಬುವ ತಂದು, ಗಾಣವಲಿಕ್ಕಿ, ಬೆಂದು, ಪಾಕಾಗುಳ್ಳ ಸಕ್ಕರೆಯಾಗಿ, ನೊಂದೆನೆಂದು ಸವಿಯು ಬಿಟ್ಟಿತ್ತೇ? ನಾ ಹಿಂದೆ ಮಾಡಿದ ಹೀನಂಗಳೆಲ್ಲವ ತಂದು ಮುಂದಿಳುಹಲು, ಹಾಸಿಯೋ? ಎನ್ನ ತಂದೆ ಚನ್ನಮಲ್ಲಿಕಾರ್ಜುನ ದೇವಯ್ಯಾ ಕೊಂದೊಡೆ, ಶರಣೆಂಬುದ ಮಾಣೆ.

೪. ಇದಿರೆನ್ನ ಹಳಿವರು ನುಡಿಯ ಬೆಳಗುವರು. ಮನದ ಕಾಳಿಕೆಯ ಕಳೆವರೆನ್ನ ನಂಟರು. ದುರಾಚಾರದಲ್ಲಿ ನಡೆವರು ಕನ್ನಡಿ ಎನಗೆ. ಹ್ಯೇಯೋಪಾಯವ ತೋರುವರು. ಇದುಕಾರಣ ಅನ್ಯದೇಶಕ್ಕೆ ಹೋಗಲೊಲ್ಲೆ. ಸಕಳೇಶ್ವರ ದೇವರ ತೋರುವರೊಳರಿಲ್ಲಿಯೋ.

೫. ಒಂದಾಗಿಹವೈದು ಭೂತ. ಚಂದ್ರ, ಸೂರ್ಯ, ನಂದಿವಾಹನ ನಿಮ್ಮ ತನುವಲ್ಲವೇ? ನಿಂದು ನೋಡಲು. ಜಗಭರಿತನಾಗಿಪ್ಪೆ. ಇನ್ನು ನೋಯಿಸುವೆನಾರನಯ್ಯಾ ರಾಮನಾಥಾ?

## ನೀತಿಯ ಸಾಮಾನ್ಯ ವಚನಗಳು.

### ಭಾಗ ೨

೧. ಭಕ್ತನು ಶಾಂತನಾಗಿರಬೇಕು. ತನ್ನ ಕುರಿತು ಬಂದ ಕಾವಿನಲ್ಲಿ ಸತ್ಯನಾಗಿರಬೇಕು. ಭೂತಹಿತವಹ ವಚನವ ನುಡಿಯಬೇಕು. ಸಕಲ ಪ್ರಾಣಿಗಳ ತನ್ನಂತೆ ಭಾವಿಸುವುದು. ಅಪಾತ್ರದಾನವ ಮಾಡಲಾಗದು. ಸಕಲೇಂದ್ರಿಯಂಗಳ ತನ್ನ ವಶವ ಮಾಡುವುದು. ಇದೇ ಮೊದಲಲ್ಲಿ ಬೇಹ ಶೌಚ ನೋಡಾ. ಲಿಂಗವ ಪೂಜಿಸಿ ಪ್ರಸಾದವ ಪಡೆವಡೆ, ಇದೇ ಸಾಧನ ಕೂಡಲ ಚನ್ನಸಂಗಮದೇವಾ.

೨. ಕ್ರಿಯೆಯುಲ್ಲಿ ಬಲ್ಲಿದರು, ಜ್ಞಾನದಲ್ಲಿ ಸಂಪನ್ನರೆಂದು ಹೇಳಲೇತಕೋ? ನಡೆನುಡಿಯುಲ್ಲಿ ಕಾಣಬಹುದು. ನಡೆನುಡಿ ಶುದ್ಧವಿಲ್ಲದವರಲ್ಲಿ ಇರಲೊಲ್ಲನು ನೋಡಾ ಅಖಂಡೇಶ್ವರಾ.

೩. ನಿಜವರಿಯುದ ಶರಣರು ಲಿಂಗೈಕ್ಯರು ಗಿರಿಗಂಹರದಲ್ಲಿದ್ದು ಫಲವೇನು? ಮನವು ಲೇಸಾದೊಡೆ ಸಾಲದೆ? ಮನವು ಲೇಸಾಗಿ ಪರಮಸುಖಿಯಾಗಿಪ್ಪ ಶರಣನ ಹೃದಯದಲ್ಲಿ ಸದಾ ಸನ್ನಿಹಿತ ಸಕಳೇಶ್ವರದೇವಾ.

೪. ಸ್ಥಾವರವೆಂತಂತು ಮನದಲ್ಲಿ ಭಾವಿಸಿ, ಸಕಲ ಜೀವರಲ್ಲಿ ನಿಂದೆಯು ಮಾಣ್ಬುದು. ಬಂದುದು ಲಿಂಗಾಧೀನವೆಂದು ಕಾಣ್ಬುದು. ಸತ್ಯವ ನುಡಿವುದು, ಶುಚಿಯಾಗಿರ್ಪುದು. ಎರಡು ವಿಡಿಯುದೆ, ಎರಡು ನಡೆಯುದೆ, ಮುನ್ನಿಯು ಪುರಾತನರು ಕೂಡಿದ ಪಥವಿದು, ಸಕಳೇಶ್ವರದೇವರ ನೊಲಿಸಿಹೆನೆಂಬುವಂಗೆ.

೫. ಪ್ರಾಣಲಿಂಗವೆಂಬುದೊಂದು ಮಾತಿನಂತುಟಲ್ಲ, ನೋಡಾ. ಲೋಕದ ಸುಖದುಃಖ ತನ್ನದೆನ್ನಕ್ಕ, ಚನ್ನಸಿದ್ಧನಾಥನೆಂಬ ಲಿಂಗ ಬರಿದೆ ಒಲಿವನೇ?

೬. ಕೊಲ್ಲೆನಯ್ಯ! ಪ್ರಾಣಿಗಳ ಮೆಲ್ಲೆನಯ್ಯ ಬಾಯಿಚ್ಛೆಗೆ! ಒಲ್ಲೆನಯ್ಯ. ಪರಸತಿಯರ ಸಂಗವ ಒಲ್ಲೆನಯ್ಯ, ಮುಂದೆ ತೊಡಕುಂಟೆಂಬುದರಿಂದ. ಬಳ್ಳದ ಬಾಯಂತೆ, ಒಂದೇ ಮನವ ಮಾಡಿ, ನಿಲ್ಲೆಂದು ನಿಲ್ಲಿಸಯ್ಯ ಕೂಡಲಸಂಗಮದೇವಾ.

೭. ದಯುವಿರಬೇಕು ಸಕಲ ಪ್ರಾಣಿಗಳಲ್ಲಿ. ಸ್ವಯುವಿರಬೇಕು ಸಕಲಗುಣಗಳಲ್ಲಿ. ನಯುವಿರಬೇಕು ನುಡಿಗಡಣದಲ್ಲಿ. ಇಂತೀ ಗುಣವಿಲ್ಲದವರ ಕಂಡೊಡೆ, ಸೊಗಸದಯ್ಯ ಎನಗೆ ಅಖಂಡೇಶ್ವರಾ.

೮. ಬೇಕೆಂಬುವನಲ್ಲಯ್ಯ ನಿಮ್ಮ ಶರಣ. ಬೇಡೆಂಬುವನಲ್ಲಯ್ಯ ನಿಮ್ಮ ಶರಣ. ಲೋಕದ ನಡೆಯುಂತೆ ನಡೆಯುನಯ್ಯ ನಿಮ್ಮ

ಶರಣ. ಲೋಕದ ನುಡಿಯಂತೆ ನುಡಿಯನಯ್ಯ ನಿಮ್ಮ ಶರಣ. ಕಾಕು, ಸಟೆ, ಕುಟಿಲ, ಕುಹಕ, ವ್ಯಾಪಾರವ ಹೊರನಯ್ಯ ನಿಮ್ಮ ಶರಣ ಅಖಂಡೇಶ್ವರಾ.

೯. ಶೀಲ ಶೀಲವೆಂದು ಗರ್ವಿಸಿ ನುಡಿವುತಿರ್ಪಿರಿ. ಶೀಲವಾವುದೆಂದರಿಯಿರಿ. ಕೇಳಿರಣ್ಣಾ. ಇದ್ದುದ ವಂಚನೆಯ ಮಾಡದಿರ್ಪುದೇ ಶೀಲ. ಇಲ್ಲದುದಕೆ ಕಡನ ಮಾಡದಿರ್ಪುದೇ ಶೀಲ. ಪರಧನ ಪರಸ್ತ್ರೀಯರ ಮುಟ್ಟದಿರ್ಪುದೇ ಶೀಲ. ಪರದೈವ ಪರಸಮಯಕ್ಕೆ ಅಳುಪದಿರ್ಪುದೇ ಶೀಲ. ನಮ್ಮ ಕೂಡಲ ಚನ್ನಸಂಗನ ಶರಣರ ಬರವಿಂಗೆ ಮೈಯ್ಯಾಂತುದೇ ಅಚ್ಚಶೀಲ.

೧೦. ಆಚಾರವನರಿಯದೆ, ವಿಭವವಳಿಯದೆ, ಕೋಪವಡಗದೆ, ತಾಪ ಮುರಿಯದೆ ಬರಿದೆ ಭಕ್ತರಾದೆವೆಂಬ ಬೆಬ್ಬನೆ ಬೆರೆವರ ಕೇಡಿಂಗೆ ನಾನು ಮರುಗುವೆ ಕಾಣಾ ಗುಹೇಶ್ವರಾ.

೧೧. ಅರ್ಚನೆಯ ಮಾಡುವಲ್ಲಿ ವೇಷವರತಿರಬೇಕು ಪೂಜೆಯ ಮಾಡುವಲ್ಲಿ ಪುಣ್ಯ ಮೂರ್ತಿಯಾಗಿರಬೇಕು. ಇಂತೀ ಸಡಗರಿಸಿಕೊಂಡಿಪ್ಪಾತನಡಿಗೆರಗುವೆನೆಂದಾತ ನಂಬಿಗ ಚೌಡಯ್ಯ.

೧೨. ಅಂಗವೇ ಭೂಮಿಯಾಗಿ, ಲಿಂಗವೇ ಬೆಳೆಯಾಗಿ, ವಿಶ್ವಾಸವೆಂಬ ಬಿತ್ತು ಬಲಿದು, ಉಂಡು ಸುಖಿಯಾಗಿರಬೇಕೆಂದ ಕಾಮಭೀಮ ಜೀವದನದೊಡೆಯಾ.

೧೩. ತನುವೆಂಬ ಏರಿಗೆ ಮನವೆಂಬ ಕಟ್ಟೆ, ಆಚಾರವೆಂಬ ಸೋಪಾನ, ಪರಮಾನಂದವೆಂಬ ಜಲವ ತುಂಬಿ. ಕೆರೆಯ ಕಟ್ಟ ಬಲ್ಲವರನಾರನೂ ಕಾಣೆ. ನಾನು ಕಟ್ಟಿದ ಕೆರೆ ಸ್ಥಿರವಾಯಿತ್ತು ಗುಹೇಶ್ವರಾ ನಿಮ್ಮಾಣೆ.

೧೪. ತಾನು ಒಳ್ಳೆಯವನಾದರೆ ತನಗೆ ಎಲ್ಲರೂ ಒಳ್ಳೆಯವರಾಗಿಪ್ಪರು. ತಾ ಹೀನನಾದರೆ, ತನಗೆ ಸರ್ವರೂ ಹೀನರಾಗಿರ್ಪರು

ತಾನು ಒಳ್ಳಿಯವನಾಗಿ ಸರ್ವರೂ ಹೀನರಾದರೆ, ಅದು ತನ್ನ ಪೂರ್ವದ ಕರ್ಮ. ತಾ ಹೀನನಾಗಿ, ತನಗೆ ಸರ್ವರೂ ಒಳ್ಳಿಯುವರಾದರೆ, ಅದು ತನ್ನ ದೈವದ ಬಲವು ನೋಡಾ ಅಖಂಡೇಶ್ವರಾ.

---

## ನಿಷ್ಕಪಟಿಯಾಗಿರು.

೧. ಎನ್ನ ನಡೆಯೊಂದು ಪರಿ. ಎನ್ನೊಳಗೇನೂ ಶುದ್ಧವಿಲ್ಲ ನೋಡಯ್ಯಾ. ನುಡಿಗೆ ತಕ್ಕ ನಡೆ ಕಂಡರೆ, ಕೂಡಲ ಸಂಗಮದೇವ ನಿಮ್ಮೊಳಗಿಪ್ಪನಯ್ಯಾ.

೨. ಎರಡೆಲೆಯಂತೆ ಒಳಗೊಂದು ಹೊರಗೊಂದಾದರೆ, ಮೆಚ್ಚುವನೇ ಶಿವನು? ಬಾರದ ಭವಂಗಳಲ್ಲಿ ಬರಿಸುವನಲ್ಲದೆ, ಮೆಚ್ಚುವನೇ? ಅಘೋರನರಕವನುಣಿಸುವನಲ್ಲದೆ ಮೆಚ್ಚುವನೇ? ಉಡುಹಿನ ನಾಲಿಗೆಯಂತೆ ಎರಡಾದರೆ, ಕೂಡಲಸಂಗಯ್ಯ ಮೆಚ್ಚುವನೇ?

೩. ಒಲಿಯು ಬೂದಿಯು ಬಳಿಯಲುಬೇಡ. ಒಲಿಯಂತೆ ಹೂಸಿಕೊಂಡಿಪ್ಪುದು ಹುಸಿ. ಏನು ಫಲ, ಮನದಲ್ಲಿ ಲೇಸಿಲ್ಲದನ್ನಕ್ಕರ? ಒಂದ ನಾಡ ಹೋಗಿ ಒಂಭತ್ತನಾಡುವ ಡಂಭಕರ ಮೆಚ್ಚ ಕೂಡಲ ಸಂಗಮದೇವ.

೪. ಹುತ್ತವ ಬಡಿದರೆ. ಹಾವು ಸಾಯಬಲ್ಲುದೇನಯ್ಯಾ? ಅಘೋರ ತಪವ ಮಾಡಿದಡೇನು? ಅಂತರಂಗ ಆತ್ಮಶುದ್ಧವಿಲ್ಲದವರನೆಂತು ನಂಬುವನಯ್ಯಾ ಕೂಡಲ ಸಂಗಮದೇವಾ?

೫. ಭಕ್ತಿ ಎಳ್ಳನಿತಿಲ್ಲ, ಯುಕ್ತಿ ಶೂನ್ಯನಯ್ಯಾ ನಾನು. ತನುವಂಚಕ ಮನವಂಚಕ ಧನವಂಚಕ ನಾನಯ್ಯಾ. ಕೂಡಲ ಸಂಗಮದೇವಾ, ಮುಳಲೊಟ್ಟಲೆನ್ನ ಮಾತು.

೬. ಕಳ್ಳಗಂಜಿ ಕಾಡ ಹೊಕ್ಕರೆ, ಹುಲಿ ತಿಂಬುದ ಮಾಬುದೇ? ಹುಲಿಗಂಜಿ ಹುತ್ತವ ಹೊಕ್ಕರೆ, ಸರ್ಪ ತಿಂಬುದ ಮಾಬುದೆ? ಕಾಲಗಂಜಿ ಭಕ್ತನಾದರೆ ಕರ್ಮ ತಿಂಬುದ ಮಾಬುದೇ? ಮೃತ್ಯುವಿನ ಬಾಯ ತುತ್ತಾದ ವೇಷಡಂಭಕರ ನೇನೆಂಜೆ ಗುಹೇಶ್ವರಾ?

೭. ವೇಷ ಎಲ್ಲಿರದು? ಸೂಳೆಯಲ್ಲಿ. ಡೊಂಬನಲ್ಲಿ ಬಹು ರೂಪಿಯಲ್ಲಿ ಇರದೆ? ವೇಷವ ತೋರಿ, ಒಡಲ ಹೊರೆವ ದಾಸಿ ವೇಶಿಯ ಮಕ್ಕಳಿಗೆ ನಿಜಭಕ್ತಿ ಎಲ್ಲಿಯದೋ, ಆಚಾರವೇ ಪ್ರಾಣವಾದ ರಾಮೇಶ್ವರ ಲಿಂಗದಲ್ಲಿ?

೮. ಶ್ವಾನಂಗೆ ಪೃಷ್ಠದಲ್ಲಿ ಬಾಲ, ಉಪಾಧಿಕಂಗೆ ಬಾಯಲ್ಲಿ ಬಾಲ, ನೋಡಾ. ಮಮಕಾರವೆಂಬ ನಾಯಿ ಎದ್ದು ಮರುಗಲು, ನಾಲಿಗೆ ಎಂಬ ಬಾಲ ಬಡಿವುತ್ತಿದೆ ನೋಡಾ. ಒಡಲ ಉಪಾಧಿಗೆ ಉಪಚಾರವ ನುಡಿವ ವಿರಕ್ತನ ನಾಲಿಗೆ ನಾಯ ಬಾಲಿಗಿಂತ ಕರಕಷ್ಟ ನೋಡಾ. ಪರಮಾರ್ಥ ಪದದಲ್ಲಿ ಪರಿಣಾಮಿಯಾದವನ ಬಾಯಲ್ಲಿ ಪ್ರಪಂಚುಂಟೇ ಹೇಳಾ ಮಹಾಲಿಂಗ ಗುರು ಶಿವಸಿದ್ಧೇಶ್ವರ ಪ್ರಭುವೇ?

## ದುರಾಶೆಯುಳ್ಳವನಾಗಬೇಡ.

೧. ಧರೆ ದೆಸೆವಳಯವೆಲ್ಲ ತನಗಾದೊಡಂ ನಿಲ್ಲಳು. ಇನಿತು ತ್ರಿಭುವನ ರಾಜ್ಯಪದಂಗಳು ತನಗಾದೊಡೆಯೂ ನಿಲ್ಲಳು. ಅನಿತರೊಳು ತೃಪ್ತಿವಡೆಯಳು. ಈ ಆಶೆ ಎಂಬ ಪಾತಕಿಯನೆಂದಿಂಗೆ ನೀಗಿ, ನಿಮ್ಮನೊಡಗೂಡಿ ಜೇರಾಗದೆಂದಿಪ್ಪೆನೋ ಕಪಿಲ ಸಿದ್ಧ ಮಲ್ಲಿಕಾರ್ಜುನಾ?

೨. ತೆರಣಿಯ ಹುಳು ತನ್ನ ಸ್ನೇಹದಿಂದ ಮನೆಯ ಮಾಡಿ, ತನ್ನ ನೂಲು ತನ್ನನೇ ಸುತ್ತಿ ಸಾವ ತೆರನಂತೆ, ಮನ ಬಂದುದ ಬಯಸಿ

ಬೇವುತ್ತಿರುವೆನಯ್ಯಾ! ಎನ್ನ ಮನದ ದುರಾಶೆಯ ಮಾಣಿಸಿ, ನಿಮ್ಮತ್ತ ತೋರಾ ಚನ್ನಮಲ್ಲಿಕಾರ್ಜುನಾ.

೩. ಆಶೆ ಎಂಬವಳು ಆರನಾದಡೆಯೂ ತನ್ನತ್ತ ಲೆಳೆವಳು ನೋಡಾ. ಈಯಾಶೆ ಎಂಬವಳು ಅವರಿವರೆನ್ನದೆ, ಆರನಾದಡೆಯೂ ಕೊಲಲಿಕ್ಕೆ ಬಗೆವಳು. ಈ ಆಶೆ ಎಂಬವಳಿಂದಲೇ ನಿಮ್ಮೆಡೆಗಾಣ ದಿಪ್ಪೆ ಈ ಆಶೆ ಎಂಬವಳ ಎಂದಿಂಗೆ ನೀಗಿ ಎಂದು ನಿಮ್ಮೊಡಗೂಡಿ, ಬೇರಾಗದೆಂದಿಪ್ಪೆನೋ ಕಪಿಲ ಸಿದ್ಧಮಲ್ಲಿಕಾರ್ಜುನಯ್ಯಾ.

೪. ಆಶೆಯುಳ್ಳಾತ ಒಬ್ಬರಾಧೀನದಲ್ಲಿಪ್ಪನು. ಆಶೆಯ ಮನದ ಕೊನೆಯ ನರಿದಾತ ಕೈಲಾಸದಾಚೆಯಲ್ಲಿಪ್ಪನೆಂದಾತ ನಮ್ಮ ಅಂಬಿಗರ ಚೌಡಯ್ಯ.

೫. ಆಶೆಯುಳ್ಳನ್ನಕ್ಕರ ಒಬ್ಬರ ಆಶ್ರಯಿಸುವುದು. ಆಶ್ರಯದಾಶೆ ಕಷ್ಟ ಕಾಣಿರಯ್ಯಾ. ಆಶೆಯೇ ದಾಸತ್ವ, ನಿರಾಶೆಯೇ ಈಶತ್ವ. ದಾಸತ್ವದ ಈಶತ್ವದ ಅನುವ ವಿಚಾರಿಸಿ, ನಿರಾಶೆಯಾಗಿ ಪ್ಪುದೇ ಈಶಪದವಯ್ಯಾ ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವರಾ.

೬. ಹೊನ್ನು ಮಾಯೆ ಎಂಬರು, ಹೆಣ್ಣು ಮಾಯೆ ಎಂಬರು, ಮಣ್ಣು ಮಾಯೆ ಎಂಬರು. ಹೊನ್ನು ಮಾಯೆಯಲ್ಲ, ಹೆಣ್ಣು ಮಾಯೆಯಲ್ಲ, ಮಣ್ಣು ಮಾಯೆಯಲ್ಲ. ಮನದ ಮುಂದಣಾಶೆಯೇ ಮಾಯೆ ಕಾಣಾ ಗುಹೇಶ್ವರಾ.

೭. ಪರರಾಶೆ ಎಂಬ ಜ್ವರಹತ್ತಿ, ನಾನು ಕಳವಳಿಸಿ ನುಡಿವೆನಯ್ಯಾ! ಹೊನ್ನು, ಹೆಣ್ಣು, ಮಣ್ಣು, ಬಯಸಿ, ವಿಕಳತೆಗೊಂಡಂತೆ ಪ್ರಲಪಿಸುತ್ತ ನುಡಿವೆನಯ್ಯಾ! ಈ ಕಳವಳವ ನಿಲಿಸಿ. ನಿಮ್ಮ ಕರುಣಾಮೃತವೆಂಬ ಕಷಾಯವ ನೆರೆದು, ಪರರಾಶೆ ಎಂಬ ಜ್ವರವ ಮಾಣಿಸು, ಬಸವಪ್ರಿಯ ಕೂಡಲಚನ್ನಸಂಗಮದೇವಾ.

೮. ಕಣ್ಣಿನಲ್ಲಿ ಕಂಡು, ಮನದಲ್ಲಿ ಬಯಸಿ, ಬಣ್ಣಗುಂದಿ ಬಳಲುವರಯ್ಯ. ಬಂದರೆ ಹೆಚ್ಚಿ, ಬಾರದಿದ್ದರೆ ಕುಂದಲೇಕೆ? ಕುಂದಿದರೆ ಬಪ್ಪುದೆ? ಹಿರಿದು ಜರಿದು, ಕರಗಿ, ಕೊರಗಿ, ಕೋಡಿವರಿದು, ಬೆಂದು, ನಿಂಮರಿದು, ಕಡು ನೊಂದು ಭಂಗ ಬಡುತಿಪ್ಪರಯ್ಯ. ಒಂದು ನಿಮಿಷಾರ್ಧ ನಿಮ್ಮ ನೆನಹಿಲ್ಲ ನೋಡಾ! ಆಶೆ ಎಂಬ ಮಾಯಾ ಪಾಶದೊಳಗೆ ಸಿಕ್ಕಿ, ದೋಷ ದುರ್ಗುಣದಿಂದ ಬಿದ್ದುರುಳುವ ಪಾಶಬದ್ಧರ ಈಶಲಾಂಛನಧಾರಿಗಳೆಂತೆಂಬೆನಯ್ಯ, ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೆ?

೯. ಒಂದಾಶೆಯ ಕುರಿತು ಸರ್ವ ಮಾತಿಂಗೊಡಲಾಯಿತ್ತು. ಒಂದಾಶೆಯರತು ನಿಂದೊಡೆ, ಈಶ ಮೂರ್ತಿ ತಾನಾಗಿಪ್ಪ, ಇಂತೀ ಉಭಯದಾಶೆಯಲ್ಲಿ ಗಾಸಿಯಾಗುತ್ತ, ಮಾತಿನ ಮಾಲೆ ಬೇಡ. ಆಶೆಯ ಪಾಶಹರಿದು, ಈಷಣತ್ರಯವರತು, ನಿರ್ಜಾತನಾಗಿರ್ದಲ್ಲಿ, ಸದಾಶಿವ ಮೂರ್ತಿ ಲಿಂಗವು ತಾನೆ.

೧೦. ಕಾಯವೆಂಬ ಢಕ್ಕೆಯ ಮೇಲೆ, ಜೀವವೆಂಬ ಹಿಡಿಚಂಡು ಬೀಳೆ, ತ್ರಿವಿಧವ ತಾ, ತಾ, ಎಂಬಾಶೆ ಹಿಂ, ಡಿ, ಡಿಂ, ಡಿ, ಎನುತಿದ್ದೆ. ಇಂತೀ ಉಲುಹಿನ ಭೇದದಲ್ಲಿ ಹೊಲಬುದಪ್ಪದೆ ಗೆಲಬೇಕು ಕಾಲವೆಂಬ ಮಾರಿಯ, ಕಾಲಾಂತಕ ಭೀಮೇಶ್ವರ ಲಿಂಗವನರಿಯ ಬಲ್ಲಡೆ.

೧೧. ಬಂದುದ ಕಿರಿದು ಮಾಡಿ, ಬಾರದುದ ಹಿರಿದು ಮಾಡಿ ಆವಾಗ ಚಿಂತಿಸಿ ಬಳಲುತ್ತಿರಲೇಕೆ? ಇರುಹೆ ಆರು ತಿಂಗಳು ದವಸವ ಕೂಡಿ ಹಾಕುವಂತೆ, ತಾ ಕಿರಿದಾದಡೂ ಆಶೆ ಹಿರಿದಾಯಿತ್ತು. ಸ್ಥೂಲಕಾಯವಾದ ಮದಗಜಕ್ಕೇನು ಮುಂದೆ ಬೇಕೆಂಬ ಆಶೆಯುಂಟೇ? ಇಲ್ಲ. ಇರುಹೆಯು ಆನೆಯ ಅಂತರವ ನೋಡಿರಣ್ಣಾ. ಅರಿದು ಸಲಹುವ ಶಿವನಿದ್ದ ಹಾಗೆ, ಬರಿದೆ ಆಶೆಯಿಂದಲೇಕೆ ಸಾವಿರಿ, ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನಾಧೀನವರಿಯದೆ?

೧೨. ಶಿವಶಿವಾ ಈ ಸಂಸಾರದಂದುಗ ದುಃಖವನಾನೇತು ಪೇಳ್ವೆ? ಹೊನ್ನು ನಾನಾ ವ್ಯಾಪಾರವ ಮಾಡಿ ಧಾವತಿಯಿಂದ ಗಳಿಸುವ ದುಃಖ, ಆ ಹೊನ್ನು ಜೋಕೆ ಮಾಡುವ ದುಃಖ, ಆ ಹೊನ್ನು ಹೋದ ಮೇಲೆ ಅನೇಕ ದುಃಖ, ಹೆಣ್ಣು ತರುವದು ದುಃಖ, ಆ ಹೆಣ್ಣಾಳುವದು ದುಃಖ, ಆ ಹೆಣ್ಣು ಸತ್ತು ಹೋದ ಮೇಲೆ ಅನೇಕ ದುಃಖ, ಮಣ್ಣು ದೊರಕಿಸುವದು ದುಃಖ, ಆ ಮಣ್ಣಿನ ಧಾವತಿ ಹೋರಾಟ ಮಾಡುವದು ದುಃಖ, ಆ ಮಣ್ಣು ನಾಶವಾದ ಮೇಲೆ ಅನೇಕ ದುಃಖ, ಇಂತೀ ತ್ರಿವಿಧವು ಮುಲಸಮಾನವೆಂದರಿಯದೆ, ಹೊನ್ನೆನ್ನದು, ಹೆಣ್ಣೆನ್ನದು, ಮಣ್ಣೆನ್ನದು, ಎಂಬಿರಿ. ಎಲೆ ಹುಚ್ಚ ಮರುಳಮಾನವರಿರಾ, ನೀವು ಮರಣವಾದ ಮೇಲೆ ಅವು ನಿಮ್ಮ ಕೂಡ ಬರ್ಪವೆ? ಬರ್ಪುದಿಲ್ಲ. ಹೇಳಾ, ಎಲೆ ಹುಚ್ಚು ಮರುಳರಿರಾ, ಅವು ಆರ ಒಡವೆ ಎಂದೊಡೆ, ಬಲ್ಲರೆ ಹೇಳಿರಿ, ಅರಿಯದಿದ್ದರೆ ಕೇಳಿರಿ. ಹೊನ್ನು ರಾಜರದು, ಹೆಣ್ಣು ಅನ್ಯರದು, ಮಣ್ಣು ಬಲ್ಲಿದರದು. ಇಂತೀ ತ್ರಿವಿಧವು ಅನಿತ್ಯವೆಂದು ತನ್ನ ಸ್ವಾತ್ಮಜ್ಞಾನದಿಂ ತಿಳಿದೆಚ್ಚತ್ತು ವಿಸರ್ಜಿಸಿ, ಗುರುಕಾರುಣ್ಯಮಂ ಪಡೆದು ಲಿಂಗಾಂಗ ಸಂಬಂಧಿಯಾಗಿ ಗುರೂಪಾವಸ್ಥೆಯಂ ಮಾಡಿ ಮುಂದೆ ಮೋಕ್ಷದ ಹಾದಿಯು ಬೇಕೆಂಬ ಯುಕ್ತಿ ವಿವೇಕ ವಿಚಾರ ಬುದ್ಧಿಯನರಿಯದೆ ಅಶನಕ್ಕಾಗಿ ಮಣ್ಣು ಮೆಚ್ಚಿ, ವ್ಯಸನಕ್ಕಾಗಿ ಹೆಣ್ಣು ಮೆಚ್ಚಿ, ಅಂಗಸುಖಕ್ಕಾಗಿ ಹೊನ್ನು ಮೆಚ್ಚಿ, ಇಂತೀ ತ್ರಿವಿಧಾಶೆ ಆಮಿಷ ಮಮಕಾರದಿಂದ ಮನ ಮಗ್ನರಾಗಿ ಮತಿಗೆಟ್ಟು ಮುಂದುಗಾಣದೆ, ಸಟೆಯ ಸಂಸಾರದಲ್ಲಿ ಹೊಡೆದಾಡಿ, ಹೊತ್ತುಗಳೆದು ವ್ಯರ್ಥ ಸತ್ತು ಹೋಗುವ ಕತ್ತೆ ಸೂಳೆಯ ಮಕ್ಕಳ ಬಾಳ್ವೆ ಶುನಿ ಸೂಕರ ಕುಕ್ಕುಟನ ಬಾಳ್ವೆಗಿಂದತ್ತತ್ತ ಎಂದಾತ ನಿಮ್ಮ ಶರಣ ವೀರಾದಿ ವೀರ ಕಾಡಿನೊಳಗಾದ ಶಂಕರಪ್ರಿಯ ಚನ್ನ ಕದಂಬಲಿಂಗ ನಿರ್ಮಾಯ ಪ್ರಭುವೇ.

೧೩. ಆಶೆ ಎಂಬ ವೇಶಿ ಆರನಾದಡೂ ತನ್ನತ್ತ ಕರೆವಳು. ಈ ಆಶೆ ಆರನಾದಡೆಯೂ ಗಾಸಿಮಾಡಿ ತನುಮನವ ವ್ರಯವ ಮಾಡು

ವಳು. ಈ ಆಶೆಯು ವೇಶಿಗೆ ಒತ್ತೆಯು ಕೊಡದ ನಿರಾಶಿಗಳೆಂಬವರಾ ರನೂ ಕಾಣೆ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ.

## ದಾನವೂಡು.

೧. ಕಾಗೆ ಒಂದಗಳು ಕಂಡರೆ, ಕರೆಯದೇ ತನ್ನ ಬಳಗವನೆಲ್ಲ ಪನು? ಕೋಳಿ ಒಂದು ಗುಟುಕ ಕಂಡರೆ, ಕರೆಯದೇ ತನ್ನ ಕುಲವ ನೆಲ್ಲವನು? ಶಿವಭಕ್ತನಾಗಿ ಭಕ್ತಿ ಪಕ್ಷವಿಲ್ಲದಿದ್ದರೆ, ಕಾಗೆ ಕೋಳಿಗಿಂತ ಕರಕಷ್ಟ ಕೂಡಲ ಸಂಗಮದೇವ.

೨. ಒಡಲು, ಒಡವೆ, ಧರೆ ನಿನಗಾಯಿತ್ತೆಂದು ಉಣಲೊಲ್ಲ ದಿಪ್ಪ ಮರುಳು ಮಾನವಾ, ನೀನು ಕೇಳಾ. ಅಡವಿಯನೆ ಕೆಳೆಗೊಂಡು, ನೆಲದೊಳಗೆ ಬಚ್ಚಿಟ್ಟು, ಹೊಲಬುದಪ್ಪಿ ಭೂತಕ್ಕೆ ಕೊಡಲಿಲ್ಲವೆಯೋ? ಹಾಗಕ್ಕೆ ಹಾಗ ಗಳಿಸಿ ಆಗಾಯಿತ್ತೆಂದು ಉಣಲೊಲ್ಲದಿಪ್ಪ ಮರುಳೇ ಕೇಳು. ಇದನರಿದು ಕಲ್ಯಾಣದ ತ್ರಿಪುರಾಂತಕ ಲಿಂಗದಲ್ಲಿ ಗಾವುದಿ ಮಾಚಯ್ಯ ಹೇಳಿದುದ ಕೇಳು ಮಾನವಾ.

೩. ಎಂಬತ್ತು ನಾಲ್ಕು ಲಕ್ಷಮುಖದೊಳಗೊಂದೇ ಮುಖವಾಗಿ ಕಾಡಿ ನೋಡೆನ್ನನು. ಬೇಡಿ ನೋಡೆನ್ನನು. ಬೇಡದಿದ್ದರೆ, ಅಯ್ಯಾ ನಿಮಗೆ ಪ್ರಮಥರಾಣೆ. ನಿಮಗೆ ನೀವಾವ ಮುಖದಲ್ಲಿ ಬಂದು ಬೇಡಿ ದೊಡೆ, ಈವೆನು ಕೂಡಲ ಸಂಗಮದೇವಯ್ಯ.

೪. ತನುವ ಬೇಡಿದಡೀವೆ. ಮನವ ಬೇಡಿದಡೀವೆ. ಧನವ ಬೇಡಿದಡೀವೆ. ಬೇಡು ಬೇಡೆಲೆ ಹಂದೆ. ಕಣ್ಣು ಬೇಡಿದಡೀವೆ. ತಲೆಯ ಬೇಡಿದಡೀವೆ. ಕೂಡಲ ಸಂಗಮ ದೇವಾ, ನಿಮಗಿತ್ತು ಶುದ್ಧನಾಗಿಪ್ಪೆ ನಿಮ್ಮ ಪುರಾತನರ ಮನೆಯಲ್ಲಿ.

೫. ಅರ್ಥ ಪ್ರಾಣಾಭಿಮಾನವನೊಪ್ಪಿಸಿದಲ್ಲಿ, ಭಕ್ತನಪ್ಪನೇ? ಅಲ್ಲ. ಆದಿರುದ್ರನ ಮಗಳು ಆದಿಶಕ್ತಿ. ಈ ಆದಿಶಕ್ತಿಯ ಮಗ ವಿಷ್ಣು. ಆ ವಿಷ್ಣುವಿನ ಅರ್ಧಾಂಗಿ ಲಕ್ಷ್ಮಿ. ಈ ತೊತ್ತಿನ ತೊತ್ತಿನ ಪಡಿದೊತ್ತನೊಪ್ಪಿಸಿದಲ್ಲಿ ಭಕ್ತನಪ್ಪನೇ? ಅಲ್ಲ. ಎನ್ನ ಮನದೊಡೆಯ ಮಹಾದೇವ, ನಿಮ್ಮ ಸೊಮ್ಮ ನಿಮಗೊಪ್ಪಿಸಿ, ನಾನು ಶುದ್ಧನಪ್ಪೆ ಕಾಣಾ ಕೂಡಲ ಸಂಗಮದೇವಾ.

೬. ಹತ್ತು ಮತ್ತರ ಭೂಮಿ, ಐತ್ತುವ ಹಯನ, ನಂದಾದೀವಿಗೆಯ ನಡಿಸಿಹೆನೆಂಬವರ ಮುಖವ ನೋಡಲಾಗದು. ಅವರ ನುಡಿಯ ಕೇಳಲಾಗದು. ಅಂಡಜ, ಸ್ವೇದಜ. ಉದ್ಭಿಜ, ಜರಾಯುಜವೆಂಬ ಪ್ರಾಣಿಗಳಿಗೆ ಭವಿತವ್ಯವ ಕೊಟ್ಟವರಾರೋ? ಒಡೆಯರಿಗೆ ಉಂಡಿಗೆಯ ಮುರಿದಿಕ್ಕಿದಂತೆ ಎನ್ನಿಂದಲೇ ಆಯಿತ್ತು, ಎನ್ನಿಂದಲೇ ಹೋಯಿತ್ತೆಂಬವನ ಬಾಯಲ್ಲಿ ಮೆಟ್ಟಿ ಹುಡಿಯ ಹೊಯ್ಯದೆ ಮಾಣ್ಬನೇ ಕೂಡಲ ಸಂಗಮದೇವ?

೭. ಕೊಡುವವ ಮಾನವನೆಂದೊಡೆ ಹೊಡೆ ಬಾಯ ಕೆರಹಿನಟ್ಟಿಯಲ್ಲಿ. ಮಾನೀಶನ ಹೃದಯದೊಳು ತಾನೀಶ ಹೊಕ್ಕು ಸಲುವಷ್ಟು ಕೊಡಿಸುವ ಕಾಣಾ ದೇವರಾಯ ಸೊಡ್ಡಳಾ.

೮. ನೀನೀಶನೀಯದೆ ಮಾನೀಶ ನೀವನೇ? ನೀನೀಸುವ ಕಾರಣ ಮಾನೀಶನೀವನು. ಆ ಮಾನೀಶನ ಹೃದಯದೊಳು ಪೊಕ್ಕು ನೀನೀಸುವ ಕಾರಣ ನೀನೇ ಶರಣೆಂಬೆನಯ್ಯಾ ರಾಮನಾಥಾ.

೯. ಮಾಡುವ ಭಕ್ತಂಗೆಯೂ ಕೊಡುವ ದೇವಂಗೆಯೂ ಎಂದೆಂದಿಗೂ ಕೇಡಿಲ್ಲ. ಮಾಡಿ ಭೋ, ಮಾಡಿ ಭೋ. ಎಲ್ಲವೂ ಸವೆಯಿತ್ತು ಹೋಯಿತ್ತೆಂಬ ಚಿಂತೆ ಸಂತೋಷವಿಲ್ಲದೆ ಮಾಡಿ ಭೋ, ನಮ್ಮ ಸಕಳೇಶ್ವರ ದೇವನರಿದು ಸಲಹುವನಾಗಿ.

೧೦. ಕೆರೆಯಲ್ಲಿ ಉಂಡು ತೊರೆಯ ನೆನೆವಂತೆ, ಆರು ಕೊಟ್ಟ ವಡವೆಯ ಆರಿಗಿಕ್ಕಿ ತಾನಾರಾಧಿಸಿಕೊಂಬವನ ನೋಡಾ. ಅಲ್ಲಿಗ

ಲ್ಲಿಗೆ ಎಲ್ಲಿಯೂ ತಪ್ಪದು. ಇದನರಿದು ಕಲ್ಯಾಣದ ತ್ರಿಪುರಾಂತಕ ಲಿಂಗದಲ್ಲಿ ಗಾವುದಿ ಮಾಚಯ್ಯ ಹೇಳಿದುದು ದಿಟವೆನ್ನಿರಣ್ಣಾ.

---

## ಲೋಭಿಯಾಗಬೇಡ.

೧. ಸಂಸಾರವೆಂಬುದೊಂದು ಗಾಳಿಯ ಸೊಡರು. ಸಿರಿ ಎಂಬುದೊಂದು ಸಂತೆಯ ಮಂದಿ ಕಂಡಯ್ಯ. ಇದನು ನೆಚ್ಚಿ ಕೆಡ ಬೇಡ. ಸಿರಿ ಎಂಬುದ ಮರೆದು, ಪೂಜಿಸು ನಮ್ಮ ಕೂಡಲ ಸಂಗ ಮದೇವನ.

೨. ಎಲೆ ಎಲೆ ಮಾನವ, ಅಳಿಯಾಸೆ ಬೇಡೆಲೋ. ಕಾಡ ಬೆಳದಿಂಗಳ ಸಿರಿಯು ಸ್ಥಿರವಲ್ಲ. ಕೇಡಿಲ್ಲದ ಪದವಿಯ ಕೊಡಲು, ಕೂಡಲಸಂಗಮ ದೇವನ ಮರೆಯದೆ ಪೂಜಿಸು.

೩. ಹರಸೀವ ಕಾಲಕ್ಕೆ, ಸಿರಿಯು ಬೆನ್ನಲ್ಲಿ ಬಕ್ಕು. ಹರಿದು ಹೆದ್ದೊರೆಯು ಕೆರೆ ತುಂಬಿದಂತಯ್ಯ. ನೆರೆಯದ ವಸ್ತು ನೆರೆವುದು ನೋಡಯ್ಯ. ಅರಸು ಪರಿವಾರ ಕೈವಾರ ನೋಡಯ್ಯ. ಪರಮ ನಿರಂ ಜನನು ಮರೆವ ಕಾಲಕ್ಕೆ ತುಂಬಿದ ಹರವಿಯು ಕಲ್ಲು ಕೊಂಡಂತೆ ಕೂಡಲ ಸಂಗಮದೇವಾ.

೪. ಕಾಂಚನವೆಂಬ ನಾಯ ನೆಚ್ಚಿ ನಿಮ್ಮನು ಮರೆದೆನಯ್ಯ. ಕಾಂಚನಕ್ಕೆ ವೇಳೆಯಲ್ಲದೆ, ಲಿಂಗಕ್ಕೆ ವೇಳೆ ಇಲ್ಲ. ಹಡಿಕೆಗೆ ಮೆಚ್ಚಿದ ಸೊಣಗನು ಅಮೃತದ ರುಚಿಯ ಬಲ್ಲುದೆ ಕೂಡಲ ಸಂಗಮದೇವಾ?

೫. ಸಿರಿ ಬಂದೊದಗಿತ್ತೆಂದು, ಹಿರಿದಾಗಿ ಹಿಗ್ಗಬೇಡ. ಸಿರಿ ಎಂಬುದು ಕನಸಿನ ಪರಿಯಂತೆ ನೋಡಾ. ಎಲೆ ಮರುಳು ಮಾನವಾ, ಇದನರಿತು, ಶ್ರೀಮಹಾದೇವನ ಪೂಜಿಸಿದೊಡೆ, ಸ್ಥಿರವಾದ ಪದ ವಿಯ ನೀವ ನಮ್ಮ ಅಖಂಡೇಶ್ವರಾ.

೬. ಮಡದಿ, ಮಕ್ಕಳು, ಪಡೆದ ದ್ರವ್ಯವು ಎನ್ನೊಡನೆ ಎಂದು ನೆಚ್ಚಬೇಡಿರೋ. ಎಲೆ ಹುಚ್ಚ ಮಾನವರಿರಾ, ಅವು ನಿಮ್ಮ ಒಡವೆಯಾದೊಡೆ, ನೀವು ಮಡಿದು ಹೋಗುವಾಗ್ಗೆ, ನಿಮ್ಮೊಡನೆ ಬಪ್ಪವೇ ಹೇಳಿರೋ? ಇದನರಿತು ತಡೆಯದೆ ಮೃಡನ ಸೇವೆಯೊಳು ತೊಡಗಿದರೆ, ಕಡೆ ಮೊದಲಿಲ್ಲದ ಪದವು ದೊರೆಕೊಂಬುದು ನೋಡಾ ನಮ್ಮ ಅಖಂಡೇಶ್ವರ ಲಿಂಗದಲ್ಲಿ.

೭. ಮುನ್ನಗಳಿಸಿದವರೊಡವೆಯ ಈಗ ಕಂಡು, ಮತ್ತೆ ಇನ್ನಾರಿಗೆ ಗಳಿಸಿಹರಣ್ಣಾ? ಅಂದಂದಿಂಗೆ ಮಳೆ ಬೆಳೆ ತಾನಿದ್ದಂದಿಗೂ ತಪ್ಪದು. ಇದನರಿದು ಕಲ್ಯಾಣದ ತ್ರಿಪುರಾಂತಕ ಲಿಂಗದಲ್ಲಿ ಗಾವುದೀ ಮಾಚಯ್ಯ ಹೇಳಿದುದು ದಿಟವೆನ್ನಿರಣ್ಣಾ.

೮. ಪಶು ನಾವೃತ್ತ ತನ್ನ ಶಿಶುವಿಂಗೆ ಏನು ಗಳಿಸಿಕೊಟ್ಟಿತ್ತು? ಪಿಂಡ ಹುಟ್ಟುವಾಗ, ಅದಕ್ಕೆ ಸಂಚಿತ, ಪ್ರಾರಬ್ಧ, ಆಗಾಮಿ ತಪ್ಪದೆಂದೆ. ಆರು ಸತ್ತಡೂ, ಲೇಸಿಗರಿಲ್ಲ. ತಮ್ಮ ತಮ್ಮಿಷ್ಟಕ್ಕೆ ಲೇಸಿಗರೆಲ್ಲರು. ಇದು ತಪ್ಪದು. ಕಲ್ಯಾಣದ ತ್ರಿಪುರಾಂತಕ ಲಿಂಗದಲ್ಲಿ ಗಾವುದೀ ಮಾಚಯ್ಯ ಹೇಳಿದುದು ದಿಟವೆನ್ನಿರಣ್ಣಾ.

೯. ನಿಲ್ಲಿಸಬಹುದಯ್ಯಾ ಒಂದೇ ಮಂತ್ರದಿಂದ ಕಾಳೋರಗನ. ನಿಲ್ಲಿಸಬಹುದಯ್ಯಾ ಒಂದೇ ಮಂತ್ರದಿಂದ ಹಾರುವ ಪಕ್ಷಿಯನು. ನಿಲ್ಲಿಸಬಹುದಯ್ಯಾ ಒಂದೇ ಮಂತ್ರದಿಂದ ಹೆಬ್ಬುಲಿಯನು. ನಿಲ್ಲಿಸಬಹುದಯ್ಯಾ ಒಂದೇ ಮಂತ್ರದಿಂದ ಮೃತ್ಯುವೆಂಬ ಹೆಮ್ಮಾರಿಯ. ಲೋಭವೆಂಬ ಗ್ರಹ ಹಿಡಿದವರನು ಯಾತರಿಂದಲೂ ಬಿಡಿಸಲಾಗದು. ಈ ಲೋಭಕ್ಕೆ ದಾರಿದ್ರ್ಯವೇ ಔಷಧವು. ಹೇಳಿದರೆ ಕೇಳರು, ತಾವು ತಿಳಿಯರು, ಶಾಸ್ತ್ರವ ನೋಡರು, ಭಕ್ತಿಯ ಹಿಡಿಯರು. ಇಂತಿಹ ಗೊಡ್ಡ ಮೂಳ ಹೊಲೆಯರಿಗೆ ಕರ್ಮವೆಂಬ ಶರಧಿಯಲ್ಲಿ ಬಿದ್ದು ಉರುಳಾಡುವದೇ ಸತ್ಯವೆಂದಾತ ನಮ್ಮ ಅಂಬಿಗರ ಚೌಡಯ್ಯ.

೧೦. ಅರ್ಥವ ಗಳಿಸಿ ಆತ್ಮ ಪುತ್ರರಿಗಿರಿಸಬೇಡ. ಆರಿಗಾದರೂ ಇಲ್ಲ. ಶಿವನಲ್ಲದೆ ಹಿತವರಿಲ್ಲವೆಂದರಿದು ಶಿವನೊಡವೆಯ ಶಿವ

ಲ್ಲಿಗೆ ಎಲ್ಲಿಯೂ ತಪ್ಪದು. ಇದನರಿದು ಕಲ್ಯಾಣದ ತ್ರಿಪುರಾಂತಕ ಲಿಂಗದಲ್ಲಿ ಗಾವುದಿ ಮಾಚಯ್ಯ ಹೇಳಿದುದು ದಿಟವೆನ್ನಿರಣ್ಣಾ.

---

## ಲೋಭಿಯಾಗಬೇಡ.

೧. ಸಂಸಾರವೆಂಬುದೊಂದು ಗಾಳಿಯ ಸೊಡರು. ಸಿರಿ ಎಂಬುದೊಂದು ಸಂತೆಯ ಮಂದಿ ಕಂಡಯ್ಯ. ಇದನು ನೆಚ್ಚಿ ಕೆಡ ಬೇಡ. ಸಿರಿ ಎಂಬುದ ಮರೆದು, ಪೂಜಿಸು ನಮ್ಮ ಕೂಡಲ ಸಂಗ ಮದೇವನ.

೨. ಎಲೆ ಎಲೆ ಮಾನವ, ಅಳಿಯಾಸೆ ಬೇಡೆಲೋ. ಕಾಡ ಬೆಳದಿಂಗಳ ಸಿರಿಯು ಸ್ಥಿರವಲ್ಲ. ಕೇಡಿಲ್ಲದ ಪದವಿಯ ಕೊಡಲು, ಕೂಡಲಸಂಗಮ ದೇವನ ಮರೆಯದೆ ಪೂಜಿಸು.

೩. ಹರನೀವ ಕಾಲಕ್ಕೆ, ಸಿರಿಯು ಬೆನ್ನಲ್ಲಿ ಬಕ್ಕು. ಹರಿದು ಹೆದ್ದೊರೆಯು ಕೆರೆ ತುಂಬಿದಂತಯ್ಯ. ನೆರೆಯುದ ವಸ್ತು ನೆರೆವುದು ನೋಡಯ್ಯ. ಅರಸು ಪರಿವಾರ ಕೈವಾರ ನೋಡಯ್ಯ. ಪರಮ ನಿರಂಜನನು ಮರೆವ ಕಾಲಕ್ಕೆ ತುಂಬಿದ ಹರವಿಯ ಕಲ್ಲು ಕೊಂಡಂತೆ ಕೂಡಲ ಸಂಗಮದೇವಾ.

೪. ಕಾಂಚನವೆಂಬ ನಾಯ ನೆಚ್ಚಿ ನಿಮ್ಮನು ಮರೆದೆನಯ್ಯ. ಕಾಂಚನಕ್ಕೆ ವೇಳೆಯಲ್ಲದೆ, ಲಿಂಗಕ್ಕೆ ವೇಳೆ ಇಲ್ಲ. ಹಡಿಕೆಗೆ ಮೆಚ್ಚಿದ ಸೊಣಗನು ಅಮೃತದ ರುಚಿಯ ಬಲ್ಲುದೆ ಕೂಡಲ ಸಂಗಮದೇವಾ?

೫. ಸಿರಿ ಬಂದೊದಗಿತ್ತೆಂದು, ಹಿರಿದಾಗಿ ಹಿಗ್ಗಬೇಡ. ಸಿರಿ ಎಂಬುದು ಕನಸಿನ ಪರಿಯಂತೆ ನೋಡಾ. ಎಲೆ ಮರುಳು ಮಾನವಾ, ಇದನರಿತು, ಶ್ರೀಮಹಾದೇವನ ಪೂಜಿಸಿದೊಡೆ, ಸ್ಥಿರವಾದ ಪದವಿಯ ನೀವ ನಮ್ಮ ಅಖಂಡೇಶ್ವರಾ.

೬. ಮಡದಿ, ಮಕ್ಕಳು, ಪಡೆದ ದ್ರವ್ಯವು ಎನ್ನೊಡವೆ ಎಂದು ನೆಚ್ಚಬೇಡಿರೋ. ಎಲೆ ಹುಚ್ಚ ಮಾನವರಿರಾ, ಅವು ನಿಮ್ಮ ಒಡವೆಯಾದೊಡೆ, ನೀವು ಮಡಿದು ಹೋಗುವಾಗ್ಗೆ, ನಿಮ್ಮೊಡನೆ ಬಪ್ಪವೇ ಹೇಳಿರೋ? ಇದನರಿತು ತಡೆಯದೆ ಮೃಡನ ಸೇವೆಯೊಳು ತೊಡಗಿದರೆ, ಕಡೆ ಮೊದಲಿಲ್ಲದ ಪದವು ದೊರೆಕೊಂಬುದು ನೋಡಾ ನಮ್ಮ ಅಖಂಡೇಶ್ವರ ಲಿಂಗದಲ್ಲಿ.

೭. ಮುನ್ನಗಳಿಸಿದಪದೊಡವೆಯು ಈಗ ಕಂಡು, ಮತ್ತೆ ಇನ್ನಾರಿಗೆ ಗಳಿಸಿಹಿರಣ್ಣಾ? ಅಂದಂದಿಂಗೆ ಮಳೆ ಬೆಳೆ ತಾನಿದ್ದಂದಿಗೂ ತಪ್ಪದು. ಇದನರಿದು ಕಲ್ಯಾಣದ ತ್ರಿಪುರಾಂತಕ ಲಿಂಗದಲ್ಲಿ ಗಾವುದೀ ಮಾಚಯ್ಯ ಹೇಳಿದುದು ದಿಟವೆನ್ನಿರಣ್ಣಾ.

೮. ಪಶು ನಾವುತ್ತ ತನ್ನ ಶಿಶುವಿಂಗೆ ಏನು ಗಳಿಸಿಕೊಟ್ಟಿತ್ತು? ಪಿಂಡ ಹುಟ್ಟುವಾಗ, ಅದಕ್ಕೆ ಸಂಚಿತ, ಪ್ರಾರಬ್ಧ ಆಗಾಮಿ ತಪ್ಪದೆಂದೆ. ಆರು ಸತ್ತಡೂ, ಲೇಸಿಗರಿಲ್ಲ. ತಮ್ಮ ತಮ್ಮದೃಷ್ಟಕ್ಕೆ ಲೇಸಿಗರಿಲ್ಲರು. ಇದು ತಪ್ಪದು. ಕಲ್ಯಾಣದ ತ್ರಿಪುರಾಂತಕ ಲಿಂಗದಲ್ಲಿ ಗಾವುದೀ ಮಾಚಯ್ಯ ಹೇಳಿದುದು ದಿಟವೆನ್ನಿರಣ್ಣಾ.

೯. ನಿಲ್ಲಿಸಬಹುದಯ್ಯ ಒಂದೇ ಮಂತ್ರದಿಂದ ಕಾಳೋರಗನ. ನಿಲ್ಲಿಸಬಹುದಯ್ಯ ಒಂದೇ ಮಂತ್ರದಿಂದ ಹಾರುವ ಪಕ್ಷಿಯನು. ನಿಲ್ಲಿಸಬಹುದಯ್ಯ ಒಂದೇ ಮಂತ್ರದಿಂದ ಹೆಬ್ಬುಲಿಯು. ನಿಲ್ಲಿಸಬಹುದಯ್ಯ ಒಂದೇ ಮಂತ್ರದಿಂದ ಮೃತ್ಯುವೆಂಬ ಹೆಮ್ಮಾರಿಯ. ಲೋಭವೆಂಬ ಗ್ರಹ ಹಿಡಿನವರನು ಯಾತರಿಂದಲೂ ಬಿಡಿಸಲಾಗದು. ಈ ಲೋಭಕ್ಕೆ ದಾರಿದ್ರ್ಯವೇ ಔಷಧವು. ಹೇಳಿದರೆ ಕೇಳರು, ತಾವು ತಿಳಿಯರು, ಶಾಸ್ತ್ರವ ನೋಡರು, ಭಕ್ತಿಯ ಹಿಡಿಯರು. ಇಂತಿಹ ಗೊಡ್ಡ ಮೂಳ ಹೊಲೆಯರಿಗೆ ಕರ್ಮವೆಂಬ ಶರಧಿಯಲ್ಲಿ ಬಿದ್ದು ಉರುಳಾಡುವದೇ ಸತ್ಯವೆಂದಾತ ನಮ್ಮ ಅಂಬಿಗರ ಚೌಡಯ್ಯ.

೧೦. ಅರ್ಥವ ಗಳಿಸಿ ಆತ್ಮ ಪುತ್ರಗಿರಿಸಬೇಡ. ಆರಿಗಾದರೂ ಇಲ್ಲ. ಶಿವನಲ್ಲದೆ ಹಿತವರಿಲ್ಲವೆಂದರಿದು ಶಿವನೊಡವೆಯ ಶಿವ

ನವರಿಗೆ ಕೊಡು ಮರುಳೇ. ಅರ್ಥದಲ್ಲೇನೂ ಸುಖವಿಲ್ಲ. ಅರ್ಥವ ನಾರ್ಜಿಸುವಲ್ಲಿ ದುಃಖ, ಆರ್ಜಿಸಿದ ಧನವ ರಕ್ಷಿಸುವಲ್ಲಿ ದುಃಖ, ನಾಶವಾದಡೆ ದುಃಖ, ವೆಚ್ಚವಾದಡೆ ದುಃಖ. ಈ ಪರಿಯಲ್ಲಿ ಅರ್ಥದಿಂದ ಸದಾ ದುಃಖವಡೆದವರಿಗೆ ಸುಖವಿಲ್ಲೆಂದರಿಯದೆ ಧನದ ಮರವೆಯಲ್ಲಿ ಬಳಲುತ್ತಿಹ ಮನುಜರಿಗಿನ್ನಾವ ಗತಿಯೂ ಇಲ್ಲವಯ್ಯಾ ನಿಜ ಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ.

## ನೀತಿಯ ಸಾಮಾನ್ಯ ವಚನಗಳು.

### ಭಾಗ ೩.

೧. ಕಾಯ ಕರ್ರನೆ ಕಂದಿದರೇನಯ್ಯಾ! ಕಾಯ ಮಿರ್ರನೆ ಮಿಂಚಿದರೇನಯ್ಯಾ! ಅಂತರಂಗ ಶುದ್ಧವಾದ ಬಳಿಕ, ಚನ್ನಮಲ್ಲಿಕಾರ್ಜುನ ಲಿಂಗವು ಒಲಿದ ಕಾಯವು ಹೇಗಿದ್ದರೇನಯ್ಯಾ?

೨. ತನು ಬತ್ತಲೆ ಇದ್ದರೇನಯ್ಯಾ, ಮನ ಶುಚಿಯಾಗದನ್ನಕ್ಕರ? ಮಂಡೆ ಬೋಳಾದಡೇನು, ಭಾವ ಬಯಲಾಗದನ್ನಕ್ಕರ? ಭಸ್ಮವ ಹೂಸಿದಡೇನು, ಕರಣಾದಿ ಗುಣಂಗಳನೊತ್ತಿ ಮೆಟ್ಟಿ ಸುಡದನ್ನಕ್ಕರ? ಇಂತು ಆಶೆಯ ವೇಷದ ಭಾಷೆಗೆ ಗುಹೇಶ್ವರ ಸಾಕ್ಷಿಯಾಗಿ 'ಛೀ' ಎಂಬೆನು ಕಾಣಾ ಸಂಗನಬಸವಣ್ಣಾ.

೩. ಆಶೆಯಿಂದ ಬಿಟ್ಟು ಕಿರಿಯರಿಲ್ಲ. ನಿರಾಶೆಯಿಂದ ಬಿಟ್ಟು ಹಿರಿಯರಿಲ್ಲ. ದಯದಿಂದ ಬಿಟ್ಟು ಧರ್ಮವಿಲ್ಲ. ವಿಚಾರದಿಂದ ಬಿಟ್ಟು ಸಹಾಯಿಗಳಿಲ್ಲ. ಸಭ್ಯರಾಚಾರಕ್ಕೆ ಸಕಳೇಶ್ವರದೇವರಿಂದ ಬಿಟ್ಟು ದೈವವಿಲ್ಲ.

೪. ಕಂಗಳ ಮುಂದಣ ಕಾಮವ ಕೊಂದು, ಮನದ ಮುಂದಣ ಆಶೆಯ ತಿಂದು, ಅತನನರಿ. ಆತುರ ವೈರಿ ಮಾರೇಶ್ವರಾ.

೫. ಮಾತಿನಲ್ಲಿ ನಿರ್ವಾಣ, ಆತ್ಮನಲ್ಲಿ ಘಾತುಕ. ಕೂಸು ಹೇತು ಕಲಿಸುವಂತೆ, ತ್ರಿವಿಧದಾಶೆಗೆ ಸಿಕ್ಕಿ, ಸಾವ ಪಾತಕರಿಗೆಲ್ಲಿಯದೋ ಲಿಂಗ? ಅದೇತರ ನಿರ್ವಾಣ? ಏತದ ಕೂನಿಯಂತೆ, ರಾಟಣದಂತೆ ಭವ ಪಾಶದಲ್ಲಿ ಬಿದ್ದು ಗಾಸಿಯಾದ ಮತ್ತೆ, ನಿನಗೇತರ ಭಾಷೆಯೋ ನಿಷ್ಕಳಂಕ ಮಲ್ಲಿಕಾರ್ಜುನಾ.

೬. ಸಾವು ತಡವಿಲ್ಲ. ನರಕ ದೂರವಿಲ್ಲ. ದೇಹದಿಚ್ಛೆಗೆ ಹರಿದು, ಕೆಮ್ಮನೆ ಕೆಡಬೇಡ. ದುರ್ವಿಷಯವ ಬಿಡು ಬೇಗ. ಗುರು ಪದವ ನಂಬು. ನಮ್ಮ ನಿಮ್ಮಲಿಗೆಯ ಚನ್ನರಾಮನಲ್ಲಿ ನೀನು ಸುಖಿಯಪ್ಪೆ ಮರುಳೇ.

೭. ಹಸಿವಿಂಗೆ ಲಯವಿಲ್ಲ. ವಿಷಯಕ್ಕೆ ಕುಲವಿಲ್ಲ. ಮರಣಕ್ಕೆ ಮುನ್ನಿಕೆಯಿಲ್ಲ. ಆಶೆಗೆ ಹವಣಿಲ್ಲ. ವಂಚಕನನಾಮಿಕ, ನಾಚಯ್ಯಪ್ರಿಯ ಚನ್ನರಾಮೇಶಯ್ಯ.

೮. ದ್ವೇಷವಿಲ್ಲದ ಭಕ್ತ, ಆಶೆ ಇಲ್ಲದ ವಿರಕ್ತ, ಸಂಸಾರಪಾಶವಿಲ್ಲದ ಗುರು, ಆತ ಈಶ್ವರ ರೂಪಲ್ಲ. ಸದಾಶಿವ ಮೂರ್ತಿಗಿಂದತ್ತತ್ತ ನಿಃಕಲನಾದ ನಿಃಕಳಂಕ ಮಲ್ಲಿಕಾರ್ಜುನನು.

೯. ನುಡಿಯಬಹುದು ಅದ್ವೈತವನೊಂದು ಕೋಟಿ ವೇಳೆ. ಒಮ್ಮೆ ನಡೆಯಬಹುದೇ ನಿರ್ಧಾರವಾಗಿ ಸದ್ಭಕ್ತಿ ಆಚಾರವಾಗಿ? ನುಡಿದಂತೆ ನಡೆವ, ನಡೆದಂತೆ ನುಡಿವ, ಸದಾಚಾರಯುಕ್ತ ಮಹಾತ್ಮರ ಪಾದವ ಹಿಡಿದು ಬದುಕಿಸಯ್ಯ ಪ್ರಭುವೇ ಕಪಿಲ ಸಿದ್ಧ ಮಲ್ಲಿಕಾರ್ಜುನಾ.

## ಅಹಂಕಾರಿಯಾಗಬೇಡ.

೧. ನಾ ನೀನೆಂಬ ಅಹಂಕಾರ ತಲೆದೋರಿದಲ್ಲಿ ಆಟಮಾಟ ಕುಟಿಲ ಕುಹಕವೆಂಬ ಬಿರುಗಾಳಿ ಬಿಟ್ಟಿತ್ತು. ಬಿರುಗಾಳಿ ಹುಟ್ಟಲೊ

ಡನೆ ಜ್ಞಾನಜ್ಯೋತಿ ಕೆಡಲೊಡನೆ ನಾ ಬಲ್ಲೆ ಬಲ್ಲಿದರೆಂಬ ಅರುಹಿರಿಯರೆಲ್ಲರು ತಾಮಸಕ್ಕೊಳಗಾಗಿ, ಸೀಮೆದಪ್ಪಿ ಕೆಟ್ಟರು ಕಾಣಾ ಗುಹೇಶ್ವರಾ.

೨. ತಮ್ಮ ತಾವರಿಯರು. ಹೇಳಿದರೆ ಕೇಳರು. ಆರರ ಪೊಲುಬನೇನೆಂದರಿಯರು. ಎಂಟರ ಕಂಟಕವ ಮುನ್ನರಿಯರು. ಏರಿದ ಬೆಟ್ಟವ ಇಳಿಯಲರಿಯದವರನೇನೆಂಬೆ ಗುಹೇಶ್ವರಾ?

೩. ಮಾಡುವ ಭಕ್ತಂಗೆ ಮನವೇ ಸಾಕ್ಷಿ. ಹೊರ ಹೊಮ್ಮಿ ಬಯಲ ಪೊರಲೇಕೆ? ಹಮ್ಮಿಲ್ಲದೆ ಮಾಡಿ, ಮನದಲ್ಲಿ ಮರುಗದಿರ್ದಡೆ, ಅಲ್ಲಿ ತಾ ಪೆರೆ ಹಿಂಗದಿರ್ಪ ನಂಬಿಗ ಚೌಡಯ್ಯ.

೪. ನಾನೆಂಬಹಂಕಾರದಲ್ಲಿ ನಾನುಂಡೆನಾದರೆ, ಎನಗದೇ ಭಂಗ. ಸ್ತುತಿ ನಿಂದೆಗೆ ನೊಂದೆನಾದೊಡೆ, ಅಂಗೈಯ್ಯಲ್ಲಿದ್ದ ಗುಹೇಶ್ವರ ಲಿಂಗಕ್ಕೆ ದೂರ.

೫. ಆಚಾರವನರಿಯದೆ, ಕ್ರಿಯಾಕಾರ ಉಡುಗದೆ, ವಿಭವವಳಿಯದೆ, ಕೋಪವಡಗದೆ, ತಾಪ ಮುರಿಯದೆ, ಬರಿದೆ ನೆನೆದ ಹೊರಸಿನಂತೆ, ಬೆಬ್ಬಳಿಸಿ ಬೆಬ್ಬನೆ ಬೆರೆವರ ಕೇಡಿಂಗೆ ನಾನು ಬೆರಗಾದೆನು ಕಾಣಾ ಗುಹೇಶ್ವರಾ.

೬. ಅರಿದೆವರಿದೆವೆಂಬಿರಿ. ಅರಿದ ಪರಿ ಎಂತು ಹೇಳಿರೇ? ಅರಿದವರು ಅರಿದೆವೆಂಬರೇ? ಅರಿಯಬಾರದ ಘನವನರಿದವರು ಅರಿಯದಂತಿರ್ಪರು ಗುಹೇಶ್ವರಾ.

೭. ಕುರುಡ ಕಾಣನೆಂದು, ಕಿವುಡ ಕೇಳನೆಂದು, ಹೆಳವ ಇರಿಯನೆಂದು, ಮರುಳ ಬೈದನೆಂದು, ಪಿಶಾಚಿ ಹೋದನೆಂದು ಮನ ಕದನ ಬಡುವದೇ? ತಾನರಿವುಳ್ಳಾತ ತತ್ವವನರಿಯದವರಲ್ಲಿ ಗುಣದೋಷವ ನರಸುವನೆ ಹೇಳಾ ಸಿಮ್ಮಲಿಗೆಯ ಚನ್ನರಾಮಾ?

೮. ಬಲೀಂದ್ರನ ಸಿರಿಯಿಂದಧಿಕರ ನಾನಾರನೂ ಕಾಣೆ. ಅಂತಹ ಸಂಪತ್ತು ಮೂರಡಿಗೈದದೆ ಹೋಯಿತ್ತು. ಕೆಡುವಂತಿದ್ದಿತೇ ಕೌರವನ ರಾಜ್ಯ? ಮಡಿವಂತಿದ್ದಿತೇ ರಾವಣನ ಬಲ್ಲಾಳಿಕೆ? ಪರಸ್ತ್ರೀ

ಲಕ್ಷ್ಮೀದೇವಿಗೊಲಿದು ಒಂದು ನಿಮಿಷದಲ್ಲಿ ಮಾಡಿದ. ಇದು ಸತ್ಯ, ಇದು ಸತ್ಯ. ಸಿರಿ ಸೌಕರ್ಯವೆಂಬುದು ಆಕಾಶದ ರಚನೆ. ಇದನರಿದು, ದೇಹದಿಚ್ಛೆಯನತಿಗಳೆದು ನಮ್ಮ ಸಕಳೇಶ್ವರ ದೇವಂಗೋತು ನಾನೆಂಬ ಭ್ರಮೆಯನಳಿಯಿ ಮರುಳೇ.

೯. ನಿನ್ನ ಹರೆಯದ ರೂಹಿನ, ಚಲುವಿನ ನುಡಿಯ, ಜಾಣಿನ, ಸಿರಿಯ ಸಂತೋಷದ, ಕರಿತುರಗ ರಥಪದಾತಿಯ ನೆರವಿಯ, ಸತಿ ಸುತರ ಬಂಧುಗಳ ಸಮೂಹದ, ನಿನ್ನ ಕುಲದಭಿಮಾನದ ಗರ್ವವ ಬಿಡು. ಮರುಳಾಗದಿರು. ಆಕಟಕಟಾ ರೋಮಜನಿಂದ ಹಿರಿಯನೇ? ಮಾರನಿಂ ಚಲುವನೇ? ಸುರಪತಿಯಿಂ ಸಂಪನ್ನನೇ? ವಾಮದೇವ ವಶಿಷ್ಠರಿಂದ ಕುಲಜನೇ? ಅಂತಕನ ದೂತರು ಬಂದು ಕೈವಿಡಿದೆಳೆ ದುಯ್ಯುವಾಗ, ನುಡಿ ತಡವಿಲ್ಲ. ಕೇಳೋ ನರನೇ, ಎನ್ನ ಮಹಾಲಿಂಗ ತ್ರಿಪುರಾಂತಕ ದೇವರ ಪೂಜಿಸಿದೆಯಾದೊಡೆ ಕೇಡಿಲ್ಲದ ಪದವು ದೊರೆ ಕೊಂಬುವುದು ಮರುಳೇ.

೧೦. ಸೆಟ್ಟಿ ಎಂಬೆನೇ ಸಿರಿಯಾಳನ? ಮಡಿವಾಳನೆಂಬೆನೇ ಮಾಚಯ್ಯನ? ಡೋಹರನೆಂಬೆನೇ ಕಕ್ಕಯ್ಯನ? ಮಾದಿಗನೆಂಬೆನೇ ಚನ್ನಯ್ಯನ? ಆನು ಹಾರುವನೆಂದೊಡೆ ಕೂಡಲಸಂಗಯ್ಯ ನಗುವ ನಯ್ಯ

---

## ಜ್ಞಾನಿಯೋ ಶ್ರೇಷ್ಠನೆಂದು ಭಾವಿಸು.

೧. ಅಜಕೋಟಿ ವರುಷದವರೆಲ್ಲರೂ ಹಿರಿಯರೇ? ಹುತ್ತೇರಿ ಬೆತ್ತ ಬೆಳೆದ ತಪಸ್ವಿಗಳೆಲ್ಲರೂ ಹಿರಿಯರೇ? ನಡು ಮುರಿದು, ತಲೆ ನಡುಗಿ, ನರೆ ತೆರೆ ಹೆಚ್ಚಿ, ಮತಿಗೆಟ್ಟು, ಒಂದನಾಡಹೋಗಿ ಒಂಬತ್ತ ನಾಡುವ ಅಜ್ಞಾನಿಗಳೆಲ್ಲರೂ ಹಿರಿಯರೇ? ಅನುವರಿದು, ಘನವ

ಡನೆ ಜ್ಞಾನಜ್ಯೋತಿ ಕೆಡಲೊಡನೆ ನಾ ಬಲ್ಲೆ ಬಲ್ಲಿದರೆಂಬ ಅರುಹಿರಿಯರೆಲ್ಲರು ತಾಮಸಕ್ಕೊಳಗಾಗಿ, ಸೀಮೆದಪ್ಪಿ ಕೆಟ್ಟರು ಕಾಣಾ ಗುಹೇಶ್ವರಾ.

೨. ತಮ್ಮ ತಾವರಿಯರು. ಹೇಳಿದರೆ ಕೇಳರು. ಆರರ ಪೊಲು ಬನೇಸೆಂದರಿಯರು. ಎಂಟರ ಕಂಟಕವ ಮುನ್ನರಿಯರು. ಎರಿದ ಬೆಟ್ಟವ ಇಳಿಯಲರಿಯದವರನೇನೆಂಬೆ ಗುಹೇಶ್ವರಾ?

೩. ಮಾಡುವ ಭಕ್ತಂಗೆ ಮನವೇ ಸಾಕ್ಷಿ. ಹೊರ ಹೊಮ್ಮಿ ಬಯಲ ಪೊರಲೇಕೆ? ಹಮ್ಮಿಲ್ಲದೆ ಮಾಡಿ, ಮನದಲ್ಲಿ ಮರುಗದಿರ್ದಡೆ, ಅಲ್ಲಿ ತಾ ಪರೆ ಓಂಗದಿರ್ಪ ಸಂಬಿಗ ಚೌಡಯ್ಯ.

೪. ನಾನೆಂಬಹಂಕಾರದಲ್ಲಿ ನಾನುಂಡೆನಾದರೆ, ಎನಗದೇ ಭಂಗ. ಸ್ತುತಿ ನಿಂದೆಗೆ ನೊಂದೆನಾದೊಡೆ, ಅಂಗೈಯ್ಯಲ್ಲಿದ್ದ ಗುಹೇಶ್ವರ ಲಿಂಗಕ್ಕೆ ದೂರ.

೫. ಆಚಾರವನರಿಯದೆ, ಕ್ರಿಯಾಕಾರ ಉಡುಗದೆ, ವಿಭವವಳಿಯದೆ, ಕೋಪವಡಗದೆ, ತಾಪ ಮುರಿಯದೆ, ಬರಿದೆ ನೆನೆದ ಹೊರಸಿನಂತೆ, ಬೆಬ್ಬಳಿಸಿ ಬೆಬ್ಬಸೆ ಬೆರೆವರ ಕೇಡಿಂಗೆ ನಾನು ಬೆರಗಾದೆನು ಕಾಣಾ ಗುಹೇಶ್ವರಾ.

೬. ಅರಿದೆವರಿದೆವೆಂಬಿರಿ. ಅರಿದ ಪರಿ ಎಂತು ಹೇಳಿರೇ? ಅರಿದವರು ಅರಿದೆವೆಂಬರೇ? ಅರಿಯಬಾರದ ಘನವನರಿದವರು ಅರಿಯದಂತಿರ್ಪರು ಗುಹೇಶ್ವರಾ.

೭. ಕುರುಡ ಕಾಣನೆಂದು, ಕಿವುಡ ಕೇಳನೆಂದು, ಹೆಳವ ಇರಿಯನೆಂದು, ಮರುಳ ಬೈದನೆಂದು, ಪಿಶಾಚಿ ಹೋದನೆಂದು ಮನ ಕದನ ಬಡುವದೇ? ತಾನರಿವುಳ್ಳಾತ ತತ್ವವನರಿಯದವರಲ್ಲಿ ಗುಣದೋಷವ ನರಸುವನೆ ಹೇಳಾ ಸಿಮ್ಮಲಿಗೆಯ ಚನ್ನರಾಮಾ?

೮. ಬಲೀಂದ್ರನ ಸಿರಿಯಿಂದಧಿಕರ ನಾನಾರನೂ ಕಾಣೆ. ಅಂತಹ ಸಂಪತ್ತು ಮೂರಡಿಗೈದದೆ ಹೋಯಿತ್ತು. ಕೆಡುವಂತಿದ್ದಿತೇ ಕೌರವನ ರಾಜ್ಯ? ಮಡಿವಂತಿದ್ದಿತೇ ರಾವಣನ ಬಲ್ಲಾಳಿಕೆ? ಪರಸ್ತ್ರೀ

ಲಕ್ಷ್ಮೀದೇವಿಗೊಲಿದು ಒಂದು ನಿಮಿಷದಲ್ಲಿ ಮಡಿದ. ಇದು ಸತ್ಯ, ಇದು ಸತ್ಯ. ಸಿರಿ ಸೌಕರ್ಯವೆಂಬುದು ಆಕಾಶದ ರಚನೆ. ಇದನರಿದು, ದೇಹದಿಚ್ಛೆಯನತಿಗಳೆದು ನಮ್ಮ ಸಕಳೇಶ್ವರ ದೇವಂಗೋತು ನಾನೆಂಬ ಭ್ರಮೆಯನಳಿಯಿ ಮರುಳೇ.

೯. ನಿನ್ನ ಹರೆಯದ ರೂಹಿನ, ಚಲುವಿನ ನುಡಿಯ, ಜಾಣಿನ, ಸಿರಿಯ ಸಂತೋಷದ, ಕರಿತುರಗ ರಥಪದಾತಿಯ ನೆರವಿಯ, ಸತಿ ಸುತರ ಬಂಧುಗಳ ಸಮೂಹದ, ನಿನ್ನ ಕುಲದಭಿಮಾನದ ಗರ್ವವ ಬಿಡು. ಮರುಳಾಗದಿರು. ಆಕಟಕಟಾ ರೋಮಜನಿಂದ ಹಿರಿಯನೇ? ಮಾರನಿಂ ಚಲುವನೇ? ಸುರಪತಿಯಿಂ ಸಂಪನ್ನನೇ? ವಾಮದೇವ ವಶಿಷ್ಠರಿಂದ ಕುಲಜನೇ? ಅಂತಕನ ದೂತರು ಬಂದು ಕೈವಿಡಿದೆಳೆದುಯ್ಯುವಾಗ, ನುಡಿ ತಡವಿಲ್ಲ. ಕೇಳೋ ನರನೇ, ಎನ್ನ ಮಹಾಲಿಂಗ ತ್ರಿಪುರಾಂತಕ ದೇವರ ಪೂಜಿಸಿದೆಯಾದೊಡೆ ಕೇಡಿಲ್ಲದ ಪದವು ದೊರೆಕೊಂಬುವುದು ಮರುಳೇ.

೧೦. ಸೆಟ್ಟಿ ಎಂಜೆನೇ ಸಿರಿಯಾಳನ? ಮಡಿವಾಳನೆಂಬೆನೇ ಮಾಚಯ್ಯನ? ಡೋಹರನೆಂಬೆನೇ ಕಕ್ಕಯ್ಯನ? ಮಾದಿಗನೆಂಬೆನೇ ಚನ್ನಯ್ಯನ? ಆನು ಹಾರುವನೆಂದೊಡೆ ಕೂಡಲಸಂಗಯ್ಯ ನಗುವನಯ್ಯ

## ಜ್ಞಾನಿಯೋ ಶ್ರೇಷ್ಠನೆಂದು ಭಾವಿಸು.

೧. ಅಜಕೋಟಿ ವರುಷದವರೆಲ್ಲರೂ ಹಿರಿಯರೇ? ಹುತ್ತೇರಿ ಬೆತ್ತ ಬೆಳೆದ ತಪಸ್ವಿಗಳೆಲ್ಲರೂ ಹಿರಿಯರೇ? ನಡು ಮುರಿದು, ತಲೆ ನಡುಗಿ, ನರೆ ತೆರೆ ಹೆಚ್ಚಿ, ಮತಿಗೆಟ್ಟು, ಒಂದನಾಡಹೋಗಿ ಒಂಬತ್ತನಾಡುವ ಅಜ್ಞಾನಿಗಳೆಲ್ಲರೂ ಹಿರಿಯರೇ? ಅನುವರಿದು, ಘನವ

ಬೆರಿಸಿ, ಹಿರಿದು ಕಿರಿದೆಂಬ ಭೇದವ ಮರೆದು ಕೂಡಲ ಚನ್ನ ಸಂಗಯ್ಯನಲ್ಲಿ ಬೆರಿಸಿ ಬೇರಿಲ್ಲದಿಪ್ಪ ಹಿರಿಯತನ ನಮ್ಮ ಮಹಾದೇವಿಯಕ್ಕಂಗಾಯಿತ್ತು.

೨. ಕಾಮನ ಸುಟ್ಟು, ಹೇಮವನುರುಹಿ, ತ್ರಿಪುರ ಸಂಹಾರದ ಕೀಲವನರಿಯ ಬಲ್ಲಡೆ, ಯೋಗಿಯಾದಡೇನು, ಭೋಗಿಯಾದೊಡೇನು, ಶೈವನಾದೊಡೇನು, ಸನ್ಯಾಸಿಯಾದೊಡೇನು? ಅಶನವ ತೊರೆದಾತ, ವ್ಯಸನವ ಮರೆದಾತ ಗುಹೇಶ್ವರ ಲಿಂಗದಲ್ಲಿ ಅವರ ಹಿರಿಯರೆಂಬೆನು.

೩. ಆಹುದಹುದು ಮತ್ತೇನು? ಮರಹಿಂಗೆ ಹಿರಿದು ಕಿರಿದುಂಟಲ್ಲದೆ, ಅರುವಿಂಗೆ ಹಿರಿದು ಕಿರಿದುಂಟೇ ಹೇಳಯ್ಯ? ಸಾವಿಂಗೆ ಭಯ ಉಂಟಲ್ಲದೆ ಅಜಾತಂಗೆ ಭಯ ಉಂಟೇ ಹೇಳಯ್ಯ? ಕಪಿಲಸಿದ್ಧಮಲ್ಲಿನಾಥಯ್ಯನಲ್ಲಿ ಮಹಾದೇವಿಯಕ್ಕನ ನಿಲವಿಂಗೆ ಶರಣೆಂದು ಶುದ್ಧನಾದೆನು ಕಾಣಾ.

೪. ವಿದ್ಯದಾಸೆಯ ಹಿರಿಯರು ಕೆಲಬರು. ಬುದ್ಧಿಯಾಸೆಯ ಹಿರಿಯರು ಕೆಲಬರು. ಸಮತೆಯಾಸೆಯ ಹಿರಿಯರು ಕೆಲಬರು. ಇವರೆಲ್ಲರೂ ತಮ್ಮ ನಿಜವ ತಾವರಿಯದೆ ಆಚರಿಸಿದರು. ವೇಷ ನಿರ್ವಯಲಾಗಿ ಆಶೆ ರೋಷವ ಬಿಟ್ಟು ದಾಸೋಹಿಯಾಗಿರ್ದೊಡೆ ಗುಹೇಶ್ವರಲಿಂಗವು ತಾನೆ

೫. ನಾನು ಹಿರಿಯ ತಾನು ಹಿರಿಯರೆಂದವರೆಲ್ಲ ಹಿರಿಯರೇ? ಆಟಮಟ ಕುಟಿಲ ಕುಹಕ ಪಿಸುಣತನದಲ್ಲಿಪ್ಪವರೆಲ್ಲ ಹಿರಿಯರೇ? ಸರ್ಪ ಸಾವಿರ ಕಾಲವಿದ್ದರೇನು, ವಿಷಬಿಡುವುದೇ? ಹಾವುಮೆಕ್ಕೆಯ ಹಣ್ಣಾದರೇನು, ಮಧುರ ವಪ್ಪುದೇ? ಅರಿಷಡ್ವರ್ಗದುರುವಣೆಯೊಳಗಾದಾತ ಹಿರಿಯನೇ? ಸಮತೆ ಸಮಾಧಾನ ತುಂಬಿ ಸುಜ್ಞಾನಭರಿತವಾದಡಾತ ಹಿರಿಯನು. ಸ್ವತಂತ್ರ ಸಿದ್ಧಲಿಂಗೇಶ್ವರಾ, ನಿಮ್ಮನರಿಯದೆ ಬರುಮಾತಿನಲ್ಲಿ ಹಿರಿಯನೆಂದೊಡೆ, ನಾಚಿತ್ತೆನ್ನ ಮನವು.

೬. ನಾನು ಘನ ತಾನು ಘನವೆಂಬ ಹಿರಿಯರುಂಟೇ ಜಗದೊಳಗೆ? ಹಿರಿಯರ ಹಿರಿಯತನದಿಂದೇನಾಯಿತ್ತು? ಹಿರಿದು ಕಿರಿದೆಂಬ ಶಬ್ದವಡಗಿದರೆ, ಆತನೇ ಶರಣ ಗುಹೇಶ್ವರಾ.

## ಸ್ತ್ರೀಯರನ್ನು ಮನ್ನಿಸು.

೧. ಸ್ತ್ರೀಯರ ಕಂಡು ಅಳುಪದಿರಾ ಮನವೇ. ಉದ್ದಂಡತನದಲ್ಲಿ ನಡೆವ ಭಂಡರನು ಹುಳುಗೊಂಡದಲ್ಲಿಕ್ಕದೆ ಬಿಡುವನೇ ನಮ್ಮ ದೇವರಾಯ ಸೊಡ್ಡಳಾ?

೨. ತಾ ಮಾಡಿದ ಹೆಣ್ಣು ತನ್ನ ತಲೆಯನೇರಿತ್ತು. ತಾ ಮಾಡಿದ ಹೆಣ್ಣು ತೊಡೆಯನೇರಿತ್ತು. ತಾ ಮಾಡಿದ ಹೆಣ್ಣು ಬ್ರಹ್ಮನ ನಾಲಿಗೆಯನೇರಿತ್ತು. ತಾ ಮಾಡಿದ ಹೆಣ್ಣು ನಾರಾಯಣನ ಎದೆಯನೇರಿತ್ತು. ಅದು ಕಾರಣ ಹೆಣ್ಣು ಹೆಣ್ಣಲ್ಲ, ಹೆಣ್ಣು ರಾಕ್ಷಸಿಯಲ್ಲ. ಹೆಣ್ಣು ಪ್ರತ್ಯಕ್ಷ ಕಪಿಲಸಿದ್ಧ ಮಲ್ಲಿಕಾರ್ಜುನ ನೋಡಾ.

೩. ಶಿವಭಕ್ತರು ತಮ್ಮ ನಿಜ ಕೈಲಾಸಕ್ಕೆ ಹೋದೊಡೆ, ಅವರರಸಿಯ ಪಾರ್ವತಿಯ ಸರಿ ಎಂದು ಕಾಣಬೇಕು. ಅಲ್ಲಿ ಅನುಸರಣೆಯ ಕೊಟ್ಟು, ಬೆರಸಿ ಮಾತನಾಡುವ ನರಕಿಗಳನೇನೆಂಬೆ ರಾಮನಾಥಾ?

೪. ಎಲ್ಲಿ ನೋಡಿದಲ್ಲಿ ಮನವೆಳಸಿದೊಡೆ ಆಣೆ ನಿಮ್ಮಾಣೆ, ನಿಮ್ಮ ಪ್ರಮಥರಾಣೆ. ಪರವಧುವನು ಮಹಾದೇವಿ ಎಂದು ಕಾಂಬೆನು ಕೂಡಲ ಸಂಗಮದೇವಾ.

೫. ಮುನ್ನ ಪರಸತಿ ಪಾರ್ವತಿಯೆಂದು ನುಡಿಸಿತ್ತು, ನಡಿಸಿತ್ತು, ಗುರುವಚನ. ಬಳಿಕ ಶರಣಸತಿ ಪಾರ್ವತಿ ಎಂದು ನಡಿಸಿತ್ತು, ನುಡಿಸಿತ್ತು, ಗುರುವಚನ. ಇನ್ನು ಸತಿಯರಿಲ್ಲ ಗುರುಸತಿಯರೆಂದು

ನಡಿಸಿತ್ತು ನುಡಿಸಿತ್ತು ಗುರುವಚನ. ಶಂಭು ಸೋಮನಾಥನ ಸಂಗ ಸುಸಂಗವ ಮಾಡಿತ್ತು ಗುರು ವಚನ.

೬. ಸತಿಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ. ಸತಿ ಪತಿಗಳೊಂದಾಗದವನ ಭಕ್ತಿ ಅಮೃತದೊಳು ವಿಷ ಬೆರಸಿದಂತೆ ಕಾಣಾ ರಾಮನಾಥಾ.

೭. ಉಭಯ ದೃಷ್ಟಿಯಿಂದ ದೃಷ್ಟವ ಕಾಂಬಂತೆ ದಂಪತಿ ಏಕ ಭಾವವಾಗಿ ನಿಂದಲ್ಲಿ, ಗುಹೇಶ್ವರ ಲಿಂಗಕ್ಕೆ ಅರ್ಪಿತವಾಯಿತ್ತು ಸಂಗ ನಬಸವಣ್ಣಾ.

೮. ಗಂಡ ಶಿವಲಿಂಗದೇವರ ಭಕ್ತ. ಹೆಂಡತಿ ಕೊಂಬುದು ಸುರೆಯು ಮಾಂಸ. ಭಾಂಡ ಭಾಜನ ಶುದ್ಧಿ ಇಲ್ಲದವರ ಭಕ್ತಿ ಹೆಂಡದ ಮಡಿಕೆಯ ಹೊರಗೆ ತೊಳೆದಂತೆ ಕೂಡಲಸಂಗಮದೇವ.

೯. ಗಂಡ ಭಕ್ತನಾಗಿ, ಹೆಂಡತಿ ಭವಿಯಾದೊಡೆ, ಉಂಡ ಊಟ ಇಬ್ಬರಿಗೂ ಸರಿಭಾಗ. ಸತ್ತ ನಾಯ ತಂದು ಅಟ್ಟದ ಮೇಲಿಳುಹಿ, ಒಬ್ಬ ರೊಪ್ಪಚ್ಚಿಯ ಹಂಚಿಕೊಂಡು ತಿಂಬಂತೆ ಕಾಣಾ ರಾಮನಾಥಾ.

---

## ವ್ಯಭಿಚಾರ ಮಾಡಬೇಡ.

೧. ಅಡಗ ತಿಂಬರು, ಕಣಕದಡಿಗೆ ಇರಲ್ಕೆ. ಸುರೆಯ ಕುಡಿ ವರು ಹಾಲಿರಲ್ಕೆ. ಮುಕ್ಕುವರು ಭಂಗಿಯ ಸಕ್ಕರೆ ಇರಲ್ಕೆ. ಸ್ವಸ್ತ್ರೀ ಇದ್ದಂತೆ ಪರಸ್ತ್ರೀಯರಿಗೆ ಅಳುಪುವರು. ಸತ್ತ ನಾಯ ಭಕ್ಷಿಸುವ ಹಡಿ ಕಿಗರನೇನೆಂಬೆನಯ್ಯ ರಾಮನಾಥಾ?

೨. ಹೆಣ್ಣ ಕಂಡು, ಹೆಚ್ಚಿ ಹೆಕ್ಕಳ ಬಡುವಂತೆ, ಕಣ್ಣಿಟ್ಟು ನೋಡದಿರಾ. ಶಿವಲಿಂಗದೇವನ ಕರಣದಿಚ್ಛೆಗೆ ಹರಿದು, ನರಕದಲ್ಲಿ ನೆರೆದು ಬರುದೊರೆವೋಗದೆ ಪೂಜಿಸು ನಮ್ಮ ರಾಮನಾಥನಾ.

೩. ಶಿವಪೂಜೆ ಎತ್ತ? ವಿಷಯದ ಸವಿ ಎತ್ತ? ಆ ವಿಷಯದ ಸವಿ ತಲೆಗೇರಿ ಶಿವಪೂಜೆಯ ಬಿಟ್ಟು, ವೇಶಿಯರ ಎಂಜಲ ಹೇಸದೆ ತಿಂಬ ದೋಷಿಗಳನೇನೆಂಬೆನೈ ರಾಮನಾಥಾ?

೪. ಅಸುರರೈಶ್ವರ್ಯವನೆಣಿಸುವರೆ, ಸೀತೆಗೆ ಸರಿಮಿಗಿಲೆನಿಸುವ ರೆಂಟು ಕೋಟಿ ಮತಿವಂತೆಯರು, ಶಿರಃಪ್ರಧಾನರೆಂಟು ಕೋಟಿ, ಲೆಕ್ಕವಿಲ್ಲದ ದಳವು, ಲಕ್ಷ ಕುಮಾರರು, ದಿಕ್ಪಾಲಕರವನ ಮನೆಯ ಬಂಧನದಲ್ಲಿಪ್ಪರು, ಸುರಸತಿಯರನೆಲ್ಲರನಾತ ಸೆರೆವಿಡಿದಾಳಿದ. ಶಿವನೇ, ನೀನು ಕರುಣಿಸಿದಂತಿರದೆ, ಪರವಧುವಿನ ಜೇಟಿಪವನ ಪ್ರಾಣವ ಕೊಂಡಿತ್ತು. ಇದನರಿದು ಪರವಧುವಿಗೆಳಸುವವರ ಕಂಡು, ಗರುಡನ ಕಂಡ ಸರ್ಪ ಧರೆಗಿಳಿವಂತೆ. ಅಡಗಿಪ್ಪೆಯಯ್ಯ ಕೂಡಲಸಂಗಮದೇವ.

೫. ಅಮರಾವತಿ ಪಟ್ಟಣದಲ್ಲಿ ದೇವೇಂದ್ರನಾಳುವ ನಂದನವನವಯ್ಯಾ! ಅತ್ತ ಸಾರೆಲೆ ಕಾಮ ಮೋಹವೇ. ನೀನು ಲೋಕಾದಿಲೋಕವ ಮರುಳು ಮಾಡಿದೆ ಕಾಮಾ! ಗುಹೇಶ್ವರ ಲಿಂಗವನರಿಯೆ.

೬. ಎಸೆಯದಿರು ಎಸೆಯದಿರು ಕಾಮಾ, ನಿನ್ನ ಬಾಣ. ಎಸೆಯಲೇಕೋ? ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ, ಇವು ಸಾಲವೇ? ನಿನಗೆ ಗುಹೇಶ್ವರ ಲಿಂಗದ ವಿರಹದಲ್ಲಿ ಬೆಂದವರ ಮರಳಿ ಸುಡಲುಂಟೇ ಮರುಳ ಕಾಮಾ?

---

## ಸಜ್ಜನರ ಸಂಗಮಾಡು.

೧. ಸಾರ ಸಜ್ಜನರ ಸಂಗವ ಮಾಡುವುದು. ದುರುಳ ದುರ್ಜನರ ಸಂಗ ಬೇಡವಯ್ಯಾ. ಆವ ಹಾವಾದೊಡೇನು? ವಿಷ ಒಂದೇ. ಅಂತವರ ಸಂಗ ಬೇಡವಯ್ಯಾ. ಅಂತರಂಗದ ಆತ್ಮ ಶುದ್ಧವಿಲ್ಲದವರ ಸಂಗವು ಸಿಂಗಿಕಾಳಕೂಟ ವಿಷವು ಕೂಡಲಸಂಗಮದೇವಾ.

೨. ಒಂದಕ್ಕೊಂದು ನುಡಿದು. ಕಣ್ಣಾ ಕೆಂಚನೇ ಮಾಡಿ, ಗಂಡುಗೆದರಿ, ಮುಡುಹಿಕ್ಕುವ ಕೆಲರ ಕಂಡಂಜುವೆನೋಸರಿಸುವೆ. ಜಡಿದೆನೆಂದು ಭಂಗವಾದೊಡಾಗಲಿ. ನಮ್ಮ ಕೂಡಲಸಂಗನ ಶರಣರನುಭಾವವಿಲ್ಲದವರ ಹೊಲ ಮೇರೆಯ ಹೊಸ್ತೆ. ಹೊಲ ಬಿಟ್ಟೋಡುವೆ.

೩. ಅರೆ ಭಕ್ತರಾದವರ ನೆರೆಬೇಡ, ಹೊರೆಬೇಡ. ದಾರಿ ಸಂಗಬೇಡ, ದೂರ ನುಡಿಸಲು ಬೇಡ. ಕೂಡಲಸಂಗನ ಶರಣರಲ್ಲಿ ಅಚ್ಚ ಲಿಂಗೈಕ್ಯಂಗೆ ತೊತ್ತಾಗಿಹುದಯ್ಯ.

೪. ದೂಷಕನೊಬ್ಬ ದೇಶವ ಕೊಟ್ಟರೆ, ಆತೆ ಮಾಡಿ ಅವನ ಹೊರೆಯಲ್ಲಿರಬೇಡ. ಮಾದರ ಶಿವಭಕ್ತನಾದರೆ, ಆತನ ಹೊರೆಯಲ್ಲಿ ಭೃತ್ಯನಾಗಿಪ್ಪುದು ಕರ ಲೇಸಯ್ಯ. ತೊತ್ತಾಗಿಪ್ಪುದು ಕರ ಲೇಸಯ್ಯ. ಕಾಡ ಸೊಪ್ಪು ತಂದು ಒಲೆಯಲ್ಲಿ ಹುರಿದಿಟ್ಟುಕೊಂಡಿಪ್ಪುದೀಗ ನಮ್ಮ ಕೂಡಲಸಂಗನ ಶರಣರು.

೫. "ಇತ್ತ ಬಾ" ಎನ್ನದವನ ಹತ್ತೆ ಹೊದ್ದಲು ಬೇಡ. "ಇತ್ತ ಬಾ" ಎಂದ ಸದ್ಭಕ್ತನ ಮನೆಯ ಬಾಗಿಲ ಹತ್ತಿರ್ಪೆ ಕಾಣಾ ರಾಮನಾಥಾ.

೬. ಜ್ಞಾನದ ಬಲದಿಂದ ಅಜ್ಞಾನ ಕೆಡುವುದು ನೋಡಯ್ಯ. ಜ್ಯೋತಿಯ ಬೆಳಗಿಂದ ಕತ್ತಲೆ ಕೆಡುವುದು ನೋಡಯ್ಯ. ಪರುಷದ ಬಲದಿಂದ ಅವಲೋಹ ಕೆಡುವುದು ನೋಡಯ್ಯ. ಕೂಡಲಸಂಗಮದೇವಯ್ಯ, ನಿಮ್ಮ ಅನುಭಾವಿಗಳ ಸಂಗದಿಂದ ಎನ್ನ ಭವ ಕೆಡುವುದು ನೋಡಯ್ಯ.

೭. ಅರಿಯದವರೊಡನೆ ಸಂಗ ಮಾಡಿದರೆ, ಕಲ್ಲು ಹೊಯ್ದು ಕಿಡಿಯ ತೆಗೆದು ಕೊಂಬಂತೆ. ಬಲ್ಲವರೊಡನೆ ಸಂಗ ಮಾಡಿದರೆ ಹೊಸೆದು ಬೆಣ್ಣೆಯ ತೆಗೆದು ಕೊಂಬಂತೆ. ಚನ್ನ ಮಲ್ಲಿಕಾರ್ಜುನಯ್ಯ ನಿಮ್ಮ ಶರಣರ ಸಂಗ ಕರ್ಪುರಗಿರಿಯ ಉರಿಯು ಕೊಂಬಂತೆ.

೮. ಆರಾರ ಸಂಗವೇನೇನ ಮಾಡುವದಯ್ಯಾ? ಕೀಡೆ ಕುಂಡಲಿಗನಾಗದೇ ಅಯ್ಯಾ? ಚಂದನದ ಸನ್ನಿಧಿಯಲ್ಲಿ ಪರಿಮಳ ತಾಗಿ, ಬೇವು ಬೊಬ್ಬುಲಿ ಶ್ರೀಗಂಧಗಳಾಗವೇ? ನಮ್ಮ ಕೂಡಲಸಂಗನ ಶರಣರ ಸನ್ನಿಧಿಯಿಂದ ಕರ್ಮ ನಿರ್ಮಳವಾಗದಿಹುದೇ?

೯. ನಚ್ಚು ಮಚ್ಚಿನ ಲಿಂಗವನರ್ಪಿಸುವಲ್ಲಿ, ಮುಚ್ಚು ಒಳಕೊಂಡಿತ್ತು. ಕರ್ಪೂರದ ಕರಡಿಗೆಯು ಗಾಸಿ ಮಾಡಿದಂತಾಯಿತ್ತು. ಲಿಂಗಾನುಭವಿಗಳ ಸಂಗದಿಂದಾನು ಕಣ್ದೆರೆದೆನು ಕಾಣಾ ಗುಹೇಶ್ವರಾ.

೧೦. ಒಲ್ಲೆನಯ್ಯಾ, ಒಲ್ಲೆನಯ್ಯಾ, ನಿಮ್ಮವರಲ್ಲದವರ ಸಂಗ. ಒಲ್ಲೆನಯ್ಯಾ, ಜಗವೆಲ್ಲರಿಯಲು ಒಲ್ಲೆನಯ್ಯಾ, ಒಲ್ಲೆನಯ್ಯಾ. ನೀ ಮುನಿದರೆ ಮುನಿ. ಕೂಡಲಸಂಗಮದೇವಾ ನಿಮ್ಮ ಪುರಾತನರಾಣೆ.

೧೧. ಅಯ್ಯಾ ನಿಮ್ಮಲ್ಲಿ ಆಯುವ ಬೇಡುವೆನೆ? ಸಂಸಾರಕಾಂಜುವೆನಯ್ಯಾ! ನಿಮ್ಮಲ್ಲಿ ಶ್ರೀಯ ಬೇಡುವೆನೇ? ಪರಾಂಗನೆಯ ಪಾಪ. ಅಯ್ಯಾ, ನಿಮ್ಮಲ್ಲಿ ಮುಕ್ತಿಯ ಬೇಡುವೆನೇ? ಅದು ನಿಮ್ಮ ಪದವಿ. ಸಕಳೇಶ್ವರ ದೇವಾ, ನಾನೇನುವನೊಲ್ಲೆ ನಿಮ್ಮ ಶರಣರ ಸಂಗವುಳ್ಳರೆ ಸಾಕು.

---

## ದೈನ್ಯಭಾವದಿಂದಿರು.

೧. ಮೇಲಾಗಲೊಲ್ಲೆನು ಕೀಳಾಗಲೊಲ್ಲದೆ. ಕೀಳಿಂಗಲ್ಲದೆ ಹಯನ ಕರೆವುದೇ? ಮೇಲಾಗಿ ನರಕದೊಳಗೋಲಾಡಲಾರೆನು. ನಿಮ್ಮ ಶರಣರ ಪಾದಕ್ಕೆ ಕೀಳಾಗಿರಿಸು ಮಹಾದಾನಿ ಕೂಡಲಸಂಗಮದೇವಾ.

೨. ಕಾಗೆ ವೃಷ್ಟಿಸುವ ಹೊನ್ನ ಕಳಶವಹುದರಿಂದ, ಒಡೆಯರು ಜೋಗೈಸುವ ಚಮ್ಮಾವುಗೆಯ ಮಾಡಯ್ಯಾ! "ಕರ್ಮಾವಲಂಬನಂ ಕೇಚಿತ್ ಕೇಚಿತ್ ಜ್ಞಾನಾವಲಂಬನಂ ವಯಂ ತು ಶಿವಭಕ್ತಾನಾಂ

ಪಾದುಕಸ್ಯಾವಲಂಬನಂ॥" ಎಂದುದಾಗಿ ಕೂಡಲಸಂಗಮದೇವಾ. ನಿಮ್ಮ ಸೆರಗೊಡ್ಡಿ ಬೇಡುವೆನು. ಇದೊಂದೇ ವರವ ಕರುಣಿಸಯ್ಯಾ.

೩. ಅರಸರ ಮನೆಯಲ್ಲಿ ಅರಸಿಯಾಗಿಪ್ಪುದರಿಂದ ಭಕ್ತರ ಮನೆಯಲ್ಲಿ ತೊತ್ತಾಗಿಪ್ಪುದು ಕರ ಲೇಸಯ್ಯಾ. ತಾರೌ ಅಗ್ಗವಣಿಯ, ನೀಡೌ ಪತ್ರೆಯ, ಲಿಂಗಕ್ಕೆ ಬೋನವ ಹಿಡಿಯೌ ಎಂಬರು. ಕೂಡಲಸಂಗನ ಶರಣರ ಮಹಾಮನೆಯಲ್ಲಿ ಒಕ್ಕುದನುಣ್ಣೌ ತೊತ್ತೇ ಎಂಬರು.

೪. ಕೀಳು ಡೋಹರ ಕಕ್ಕ, ಕೀಳು ಮಾದರ ಚನ್ನ, ಕೀಳು ವಹಿಲದೇವ, ಕೀಳು ಉಗ್ಘಟಯ್ಯ. ಕೀಳಿಂಗಲ್ಲದೆ ಹಯನ ಕರೆಯದು ಕಾಣಾ ರಾಮನಾಥಾ.

೫. ಎತ್ತಪ್ಪೆ ಶರಣಂಗೆ. ತೊತ್ತಪ್ಪೆ ಶರಣಂಗೆ. ಭೃತ್ಯನಾಗಿ ಸದ್ಭಕ್ತರ ಮನೆಯ ಬಾಗಿಲ ಕಾಯ್ದಿಪ್ಪ ಸೊಣಗನಪ್ಪೆ. ಕರ್ತಾರ, ನಿನಗೆ ಕರವೆತ್ತಿ ಪೊಡೆವಡುವ ಭಕ್ತರ ಮನೆಯ ಹಿತ್ತಿಲ ಬೇಲಿಯಾಗಿಪ್ಪೆನೈ, ರಾಮನಾಥಾ.

೬. ಎನಗಿಂತ ಕಿರಿಯರಾರಿಲ್ಲ. ಶಿವಭಕ್ತರಿಗಿಂತ ಹಿರಿಯರಾರಿಲ್ಲ. ನಿಮ್ಮ ಪಾದ ಸಾಕ್ಷಿ, ಎನ್ನ ಮನಸ್ಸಾಕ್ಷಿ. ಕೂಡಲಸಂಗಮದೇವಾ, ಎನಗಿದೇ ದಿಬ್ಯ.

೭. ಎನ್ನಲ್ಲಿ ನಿನ್ನ ಮೇಲಣ ಭಕ್ತಿ ಸಾಸಿವೆಯ ಷಡ್ಭಾಗದಿಸಿತಿಲ್ಲ. ಎನ್ನ ಭಕ್ತನೆಂಬರು. ನಾನಾವ ಪಾಪವ ಮಾಡಿದೆನೋ? ಬೆಳೆಯದ ಮುನ್ನ ಕೊಯ್ಯುವರೇ ಹೇಳಯ್ಯಾ? ಇರಿಯದ ವೀರ, ಇಲ್ಲದ ಸೊಬಗನು ಎಲ್ಲ ಒಡೆಯರು ಏರಿಸಿ ನುಡಿವರು. ಎನಗಿದು ವಿಧಿಯೇ ಕೂಡಲಸಂಗಮದೇವ?

೮. ಎನ್ನವರೊಲಿದು ಹೊನ್ನ ಶೂಲದಲಿಕ್ಕಿದರು, ಎನ್ನ ಹೊಗಳಿ ಹೊಗಳಿ. ಎನ್ನ ಹೊಗಳತೆ ಎನ್ನ ಮೈಗೊಂಡಿತಲ್ಲಾ! ಅಯ್ಯಾ ನಿಮ್ಮ ಮನ್ನಣೆಯೇ ಮಸೆದಲಗಾಗಿ ತಾಗಿತ್ತಲ್ಲ! ಅಯ್ಯಾ

ನೊಂದೆನು, ಸೈರಿಸಲಾರೆನು. ಕೂಡಲಸಂಗಮದೇವಾ, ನೀವೆನಗೊಳ್ಳಿದನಾದರೆ, ಎನ್ನ ಹೊಗಳತೆಗಡ್ಡಬಾರಾ ಧರ್ಮೀ.

೯. ಬ್ರಹ್ಮ ಪದವಿಯನೊಲ್ಲೆ, ವಿಷ್ಣು ಪದವಿಯನೊಲ್ಲೆ, ರುದ್ರ ಪದವಿಯನೊಲ್ಲೆ, ನಾನಾ ಮತ್ತಾವ ಪದವಿಯನೊಲ್ಲೆನಯ್ಯಾ. ಕೂಡಲಸಂಗಮದೇವ, ನಿಮ್ಮ ಸದ್ಭಕ್ತರ ಪಾದವನರಿದಿಪ್ಪ ಮಹಾ ಪದವಿಯನೇ ಕರುಣಿಸಯ್ಯಾ.

೧೦. ಮಾವಿನ ಕಾಯೊಳಗೊಂದು ಎಕ್ಕೆಯ ಕಾಯಿ ನಾನಯ್ಯಾ. ಆನು ಭಕ್ತನೆಂತೆಂಬೆನೆ, ನಿಮ್ಮ ಶರಣರ ಮುಂದೆ ನಾಚಿಕೆ ಇಲ್ಲದೆ? ಕೂಡಲ ಸಂಗನ ಶರಣರ ಮುಂದೆ ನಾನೆಂತು ಭಕ್ತನಯ್ಯಾ?

೧೧. ಆನು ಭಕ್ತನಲ್ಲಯ್ಯಾ, ಆನು ವೇಷಧಾರಿಯಯ್ಯಾ. ಕಟುಕಕೆತ್ತಗ, ಕೊಲ್ಲುಗನೆಂಬುದು ಎನ್ನ ಹೆಸರಯ್ಯಾ. ಕೂಡಲ ಸಂಗಮದೇವಾ ನಿಮ್ಮ ಶರಣರ ಮನೆಯ ಮಗ ನಾನಯ್ಯಾ.

೧೨. ಡಂಬು ಡಳ್ಳು ಎನ್ನನಯ್ಯಾ. ಡಂಬಕನೆಂಬುವ ನಾನಯ್ಯಾ. ನಿಮ್ಮ ನಂಬಿದ ಶರಣರ ಡಿಂಗರಿಗ ನಾನು ಕೂಡಲ ಸಂಗಮದೇವಾ.

---

## ವಿದ್ಯಾವಂತನಾದರೂ ಸದಾಚಾರಿಯಾಗಿರುವದು.

೧. ವೇದಶಾಸ್ತ್ರ ಪುರಾಣಾಗಮ ಗ್ರಂಥಂಗಳ ನೋಡಿದವರೆಲ್ಲರೇನು ಹಿರಿಯರೆಂಬೆನೆ? ಅಲ್ಲಲ್ಲ, ನಿಲ್ಲು, ಮಾಣು. ಅವರು ಹಿರಿಯರಾದೊಡೆ, ನಟ್ಟುವ, ಗಣಿಯಾಟ, ಮಿಣಿಯಾಟ, ಅದೃಶ್ಯ ಕರಣ ಅಗ್ನಿಸ್ತಂಭ, ಆಕರ್ಷಣ, ಜೌಷಷ್ಟಿ ಕಲಾವಿದ್ಯೆಯ ಸಾಧಿಸಿದ ಡೊಂಬನೇನು ಕಿರಿಯನೇ? ಇದು ಹಿರಿದು ಕಿರಿದಿನ ಪರಿಯಲ್ಲ. ಹಿರಿದು ಕಿರಿದಿನ ಪರಿ ಬೇರೆ ಕಾಣಿರಣ್ಣಾ. ಇವು ಉದರ ಪೋಷಣ ವಿದ್ಯೆ ಎನಿಸುವವು. ಅವರನೆಂತು ಸರಿ ಎಂಬೆನಯ್ಯಾ ಲಿಂಗವಂತಂಗೆ? ಇದು ಕಾರಣ,

ಗುಣ, ಜ್ಞಾನ, ಧರ್ಮ, ಆಚಾರ, ಶೀಲ ಸಾಧಿಸಿದಾತನೇ ಹಿರಿಯ ಕಾಣಾ ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವರಾ.

೨. ವೇದಶಾಸ್ತ್ರ ಬಲ್ಲವರ ಹಿರಿಯರೆನ್ನೆ. ಮಾಯಾಭ್ರಾಂತು. ಕವಿತೆ ಗೀತಜ್ಞರ ಹಿರಿಯರೆನ್ನೆ. ಇವರು ಹಿರಿಯರುಗಳೇ ಯಾಗ ನಟ್ಟುರಿಗೆ ಪ್ರಾಣರು? ಇವರಿಂದಧಿಕವ ಸಾಧಿಸುವರೇನು ಹಿರಿಯರೇ? ಇಂತು ವಿದ್ಯಾ, ಗುಣ, ಜ್ಞಾನ, ಧರ್ಮ, ವಿಚಾರ ಶೀಲಂಗಳ ಸಮಸ್ತ ಕೂಡಲಸಂಗನ ಶರಣರು ಸಾಧಿಸಿದ ಸಾಧನೆಯ ಸಾಧಿಸುವುದು.

೩. ಜ್ಞಾನಿಗಳು ತಾವಾದ ಬಳಿಕ, ಮುಕುರದ ಬಿಂಬದಂತಿರಬೇಕು. ಜ್ಞಾನಿಗಳು ತಾವಾದ ಬಳಿಕ, ಜ್ಞಾನದಲ್ಲಿ ಕನಕದಂತಿರಬೇಕು. ಜ್ಞಾನಿಗಳು ತಾವಾದ ಬಳಿಕ, ಸಂಶಯ ರಹಿತರಾಗಿರಬೇಕು. ಜ್ಞಾನಿಗಳು ತಾವಾದ ಬಳಿಕ, ಪಾಪವಾಸನೆ ತೋರದಿರಬೇಕು. ಜ್ಞಾನಿಗಳು ತಾವಾದ ಬಳಿಕ, ಪರಿಪೂರ್ಣ ಜಗತ್ತಿಂದರಿಯಬೇಕು. ಜ್ಞಾನಿಗಳು ತಾವಾದ ಬಳಿಕ, ಅನ್ಯರ ನುಡಿಗೊಳಗಾಗಬಾರದು. ಜ್ಞಾನಿಗಳು ತಾವಾದ ಬಳಿಕ, ಅನ್ಯರ ನಿಂದೆಗೆ ಒಳಗಾಗಬಾರದು. ಜ್ಞಾನಿಗಳು ತಾವಾದ ಬಳಿಕ, ಗುರು ಹಿರಿಯರಿಗಂಜಿ ನಡೆಯಬೇಕು. ಜ್ಞಾನಿಗಳು ತಾವಾದ ಬಳಿಕ, ಅನ್ಯರ ಸ್ತ್ರೀ ಮಾತೆಯಂತರಿಯಬೇಕು. ಜ್ಞಾನಿಗಳು ತಾವಾದ ಬಳಿಕ, ವಿಶ್ವಾಸ ಘಾತಕವ ಮಾಡಬಾರದು. ಜ್ಞಾನಿಗಳು ತಾವಾದ ಬಳಿಕ, ಪರದೂಷಣೆಯ ಮಾಡಬಾರದು. ಜ್ಞಾನಿಗಳು ತಾವಾದ ಬಳಿಕ, ಪರದ್ರವ್ಯವನಪಹರಿಸಬಾರದು. ಜ್ಞಾನಿಗಳು ತಾವಾದ ಬಳಿಕ, ಗುರುಸೇವೆ, ಲಿಂಗಪೂಜೆ, ಜಂಗಮದಾಸೋಹವ ಬಿಡಬಾರದು. ಜ್ಞಾನಿಗಳು ತಾವಾದ ಬಳಿಕ, ನುಡಿಕೊಟ್ಟು ತಪ್ಪಬಾರದು. ಜ್ಞಾನಿಗಳು ತಾವಾದ ಬಳಿಕ, ವಚನವ ಕೊಡಬಾರದು. ಜ್ಞಾನಿಗಳು ತಾವಾದ ಬಳಿಕ, ಅಸತ್ಯವ ನುಡಿಯಬಾರದು. ಜ್ಞಾನಿಗಳು ತಾವಾದ ಬಳಿಕ, ರಾಜರ ಮುಂದೆ ಅಸತ್ಯ ಸಾಕ್ಷಿಯ ನುಡಿಯಬಾರದು. ಜ್ಞಾನಿಗಳು ತಾವಾದ ಬಳಿಕ, ಜನರಪವಾದಕ್ಕೆ

ಅನುಕೂಲವಾಗಬಾರದು. ಜ್ಞಾನಿಗಳು ತಾವಾದ ಬಳಿಕ, ಮತಾಭಿಮಾನವ ತೋರಬಾರದು. ಜ್ಞಾನಿಗಳು ತಾವಾದ ಬಳಿಕ, ಕಪಿಲಸಿದ್ಧಮಲ್ಲಿಕಾರ್ಜುನಗೆ ಆವ ಮಾರ್ಗದಿಂ ಚ್ಯುತನಾಗಬಾರದು. ಇವರಂತೆ ವರ್ತಿಸಬೇಕು ಕೇಳಾ.

೪. ಕಾಯದ ಕಳವಳದಲ್ಲಿ ಕಂಗೆಡುವನಲ್ಲ ಶರಣ. ಜೀವನೋಪಾಧಿಕೆಯ ಹೊದ್ದುವನಲ್ಲ ಶರಣ. ಭಾವದ ಭ್ರಮೆಯಲ್ಲಿ ಸುಳಿವನಲ್ಲ ಶರಣ. ಮನದ ಮರವೆಯಲ್ಲಿ ಮಗ್ನನಲ್ಲ ಶರಣ. ಕಂಗಳ ಕತ್ತಲೆಯಲ್ಲಿ ಸುತ್ತಿ ಸುಳಿವನಲ್ಲ ಶರಣ. ಇಂದ್ರಿಯಂಗಳ ವಿಚಾರದಲ್ಲಿ ಹರಿದಾಡುವನಲ್ಲ ಶರಣ. ಪರತರ ಲಿಂಗದ ಬೆಳಗಿನೊಳಗೆ ಬೆರೆದು, ತೆರಹಿಲ್ಲದೆ ಬೆಳಗುವ ಗಂಭೀರ ಶರಣನ ನಿಲುವಿಂಗೆ ನಮೋ ನಮೋ ಎಂಬೆನಯ್ಯ ಅಖಂಡೇಶ್ವರಾ.

೫. ಶರಣಸ್ಥಲದ ಕುರುಹಿನ ಮಾರ್ಗವನರಿಯದೆ, ನಾನು ಶರಣ, ತಾನು ಶರಣನೆಂದು ನುಡಿವ ಕರ್ಮಜೀವಿಗಳ ಮುಖವ ನೋಡಲಾಗದು ಅದೇನು ಕಾರಣವೆಂದೊಡೆ, ತಾವು ಶರಣರಾದೊಡೆ, ತಮ್ಮ ಚಿತ್ತದ ಕೊನೆಯಲ್ಲಿ ಮುಸುಕಿದ ಕತ್ತಲೆಯನೆಲ್ಲ ಕಳೆಯಬೇಕು. ತಾವು ಶರಣರಾದೊಡೆ, ಆತ್ಮಸ್ತುತಿ ಅಷ್ಟಮದಂಗಳ ಕತ್ತಲೆಯ ಕಡಿಯಬೇಕು. ತಾವು ಶರಣರಾದೊಡೆ ತಮ್ಮ ಲಿಂಗದಲ್ಲಿ ಅತ್ತಿತ್ತ ಹರಿದಾಡುವ ಮನವ ಹಿಡಿತಂದು ನಿಕ್ಷೇಪವ ಮಾಡಬೇಕು. ತಾವು ಶರಣರಾದೊಡೆ, ನಿತ್ಯಾನಿತ್ಯವನರಿದು, ತತ್ವಾತತ್ವಂಗಳ ವ್ಯತಿಕರಿಸಿ, ಮಹಾಜ್ಞಾನ ಮೊತ್ತದಲ್ಲಿ ಸುಳಿಯಬೇಕು. ಇಂತೀ ಭೇದವನರಿಯದೆ ತುತ್ತುಸವಿದುಂಡು ಮರ್ತ್ಯದ ವಿಷಯ ಪ್ರಪಂಚ ಸುಖದಲ್ಲಿ ವ್ಯವಹರಿಸಿ, ಅಜ್ಞಾನ ಕತ್ತಲೆಯಲ್ಲಿ ಸೆರೆಯ ಸಿಕ್ಕಿ, ಮುಂದುಗಾಣದೆ, ಮುಕ್ತಿಯ ಹೊಲಬುದಪ್ಪಿ ಹೋಗುವ ವ್ಯರ್ಥ ಪ್ರಾಣಿಗಳ ಕಂಡು ನಗುತಿರ್ದೆನು ನೋಡಾ ನಮ್ಮ ಅಖಂಡೇಶ್ವರಾ.

೬. ಮನವಚನ ಕಾಯದಲ್ಲಿ ಆಸೆ ಇಲ್ಲದ ಶರಣನು, ಅರ್ಥಪ್ರಾಣಾಭಿಮಾನದಲ್ಲಿ ಲೋಭವಿಲ್ಲದ ಶರಣನು, ವಾಕ್ಕು, ಪಾಣಿ,

ಪಾದ, ಪಾಯು, ಗುಹ್ಯವೆಂಬ ಕರ್ಮೇಂದ್ರಿಯಂಗಳ ಹೊದ್ದಲೀಯ್ಯದ ಶರಣನು, ಲಿಂಗ ಜಂಗಮ ಪ್ರಸಾದ ಸಾರಾಯ ಶರಣನು ಕೂಡಲಚನ್ನಸಂಗನ ಅನುಭಾವ ಸಾರಾಯ ಶರಣನು.

---

## ಶರಣರನ್ನು ಮನ್ನಿಸು.

೧. ಅಯ್ಯಾ ಮರಮರ ಮಥನದಿಂದೆ ಅಗ್ನಿ ಹುಟ್ಟಿ, ಆ ಮರನೆಲ್ಲವ ಸುಡದಿಪ್ಪುದೇನಯ್ಯ? ಮಹಾನುಭಾವರ ಘನ ಮಥನದಿಂದ ಜ್ಞಾನಾಗ್ನಿ ಪುಟ್ಟಿ, ಎನ್ನ ತನು ಗುಣ ಎನ್ನ ಮರಣ ನಾಸ್ತಿ. ಎನ್ನ ಪ್ರಾಣಗುಣಂಗಳು ಸುಡದಿಪ್ಪವೇ ಅಯ್ಯಾ? ಇದು ಕಾರಣ ಕೂಡಲ ಸಂಗಮದೇವ, ನಿಮ್ಮ ಮಹಾನುಭಾವರ ಸಂಗವನೆ ಕರುಣಿಸಯ್ಯ.

೨. ಕಾಯದ ವಿಕಾರ ಕಾಡಿಹುದಯ್ಯ. ಮನದ ವಿಕಾರ ಕೂಡಿಹುದಯ್ಯ. ಇಂದ್ರಿಯ ವಿಕಾರ ಸುಳಿಹುದಯ್ಯ. ಸುಳಿಪಿನೊಳಗೆ ಸುಳಿವುತ್ತಲಿದ್ದೇನೆ. ಸಿಲುಕಿಸದಿರಯ್ಯ ಅನ್ಯ ಚಿತ್ತವನಿರಿಸದಿರಯ್ಯ. ನಿಮ್ಮ ಚಿತ್ತದಿ ಇರಿಸಯ್ಯ. ಅನುಪಮ ಸುಖ ಸಾರಾಯ ಶರಣರಲ್ಲಿ ಕೂಡಿಸು ಕೂಡಲಸಂಗಮದೇವಯ್ಯ.

೩. ಕಾಮವ ತೊರೆದಾತ, ಹೇಮವ ಜರಿದಾತ, ಭಾನುವಿನ ಉದಯಕ್ಕೆ ಒಳಗಾಗದಾತ ಶರಣನು. ಆವಾಗಳೂ ನಿಮ್ಮ ಮಾಣದೆ ನೆನೆವರ ಮನೆಯಲ್ಲಿ ಶ್ವಾನನಾಗಿರಿಸು ಮಹಾದಾನಿ ಕೂಡಲಸಂಗಮದೇವಾ?

೪. ಕಾಲಿಲೊದೆದು ಜಡಿದು ನುಡಿವರಯ್ಯ. ಭಕ್ತಿಯೈದಲೆಂದು, ಎನ್ನ ಜರಿವರಯ್ಯ, ನುಡಿವರಯ್ಯ. ಕೂಡಲಸಂಗನ ಶರಣರು ಒಡೆಯರಾಗಿ.

೫. ಸೂರ್ಯನುದಯ ತಾವರೆಗೆ ಜೀವಾಳ. ಚಂದ್ರಮನುದಯ ನೈದಿಲೆಗೆ ಜೀವಾಳ. ಕೂಪರ ಠಾವಿನಲ್ಲ ಕೂಟ ಜೀವಾಳ.

ಒಲಿದು ಹಾವಿನಲ್ಲಿ ನೋಟವೇ ಜೀವಾಳ. ಕೂಡಲಸಂಗನ ಶರಣರ ಬರವೆನಗೆ ಪ್ರಾಣ, ಜೀವಾಳವಯ್ಯಾ.

೬. ಅಡಿಗಡಿಗೆ ದೇವರಾಣೆ, ಅಡಿಗಡಿಗೆ ಭಕ್ತರಾಣೆ, ಅಡಿಗಡಿಗೆ ಗುರುವಿನಾಣೆ ಎಂಬ ವಚನ ಹೊಲ್ಲ. ಅವರು ಮುಂದೆ ಪದಕ್ಕೆ ಸಲ್ಲರು. ಆದಿಯಿಂದ ಬಂದ ವಚನವೆಂದು ಮುಂದೆ ಶರಣರ ಕೂಡೆ ಸರಸವನಾಡಿದರೆ, ದ್ರೋಹ ತಪ್ಪದು. ನಗುತಲಿರಿದುಕೊಂಡರೆ. ಅಲಗು ನಡದಿಹುದೇ ಕೂಡಲ ಸಂಗಮದೇವಾ?

೭. ಅರಗಿನ ಪುತ್ಥಳಿಯು ಉರಿಯ ನಾಲಿಗೆ ಹೊಯ್ದು ಮಾತನಾಡಿಸುವ ಸರಸ ಬೇಡವೊ. ಬೆಣ್ಣೆಯ ಬೆನಕಂಗೆ ಕೆಂಡದುಂಡಲಿಗೆಯನೆ ಮಾಡಿ, ಚಲ್ಲವಾಡಿದರೆ, ಹಲ್ಲು ಹೋಹುದು ಮಾಣ್ಬುದೇ? ಕೂಡಲ ಸಂಗನ ಶರಣರೊಡನೆ ಸರಸವಾಡಿದರೆ, ಅದು ವಿರಸ ಕಾಣಿರಣ್ಣಾ.

೮. ಹಾವಿನ ಹೆಡೆಯ ಕೊಂಡು ಕನ್ನೆಯ ತುರಿಸಿಕೊಂಬಂತೆ, ಉರಿಯ ಕೊಳ್ಳಿಯ ಕೊಂಡು ಮಂಡೆಯ ಸಿಕ್ಕು ಬಿಡಿಸುವಂತೆ, ಹುಲಿಯ ಮೀಸೆಯ ಹಿಡಿದುಕೊಂಡು ಉಯ್ಯಾಲೆಯನಾಡುವಂತೆ, ಕೂಡಲಸಂಗನ ಶರಣರೊಡನೆ ಮರೆದು ಸರಸವಾಡಿದರೆ, ಸುಣ್ಣದ ಕಲ್ಲು ಮಡಿಲಲ್ಲಿ ಕಟ್ಟಿಕೊಂಡು, ಮಡುವಿನಲ್ಲಿ ಬಿದ್ದಂತೆ.

೯. ಉರಿವ ಕೊಳ್ಳಿಯ ಮಂಡೆಯಲಿಕ್ಕಿದರೆ, ಉರಿವುದು ಮಾಬುದೇ? ಕಲ್ಲ ಗುಗ್ಗರಿಯ ಮೆಲ್ಲಿದಡೆ, ಹಲ್ಲು ಹೋಹುದು ಮಾಬುದೇ? ಶರಣರೊಡನೆ ಸರಸವಾಡಿದರೆ, ನರಕ ತಪ್ಪದು ಕಾಣಾ ಕೂಡಲಸಂಗಮದೇವಾ.

# ನೈತಿಕ ಸಾಮಾನ್ಯ ವಚನಗಳು.

## ಭಾಗ ೪

೧. ಸಕಲೇಂದ್ರಿಯಂಗಳಲ್ಲಿ ವಿಕಾರಿಸುವ ಮನವ ಸೆಳೆದು ನಿಂದಾತ ಸುಖಿ. ಪಂಚೇಂದ್ರಿಯಂಗಳ ಇಚ್ಛೆಯಲ್ಲಿ ಕೀಳು ಮನಗೊಂಡು ಸುಳಿವಾತ ದುಃಖಿ. ಮನಸ್ಸು ಬಹಿರ್ಮುಖವಾಗಲು, ಮಾಯಾ ಪ್ರಪಂಚಿ. ಮನವಂತರ್ಮುಖವಾದರೆ, ಅವಿರಳ ಜ್ಞಾನಿ. ಮನವು ಮಹದಲ್ಲಿ ನಿಂದಿರಲಾತ ಮುಕ್ತನು. ಮನೋಲಯವಾದರೆ, ಸೌರಾಷ್ಟ್ರ ಸೋಮೇಶ್ವರ ಲಿಂಗದಲ್ಲಿ ಅಭೇದ್ಯನು.

೨. ಕಾಯದ ಕಳವಳವ ಗೆಲಿಲರಿಯದವರು ಮಾಯಾಪಾಶದಲ್ಲಿ ಬಂಧನವುಳ್ಳ ಸಂಸಾರಿಗಳಹರಲ್ಲದೆ ಅವರು ಜ್ಞಾನಿಗಳಾಗಲರಿಯರು. ಅವರಿಗಿನ್ನೆಂದಿಂಗೆ ಮುಕ್ತಿಯಹುದೋ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ?

೩. ಶಮೆ ದಮೆ ವಿವೇಕ ವೈರಾಗ್ಯ ಪರಿಪೂರ್ಣಭಾವ ಶಾಂತಿ ಕಾರುಣ್ಯ ಶ್ರದ್ಧೆ ಸತ್ಯ ಸದ್ಭಕ್ತಿ ಶಿವಜ್ಞಾನ ಶಿವಾನಂದ ಉದಯವಾದ ಮಹಾ ಭಕ್ತನ ಹೃದಯದಲ್ಲಿ ಶಿವನಿಪ್ಪ. ಆತನ ದರ್ಶನ ಸ್ಪರ್ಶನ ಸಂಭಾಷಣೆಯಿಂದ ಕೇವಲ ಮುಕ್ತಿಯಪ್ಪುದು ತಪ್ಪದಯ್ಯಾ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ.

೪. ಸಜ್ಜನ ಸದ್ಭಾವಿ ಅನ್ಯರಲ್ಲಿ ಕಯ್ಯಾಂತು ಬೇಡ. ಲಿಂಗವ ಮುಟ್ಟಿದ ಕೈ ಮೀಸಲು. ಕಂಗಳಲ್ಲಿ ಒಸೆದು ನೋಡಾ ಪರವಧುವ. ಮನದಲ್ಲಿ ಅನ್ಯವ ನೆನೆಯ. ಮಾನವರ ಸೇವೆಯ ಮಾಡ. ಅಂಗದ ಹಂಗನೊಲ್ಲ. ಧನದಲ್ಲಿ ವಂಚನೆ ಇಲ್ಲ, ಕೂಡಲಸಂಗಮದೇವ ನಿಮ್ಮ ಶರಣ.

೫. ಮೃಡನೇ, ನಿಮ್ಮ ಪುರಾತನರ ಕಾಣುತ್ತ, ತಡೆಯದೆ ಇದಿರೆದ್ದು ಪೊಡೆಮಡೆನಾಗಿ ಬಿಡದು ನಾಚಿಕೆ. ಸುಡಲಿ ಎನ್ನ

ನುಡಿಯು. ಸಡಿಲದು ಎನ್ನ ಅಹಂಕಾರವು ನೋಡಯ್ಯ. ಬಡವು ನದವನ ಜಡಿದು ನಡಿಸಯ್ಯ ಗುಹೇಶ್ವರಾ.

೬. ಸಿಂಹದ ಮುಂದೆ ಜಗಿದಾಟವೇ? ಪ್ರಳಯಾಗ್ನಿಯು ಮುಂದೆ ಪತಂಗದಾಟವೇ? ಸೂರ್ಯನ ಮುಂದೆ ಕೀಟದಾಟವೇ? ನಿಮ್ಮ ಮುಂದೆ ಎನ್ನಾಟವೇ ಕಲಿ ದೇವರದೇವಾ?

೭. ಆನೆ ಆ ದಾರಿಯಲ್ಲಿ ಹೋಯಿತ್ತೆಂದರೆ, ಆಡು ಆ ದಾರಿಯಲ್ಲಿ ಹೋಯಿತ್ತೆನ್ನಬಹುದೇ? ಸಂಗನ ಶರಣರಿಗೆ ಆನು ಸರಿಯೆ ಹೇಳಾ ಕೂಡಲ ಸಂಗಮದೇವಾ?

೮. ಲಿಂಗಭಕ್ತನೆಂದು ಜಗವೆಲ್ಲ ಸಾರುತ್ತಿರ್ಪುದು. ಲಿಂಗಭಕ್ತನ ಇಂಬಾವುದೆಂದರಿಯರು. ಲಿಂಗಭಕ್ತ ಹಮ್ಮು ಬಿಮ್ಮಿನವನೇ? ಲಿಂಗಕ್ಕೆ ಸೀಮೆಯಾದವನೇ ಗುಹೇಶ್ವರಾ?

೯. ಭಕ್ತನ ಮತವೇನು ಭಕ್ತ ಹೋದಡೆ, ಆ ಭಕ್ತ ಭಕ್ತಂಗೆ ಅಡಿಯಿಟ್ಟು ಇದಿರೆದ್ದು ನಡೆದು, ಹೊಡೆಗೆಡೆದು, ಒಡಗೊಂಡು ಬಂದು ವಿಭೂತಿ ವೀಳೆಯವನಿಕ್ಕಿ, ಪಾದಾರ್ಚನೆಯಂ ಮಾಡಿ. ಸಮಯವನರಿತು ಲಿಂಗಾರ್ಚನೆಯಂ ಮಾಡಿಸಿ, ಓಲಾಡುತಿರ್ಪುದೇ ಭಕ್ತಿ. ಹೀಗಲ್ಲದೆ, ಬೆಬ್ಬನೆ ಬೆರೆತು, ಬೆಬ್ಬನೇ ಬೀಗಿ. ಅಹಂಕಾರ ಭರಿತನಾಗಿಪ್ಪನ ಮನೆಯು ಲಿಂಗ ಸನುಮತರು ಹೊಗರು ಕಾಣಾ ರಾಮನಾಥಾ.

೧೦. ಅದ್ವೈತವ ನುಡಿದು ಅಹಂಕಾರಿಯಾದೆನಯ್ಯಾ. ಬ್ರಹ್ಮವ ನುಡಿದು, ನಾನು ಭ್ರಮಿತನಾದೆನಯ್ಯಾ. ಶೂನ್ಯವ ನುಡಿದು, ಸುಖ ದುಃಖಕ್ಕೆ ಗುರಿಯಾದೆನಯ್ಯಾ. ಗುಹೇಶ್ವರಾ, ನಿಮ್ಮ ಶರಣ ಸಂಗನ ಬಸವಣ್ಣನ ಸಾನ್ನಿಧ್ಯದಿಂದಾನು ಸದ್ಭಕ್ತನಾದೆನಯ್ಯಾ.

೧೧. ದೇಹವೆಂಬ ಹುತ್ತಿನೊಳಗೆ ನಿದ್ರೆ ಎಂಬ ಕಾಳೋರಗ ನೆದ್ದು ಕಡಿಯಲು ಮೂರ್ಛಿತರಾದರಯ್ಯಾ, ದೇವದಾನವ ಮಾನವರೊಳಗಾದ ಎಲ್ಲ ಜೀವರು. ಆನಾಗ ಬಂದು ಕಡೆಗಿಡಿದಿತ್ತೆಂದು

ಕಾಣಬಾರದು. ದಿವಾರಾತ್ರಿ ಎನ್ನದೆ ಬಂದು ಕಡಿಯಲೊಡನೆ ವಿಷ ಹತ್ತಿ ಸತ್ತವರಿಗಾಸ್ತೆ ಎಂಬಂತೆ ಜೀವನ್ಮೃತರಾದರಯ್ಯಾ. ಶಿವ ಜ್ಞಾನವೆಂಬ ನಿರ್ವಿಷವ ಕಾಣದೆ ನಿದ್ರಾ ಸರ್ಪನ ಬಾಯಗೀಡಾದರು ಕಾಣಾ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ.

---

## ನಿಷ್ಠೆಯುಳ್ಳವನಾಗಿರು.

೧. ನಿಷ್ಠೆಯುಳ್ಳ ಭಕ್ತ ನಟ್ಟಡವಿಯಲ್ಲಿರ್ದಡೇನು? ಅದು ಪಟ್ಟಣವೆಂದೆನಿಸುವುದು. ನಿಷ್ಠೆ ಇಲ್ಲದ ಭಕ್ತ ಪಟ್ಟಣದಲ್ಲಿದ್ದರೂ, ಅದು ನಟ್ಟಡವಿ ಕಾಣಾ ರಾಮನಾಥಾ.

೨. ಒಲಿದು ಒಲಿಸಿಕೊಳ್ಳಬೇಕು. ಒಲಿದಲ್ಲದೆ ಇಲ್ಲ. ಹಲವು ಕೊಂಬೆಗೆ ಹಾರದಿರು ಮರುಳೇ. ಅಟ್ಟಿ ನೋಡುವ, ಮುಟ್ಟಿ ನೋಡುವ, ತಟ್ಟಿ ನೋಡುವ, ಒತ್ತಿ ನೋಡುವ. ಅಟ್ಟಿದಡೆ, ಮುಟ್ಟಿದಡೆ, ತಟ್ಟಿದಡೆ, ಒತ್ತಿದಡೆ, ನಿಷ್ಠೆಯ ಬಿಡದಿರ್ದಡೆ ತನ್ನ ನೀವ ಮಹಾಲಿಂಗ ಕಲ್ಲೇಶ್ವರಾ.

೩. ಮಾರುತನಂತೆ ಮನ, ಮರಾಳನಂತೆ ಬುದ್ಧಿ, ಸಂಚಲಿಸದ ಅಂಬುಧಿಯಂತೆ ಅಂಗ, ಮೊಳೆದೋರದ ವೃಕ್ಷವಂತೆ ನಲೆ ಸಂದಿಹ ಜ್ಞಾನ, ಬಲುಗಯ್ಯನ ತೋಟಿಯ ತೊಡಕಿನಂತೆ ಇಂದ್ರಿಯ ವರ್ಗಾದಿಗಳ ಗೆಲವು, ಆತನೇ ಆತುರ ವೈರಿ ಮಾರೇಶ್ವರಾ.

೪. ಕಟ್ಟಿ ಬಿಡುವನೇ ಶರಣನು? ಬಿಟ್ಟು ಹಿಡಿವನೇ ಶರಣನು? ನಡೆದು ತಪ್ಪುವನೇ ಶರಣನು? ನುಡಿದು ಹುಸಿವನೇ ಶರಣನು? ಭಕ್ತಿಯ ಬಿಡುವನೇ ಶರಣನು? ಸಹಜ ಸಜ್ಜನಿಕೆ ತಪ್ಪಿದರೆ, ಕೂಡಲ ಸಂಗಯ್ಯ ಹಲ್ಲುದೋರಿ ಮೂಗ ಕೊಯ್ಯುವ.

೫. ಆದಂತೆ ಆಗಲಿ, ಮಾದಂತೆ ಮಾಣಲಿ ಎನಲಾಗದು. ನೇಮದಾತಂಗೆ ಛಲಬೇಕು ಛಲಬೇಕಯ್ಯ. ಹಿಡಿದುದ ಬಿಡಲಾಗದು. ಹುಲಿಗೆರೆಯ ವರದ ಸೋಮನಾಥನ ಮನಮುಟ್ಟಿದ ಧೀರನು ಪಿತಕ್ಕಾ ಸೋಲುವನಲ್ಲ.

೬. ಪಾತಕ ಹೊಲೆ ಎಂದರಿದು ಬಿಟ್ಟಲ್ಲಿ, ಮತ್ತನಗುಣವ ಸ್ವೀಕರಿಸ ಬಹುದೇ? ಇವಲ್ಲವೆಂದು, ಬಲ್ಲತನವ ತಾನರಿದು, ಮತ್ತೊಬ್ಬರಲ್ಲಿ ಬೆರಿಸಬಹುದೇ? ಒಡೆದ ಹಂಚಿಂಗೆ, ಹಿಡಿದು ಬಿಟ್ಟ ವ್ರತಕ್ಕೆ ಮತ್ತವನೊಡಗೂಡ ಬಹುದೇ? ಇಂತೀ ಬಿಡುಗಡೆಯನರಿದಲ್ಲಿ ಅನುಸರಣೆಯ ಮಾಡಿದಡೆ, ಎನ್ನೊಡೆಯ ಈಶಾನ್ಯಮೂರ್ತಿ ಮಲ್ಲಿಕಾರ್ಜುನ ಲಿಂಗವಾದಡೂ, ಹರ ಶರಣರಿಗೆ ದೂರ.

---

## ಎಂಥ ಕಷ್ಟಗಳು ಬಂದರೂ, ನಿನ್ನ ಕರ್ತವ್ಯಗಳನ್ನು ಬಿಡಬೇಡ.

೧. ಭಕ್ತನಾಗಿ, ತನ್ನ ಹಿಡಿದೆನೆಂದು ಹೋದರೆ, ನುಗ್ಗುಮಾಡುವ, ನುಸಿಯ ಮಾಡುವ, ಮಣ್ಣು ಮಾಡುವ, ಮಸಿಯ ಮಾಡುವ. ಕೂಡಲ ಸಂಗಮದೇವನ ನೆರೆ ನಂಬಿವನಾವರೆ, ಕಡೆಗೆ ತನ್ನಂತೆ ಮಾಡುವನು.

೨. ಅರೆವನಯ್ಯ ಸಣ್ಣಹಾಹನ್ನಕ್ಕ. ಒರೆವನಯ್ಯ ಬಣ್ಣಗಾಂಬನ್ನಕ್ಕ. ಅರೆವರೆ ಸಣ್ಣಗಾಗಿ, ಒರೆವರೆ ಬಣ್ಣ ಬಂದರೆ, ಕೂಡಲ ಸಂಗಮದೇವ ನೊಲಿದು ಸಲಹುವ.

೩. ದೇವನೊಳ್ಳಿದನೆಂದು ಮುಯ್ಯೊನಲು ಬೇಡ. ಕರಕಟ ಕಾಡಿಹನೊಳ್ಳಿದನೇ? ಅಳಿಸುವ ನಗಿಸುವನೊಳ್ಳಿದನೇ? ಬೆಚ್ಚವೆ ಬೆದರದೆ, ತೊತ್ತುಗೆಲಸವ ಮಾಡಲು, ತನ್ನನೊಚ್ಚತ ತಾಸೀವ ಕೂಡಲ ಸಂಗಮದೇವಾ.

೪. ಭಕ್ತಿ ಎಂಬುದ ಮಾಡಬಾರದು. ಕರಗಸದಂತೆ ಹೋಗುತ್ತ ಕೊಯ್ವುದು, ಬರುತ್ತ ಕೊಯ್ವುದು. ಘಟಸರ್ಪನಲ್ಲಿ ಕೈದುಡುಕಿದರೆ, ಹಿಡಿವುದು ಮಾಬುದೇ ಕೂಡಲಸಂಗಮದೇವಾ?

೫. ಮಾತಿನ ಮಾಲೆಯಲ್ಲಪ್ಪುದೇ ಭಕ್ತಿ? ಮಾಡಿ ಸವೆಯದನ್ನಕ್ಕರ, ಮನ ಸವಿಯದನ್ನಕ್ಕರ, ಧನ ಸವಿಯದನ್ನಕ್ಕರ, ಅಪ್ಪುದೇ ಭಕ್ತಿ? ಕೂಡಲಸಂಗಮದೇವನೊಲಿವರೆ, ಸರಸನಾಡುವನು. ಸೈರಿಸದನ್ನಕ್ಕ ಅಪ್ಪುದೇ ಭಕ್ತಿ?

೬. ಮನದೊಡೆಯ ಮನವ ನೋಡಿಹೆನೆಂದು, ನಾಲ್ಕು ಓಣಿಯಲ್ಲಿ ಭಯವನೊಡ್ಡಿದರೆ ಹೆದರಿ ಹಿಮ್ಮೆಟ್ಟದಿರು. ಮನವೇ ಕಳವಳಗೊಳ್ಳದೆ, ಸಂಚಲವನಳಿದು, ಅತಿ ಕಲವಂತನಾದೆಯಾದೊಡೆ ಅಘಹರ ಅಖಂಡೇಶ್ವರನು ನಸುನಗುತ ಬಂದು ಎತ್ತಿಕೊಂಡು ಮುದ್ದಾಡಿ ತನ್ನೊಳಗೆ ಇಂಬಿಟ್ಟುಕೊಂಬನು ಕೇಳಾ ಎಲೆ ಮನವೇ.

೭. ಕಿಡಿ ಕಿಡಿ ಕೆದರಿದರೆ, ಎನಗೆ ಹಸಿವು ತೃಷೆ ಅಡಗಿತೆಂಬೆನು. ಮುಗಿಲು ಹರಿದು ಬಿದ್ದರೆ, ಎನಗೆ ಮಜ್ಜನಕ್ಕೆರೆದರೆಂಬೆನು. ಗಿರಿ ಮೇಲೆ ಬಿದ್ದರೆ ಎನಗೆ ಪುಷ್ಪವೆಂಬೆನು. ಚನ್ನಮಲ್ಲಿಕಾರ್ಜುನಯ್ಯಾ, ಶಿರ ಹರಿದು ಬಿದ್ದಡೆ, ಪ್ರಾಣ ನಿಮಗರ್ಪಿತವೆಂಬೆನು.

೮. ಆರು ಇಲ್ಲದವಳೆಂದು ಆಳಿಗೊಳಲು ಬೇಡಕಂಡಯ್ಯಾ. ಏನು ಮಾಡಿದಡೂ ನಾನಂಜುವಳಲ್ಲ. ತರಗೆಲೆಯ ಮೆಲ್ಲಿದ್ದು ನಾನಿಹೆನು. ಸುರಗಿಯ ಮೇಲೊರಗಿ ನಾನಿಹೆನು. ಚನ್ನಮಲ್ಲಿಕಾರ್ಜುನಯ್ಯಾ ಕರಕೆಡೆ ನೋಡಿದಡೆ ಒಡಲನು ಪ್ರಾಣನು ನಿಮಗೊಪ್ಪಿಸಿ ಶುದ್ಧಳಿಹೆನು.

೯. ಹರ ತನ್ನ ಭಕ್ತರ ತಿರಿವಂತೆ ಮಾಡುವ, ಒರೆದು ನೋಡುವ, ಸುವರ್ಣದ ಚಿನ್ನದಂತೆ. ಅರೆದು ನೋಡುವ, ಚಂದನ

ದಂತೆ. ಅರಿದು ನೋಡುವ ಕಪ್ಪಿನ ಕೋಲಿನಂತೆ. ಬೆದರದೆ ಬೆಚ್ಚದೆ ಇಪ್ಪಡೆ ಕರವಿಡಿದೆತ್ತಿಕೊಂಬ ನಮ್ಮ ರಾಮನಾಥನು.

---

## ನಿನ್ನ ಕರ್ತವ್ಯಗಳಲ್ಲಿ ಧೈರ್ಯವುಳ್ಳವನಾಗಿರು.

೧. ಅಟ್ಟಿಟ್ಟಿಕೆಯ ಮಾತನಾಡಲದೇಕೋ? ಮುಟ್ಟಿ ಬಂದುದಕ್ಕಂಜಲದೇಕೋ? ಕಾದಿದಲ್ಲದೆ ಮಾಣೆನು. ಓಡಿದರೆ ಭಂಗ ಹಿಂಗದಯ್ಯಾ. ಕೂಡಲಸಂಗಮದೇವಾ, ಎನ್ನ ಭಂಗ ನಿಮ್ಮದಾಗಿ.

೨. ನೀನಿರಿಸಿದ ಮನದಲ್ಲಿ ನಾನಂಜೆನಯ್ಯಾ, ಮನವು ಮಹಾಘನಕ್ಕೆ ಶರಣುಪ್ರೋಕ್ತದಾಗಿ. ನೀನಿರಿಸಿದ ಧನದಲ್ಲಿ ನಾನಂಜೆನಯ್ಯಾ. ಧನವು ಸತಿಸುತ ಮಾತಾಪಿತರಿಗೆ ಹೋಗವಾಗಿ. ನೀನಿರಿಸಿದ ತನುವಿನಲ್ಲಿ ನಾನಂಜೆನಯ್ಯಾ, ತನು ಸಮರ್ಪಿತವಾದಲ್ಲಿ, ನಿಯತ ಪ್ರಸಾದ ಭೋಗೋಪ ಭೋಗಿಯಾಗಿ. ಇದು ಕಾರಣ, ವೀರಧೀರ ಸಮಗ್ರನಾಗಿ, ನಿಮಗಾನಂಜೆನಯ್ಯಾ ಕೂಡಲಸಂಗಮದೇವಾ.

೩. ಕಾಯದ ಕಳವಳಕಂಜಿ ಕಾಯಯ್ಯಾ ಎನ್ನೆನು. ಜೀವನೋಪಾಯಕ್ಕಂಜಿ, ಈಯಯ್ಯಾ ಎನ್ನೆನು. "ಯದ್ಭಾವಂ ತದ್ಭವತಿ" ಉರಿಬರಲಿ, ಸಿರಿ ಬರಲಿ, ಬೇಕು ಬೇಡೆನ್ನನಯ್ಯಾ. ಆನು ನಿಮ್ಮ ಹಾರೆನು. ಮಾನವರ ಬೇಡೆನು. ಆಣೆ ನಿಮ್ಮಾಣೆಯಯ್ಯಾ ಕೂಡಲಸಂಗಮದೇವಾ.

೪. ನಾಳೆ ಬಪ್ಪುದು ನಮಗಿಂದೇ ಬರಲಿ. ಇದಕಾರಂಜುವರು? ಇದಕಾರಳುಕುವರು? "ಜಾತಸ್ಯ ಮರಣಂ ಧೃವಂ" ಎಂದುದಾಗಿ, ನಮ್ಮ ಕೂಡಲಸಂಗಮದೇವ ಬರೆದ ಬರಹವ ತಪ್ಪಿಸುವರೆ ಹರಿಬ್ರಹ್ಮಾದಿಗಳವಲ್ಲ.

೫. ಪುಣ್ಯ ಪಾಪವಿಲ್ಲನಾಗಿ, ಯಮನ ಹಂಗಿಲ್ಲ. ಬಂದುದನುಂಬುದಾಗಿ ಮಾನವರ ಹಂಗಿಲ್ಲ. ಭವಗೆಟ್ಟನಾಗಿ, ದೈವದ ಹಂಗಿಲ್ಲ. ಸತ್ಯ ಜ್ಞಾನಾನಂದವೇ ತಾನಾಗಿ, ಇನ್ನಾರ ಹಂಗಿಲ್ಲದಾತ ಗುಹೇಶ್ವರನಲ್ಲಯ್ಯನೊಬ್ಬನೇ.

೬. ಹುಲಿಯ ಹಾಲು ಹುಲಿಗಲ್ಲದೆ, ಹೊಲದ ಹುಲ್ಲಿಗೆ ಉಣಬಾರದು. ಕಲಿಯ ಕಾಲ ತೊಡರು ಕಲಿತನದಾಳಿಗಲ್ಲದೆ ಇಕ್ಕಬಾರದು. ಶಿವನೊಡತಣಾದ ಬಿರಿದು ಇಹಪರವೀರಂಗಲ್ಲದೆ, ನುಡಿಯಬಾರದು. ಅಳಿಮನದ ಭಕ್ತಿಯವರ ಮೂಗ ಹಲ್ಲುಮೋರೆ ಕೊಯ್ವನಯ್ಯ, ಕೂಡಲಸಂಗಮದೇವಾ.

೭. ಎಲ್ಲರೂ ವೀರರು, ಎಲ್ಲರೂ ಧೀರರು. ಎಲ್ಲರೂ ಮಹಿಮರು, ಎಲ್ಲರೂ ಪ್ರಮಥರು, ಕಾಳಗದ ಮುಖದಲ್ಲಿ ಕಾಣಬಹುದು. ಓಡುವ ಮುಖದಲ್ಲಿ ಕಾಣಬಾರದು. ನಮ್ಮ ಕೂಡಲಸಂಗನ ಶರಣರು ಧೀರರು, ಉಳಿದವರೆಲ್ಲ ಅಧೀರರು.

೮. ಓಡುವಾತ ಲೆಂಕನಲ್ಲ, ಬೇಡುವಾತ ಭಕ್ತನಲ್ಲ. ಓಡಲಾಗದು ಲೆಂಕನು. ಬೇಡಲಾಗದು ಭಕ್ತನು. ಓಡೆನಯ್ಯ, ಬೇಡೆನಯ್ಯ, ಕೂಡಲಸಂಗಮದೇವಾ.

---

## ಬಡತನದಲ್ಲಿ ಧೈರ್ಯಗುಂದಬೇಡ.

೧. ಮನೆ ನೋಡಾ, ಬಡವರ ಮನೆ. ಮನ ನೋಡಾ ಘನ. ಸೋಂಕಿನಲ್ಲಿ ಶುಚಿ ಸರ್ವಾಂಗ ಕಲಿ. ಪಸಾರಕ್ಕನುಕೂಲವಿಲ್ಲ. ಬಂದ ತತ್ಕಾಲಕ್ಕುಂಟು. ಕೂಡಲಸಂಗನ ಶರಣರು ಸ್ವತಂತ್ರರು ಧೀರರು.

೨. ಅಂಗಕ್ಕೆ ಬಡತನವಲ್ಲದೆ, ಮನಕ್ಕೆ ಬಡತನ ಉಂಟೇ? ಬಟ್ಟೆ ಬಲ್ಲಿತ್ತೆಂದರೆ, ಉಳಿಯ ಮೊನೆಯಲ್ಲಿ ಬಡತನವುಳ್ಳಡೆ, ಒಡೆ

ಯುದೆ? ಘನ ಶಿವಭಕ್ತರಿಗೆ ಬಡತನವಿಲ್ಲ. ಸತ್ಯರಿಗೆ ದುಷ್ಕರ್ಮವಿಲ್ಲ. ಎನಗೆ ಮಾರಯ್ಯ ಪ್ರಿಯ ಅಮರೇಶ್ವರ ಲಿಂಗವುಳ್ಳನ್ನಕ್ಕರ, ನನಗಾರ ಹಂಗಿಲ್ಲ.

೩. ಭಕ್ತಿ ವಿಶೇಷ ಮಾಡುವರೆ, ಹತ್ತು ಬೆರಳುಂಟು. ಹಾಸಿ ಮಾಡಿದರೆ ತನಗುಂಟು. ತನ್ನ ಪ್ರಮಥರಿಗುಂಟು. ಮಾರಿತಂದೆಗಳಂತೆ ಎನಗೇಕಹುದಯ್ಯ? ರತ್ನದ ಸಂಕೋಲೆಯು ಸಿಕ್ಕಿ ಕಾಡಿಹ. ಕೂಡಲಸಂಗಮದೇವಾ ಶಿವಘೋ ಶಿವಧೋ.

೪. ಭಕ್ತರಿಗೆ ಬಡತನ ಉಂಟೇ? ನಿತ್ಯರಿಗೆ ಮರಣ ಉಂಟೇ? ಭಕ್ತರು ಬಡವರೆಂದು, ಮತ್ತೊಂದು ಕೊಟ್ಟಿಹೆನೆಂದರೆ, ಮಾರಯ್ಯ ಪ್ರಿಯ ಅಮರೇಶ್ವರ ಲಿಂಗವು ಸತ್ತಂದಿಗಲ್ಲದೆ, ಬಡತನವಿಲ್ಲ.

೫. ಕಾಣದುದನೆಲ್ಲ ಕಾಣಲಾರೆ, ನೋಡಾ. ಕೇಳದುದನೆಲ್ಲ ಕೇಳಲಾರೆನಯ್ಯ. ದ್ರೋಹವಿಲ್ಲ ಎನ್ನ ಶಿವನಲ್ಲಿ. ಸೀಮೆಯುಯ್ಯ. ಒಲೆಯು ಮುಂದಿದ್ದು ಪಾಡದ ಕನಸ ಕಾಂಬವರನೊಲ್ಲನಯ್ಯ ಕೂಡಲಸಂಗಮದೇವಾ.

೬. ಮನೆ ನೋಡಾ ಬಡವರು. ಮನ ನೋಡಾ ಸಂಪನ್ನರು. ಧನ ನೋಡಾ ಬಡವರು. ಘನ ಮನ ಸಂಪನ್ನರು. ಕೂಡಲ ಸಂಗನ ಶರಣರು ಕರುಳಿಲ್ಲದ ಕಲಿಗಳು. ಆರಿಗೂ ಉಪಮಿಸಬಾರದು.

೭. ಒಡದೋಡು ನನ್ನ ಮನೆಯಲ್ಲಿಲ್ಲದಂತೆ ಮಾಡಯ್ಯ. ಕೊಡು ದೇವ ಎನ್ನ ಕರದಲೊಂದು ಕರಿಕೆಯ. "ಮೃಡ ದೇವ ಶರಣು" ಎಂದು ಭಿಕ್ಷಕ್ಕೆ ಹೋದರೆ ಅಲ್ಲಿ "ನಡೆ ದೇವ" ಎಂದೆನಿಸೋ ಕೂಡಲ ಸಂಗಮದೇವಾ.

೮. ಮನೆ ಮನೆ ದಪ್ಪದೆ ಕೈಯೊಡ್ಡಿ ಬೇಡುವಂತೆ ಮಾಡಯ್ಯ. ಬೇಡಿದರೆ ಇಕ್ಕದಂತೆ ಮಾಡಯ್ಯ. ಇಕ್ಕಿದರೆ ನೆಲಕ್ಕೆ ಬೀಳುವಂತೆ

ಮಾಡಯ್ಯಾ. ನೆಲಕ್ಕೆ ಬಿದ್ದರೆ, ನಾನೆತ್ತಿಕೊಂಬುದಕ್ಕೆ ಏನಿಲ್ಲದಂತೆ ಮಾಡಯ್ಯಾ, ಚನ್ನಮಲ್ಲಿಕಾರ್ಜುನಯ್ಯಾ.

೯. ಎನಗಾರು ಇಲ್ಲ, ಎನಗಾರು ಇಲ್ಲ, ಎಂಬರು. ಬಾಣ ಸನ ನಾನು, ಮಯೂರನನ ನಾನು, ಕಾಳಿದಾಸನವ ನಾನು. ಕಕ್ಕಯ್ಯ ಹಿರಿಯಯ್ಯಾ. ಚಿಕ್ಕಯ್ಯ ಚನ್ನಯ್ಯ ಎತ್ತಿ ಮುದ್ದಾಡಿಸಿದ ರೆನ್ನ ಕೂಡಲ ಸಂಗಯ್ಯ.

---

## ದೇವಪೂಜೆಯು ಸದಾಚಾರವಿಲ್ಲದಿದ್ದರೆ ವ್ಯರ್ಥವು.

೧. ಸದಾಚಾರ ಸದ್ಭಕ್ತಿ ಇಲ್ಲದವರ ನಾನೊಲ್ಲೆನಯ್ಯಾ. ಅವ ರಾರಾಧನೆ ದಂಡ. ಸಿಚ್ಚ ಸಿಚ್ಚ ಪ್ರಾಯಶ್ಚಿತ್ತರ ನೊಲ್ಲನಯ್ಯ ಕೂಡಲ ಸಂಗಮದೇವಾ ಭೂಮಿ ಭಾರಕರ.

೨. ನೂರನೋದಿ ನೂರ ಕೇಳಿವರೇನು? ಆಶೆ ಹರಿಯದು, ರೋಷ ಬಿಡದು. ಮಜ್ಜನಕ್ಕೆರೆದು ಫಲವೇನು? ಮಾತಿನಂತೆ ಮನ ವಿಲ್ಲದ ಜಾತಿ ಡೊಂಬರ ನೋಡಿ ನಗುವ ನಮ್ಮ ಕೂಡಲ ಸಂಗ ಮದೇವಾ.

೩. ಸಜ್ಜನನಾಗಿ ಮಜ್ಜನಕ್ಕೆರೆವೆ. ಶಾಂತನಾಗಿ ಪೂಜೆಯ ಮಾಡುವೆ. ಸಮರತಿಯಿಂದ ನಿಮ್ಮ ಹಾಡುವೆ. ಚನ್ನಮಲ್ಲಿಕಾರ್ಜು ನಯ್ಯಾ, ನಿಮ್ಮನಗಲದ ಪೂಜೆ ಅನುವಾಯಿತ್ತೆನಗೆ.

೪. ಕೋಪಿ ಮಜ್ಜನಕ್ಕೆರೆದರೆ ರಕ್ತದ ಧಾರೆ. ಪಾಪಿ ಹೂವ ನೇರಿಸಿದರೆ, ಮಸೆದಾಯುಧದ ಗಾಯ. ಕೋಪರನಾರನೂ ಕಾಣೆ, ಮಾದರ ಚನ್ನಯ್ಯನಲ್ಲದೆ. ಕೋಪರನಾರನೂ ಕಾಣೆ, ಡೋಹರ

ಕಕ್ಕಯ್ಯನಲ್ಲದೆ. ವ್ಯಾಪ್ತಿಯುಳ್ಳವ ನಮ್ಮ ಮಡಿವಾಳ ಮಾಚಯ್ಯ. ನಿಮ್ಮ ಪತ್ರಿಗರಿವರಯ್ಯ ಕೂಡಲ ಸಂಗಮದೇವಾ.

೫. ಮಾಡಿ ಮಾಡಿ ಕೆಟ್ಟರು ಮನವಿಲ್ಲದೆ. ನೀಡಿ ನೀಡಿ ಕೆಟ್ಟರು ನಿಜವಿಲ್ಲದೆ. ಮಾಡುವ ನೀಡುವ ನಿಜಗುಣವುಳ್ಳವರ ಕೂಡಿಕೊಂಡಿಪ್ಪ ನಮ್ಮ ಕೂಡಲಸಂಗಮದೇವಾ.

೬. ಜಾತಿಗಾರನ ಕಾಲು ಮುಳ್ಳು ತಾಗಿ ನೊಂದಿತ್ತೆಂಬಂತೆ, ಸೂನೆಗಾರನ ಮನೆಯಲ್ಲಿ ಹೆಣ ಹೋಗಿ ಅಳುವಂತೆ, ಕನ್ನಗಳ್ಳನ ಮನೆಯಲ್ಲಿ ಬಟ್ಟಲು ಹೋಗಿ ಮರುಗುವಂತೆ, ಠಕ್ಕನ ಪೂಜೆಗೆ ಮೆಚ್ಚುವನೇ ನಮ್ಮ ಗುಹೇಶ್ವರನು?

೭. ಕಂಡಿಹರೆಂದು ಕಣ್ಣ ಮರೆಮಾಡಿದ. ಕೇಳಿಹರೆಂದು ಕಿವಿಗೆ ಮರೆಮಾಡಿದ. ಮುಟ್ಟಿಹರೆಂದು ಕೈಗೆ ಮರೆ ಮಾಡಿದ. ನೋಂಕಿಹರೆಂದು, ತನುವಿಂಗೆ ಮರೆಮಾಡಿದ. ನೆನೆದಿಹರೆಂದು ಮನಕ್ಕೆ ಮರೆಮಾಡಿದ. ಅರಿದಿಹರೆಂದು ಅಂತರಂಗದಲ್ಲಿ ಮರೆಮಾಡಿದ. ಪೂಜಿಸಿಹರೆಂದು ಕ್ರಿಗೆ ಮರೆಮಾಡಿದ. ಕೂಡಲಸಂಗಮದೇವರೊಡನೆ ಅಹಂಕಾರಮಾಡಿ, ಕೆಟ್ಟಕೇಡನೇನೆಂದುಪಮಿಸುವೆನು?

೮. ತನುಕರಗದವರಲ್ಲಿ ಮಜ್ಜನವನೊಲ್ಲೆಯಯ್ಯ ನೀನು. ಮನ ಕರಗದವರಲ್ಲಿ ಪುಷ್ಪವನೊಲ್ಲೆಯಯ್ಯ ನೀನು. ಹದುಳಿಗರಲ್ಲದವರಲ್ಲಿ ಗಂಧಾಕ್ಷತೆಯನೊಲ್ಲೆಯಯ್ಯ ನೀನು. ಅರಿವು ಕಣ್ದೆರೆಯದವರಲ್ಲಿ ಆರತಿಯ ನೊಲ್ಲೆಯಯ್ಯ ನೀನು. ಭಾವ ಶುದ್ಧವಿಲ್ಲದವರಲ್ಲಿ ಧೂಪವನೊಲ್ಲೆಯಯ್ಯ ನೀನು. ಪರಿಣಾಮಿಗಳಲ್ಲದವರಲ್ಲಿ ನೈವೇದ್ಯವನೊಲ್ಲೆಯಯ್ಯ ನೀನು. ತ್ರಿಕರಣ ಶುದ್ಧವಿಲ್ಲದವರಲ್ಲಿ ತಾಂಬೂಲವನೊಲ್ಲೆಯಯ್ಯ ನೀನು. ಹೃದಯ ಕಮಲವರಳದವರಲ್ಲಿ ಇರಲೊಲ್ಲೆಯಯ್ಯ ನೀನು. ಎನ್ನಲ್ಲಿ ಏನುಂಟೆಂದು ಕರಸ್ಥಲವ ನಿಂಬುಗೊಂಡೆ ಹೇಳಾ ಚನ್ನಮಲ್ಲಿಕಾರ್ಜುನಯ್ಯ?

೯. ಬಂಡಿತುಂಬ ಪತ್ರೆಯ ತಂದು, ಕಂಡಕಂಡಲ್ಲಿ ಮಜ್ಜನಕ್ಕೆರೆವಿರಿ. ತಾಪತ್ರಯವ ಕಳೆದು ಪೂಜಿಸಿ. ತಾಪತ್ರಯವ ಲಿಂಗನೊಲ್ಲ. ಕೂಡಲಸಂಗಮದೇವ ಬರಿಯ ಉದಕದಲ್ಲಿ ನೆನೆವನೇ?

೧೦. ಆರಕಾರು ಬಿತ್ತಿದ ಗಿಡದ ಹೂವನೇ ಕೊಯ್ದು, ಊರಲ್ಲಿ ಕಟ್ಟಿದ ನೀರನೇ ತಂದು, ನಾಡೆಲ್ಲ ನೋಡಲೆಂದು ಪೂಜಿಸುವ ಪುಣ್ಯವು ಆ ಹೂವಿಗೋ, ಆ ನೀರಿಗೋ, ನಾಡೆಲ್ಲ ನೋಡಲೆಂದು ಪೂಜಿಸಿದಾತಗೋ? ಇದನಾನರಿಯೆ. ನೀವೇ ಬಲ್ಲಡೆ ಹೇಳೆಂದಾತ ನಮ್ಮ ಅಂಬಿಗರ ಚೌಡಯ್ಯನು.

೧೧. ಎಲ್ಲವ ಕಳೆದುಳಿದ ಹೂವ ತಂದು, ಗೆಲ್ಲ ಸೋಲಕ್ಕೊಳಗಾಗದ ನೀರ ತುಂಬಿ, ಕರಣಂಗಳೆಲ್ಲವು ಕಂಗಳ ತುಂಬಿ ನಿಂದು ನೋಡಿ ಎಂದೂ ತನ್ನಂಗದಿಚ್ಛೆಯನರಿದು, ಮರೆದು ಲಿಂಗವ ಪೂಜಿಸಬೇಕೆಂದ ನಂಬಿಗರ ಚೌಡಯ್ಯ.

## ಲಿಂಗಾಂಗಿಗಳು ಸದಾಚಾರಿಯಾಗಿರಬೇಕು.

೧. ಹಸಿವು ತೃಷೆ ವ್ಯಸನ ಕಾಮ ಕ್ರೋಧ ಲೋಭ ಮೋಹ ಮದ ಮತ್ಸರವಾದಿಯಾದ ತನುಗುಣಂಗಳು ದೇವದಾನವ ಮಾನವರಂತಾದೊಡೆ, ಲಿಂಗವಂತನಾದ ಪರಿ ಎಂತಯ್ಯ? ತನುಗುಣಂಗಳು ಭೂತ ದೇಹಿಯಂತಾದಡೆ, ಲಿಂಗದೇಹಿಯಾದ ಪರಿ ಎಂತಯ್ಯ? ಲಿಂಗಗುಣ, ಲಿಂಗಚಿನ್ಹವಿಲ್ಲದಿರ್ದಡೆ, ಲಿಂಗದೇಹಿಯಾದ ಪರಿ ಎಂತಯ್ಯ? ಹಸಿವು ತೃಷೆ ವ್ಯಸನವಡಗಿದಡೆ ಲಿಂಗ ಚಿನ್ಹ. ಕಾಮ ಕ್ರೋಧ ಲೋಭ ಮೋಹ ಮದ ಮತ್ಸರವಾದಿಯಾದ ದೇಹಗುಣಂಗಳಳಿದಡೆ ಲಿಂಗ ಚಿನ್ಹ. ಇಂತಲ್ಲದೆ ದೇಹ ಗುಣಂಗಳು ತನ್ನ ಬಿಡದೆ, ತಾನವ ಕೂಡಿಕೊಂಡು ಬಿಡದಿರ್ದು, ತಾ ಲಿಂಗದೇಹಿ

ಎಂದಡೆ, ಆ ಲಿಂಗವೆಂತು ಒಲಿವುದು? ಸದ್ಭಕ್ತರೆಂತು ಮೆಚ್ಚುವರಯ್ಯ? ಇಂತಾ ಅವಗುಣಂಗಳೆಲ್ಲವೂ ಅಳಿದು, ಗುರು ಲಿಂಗ ಜಂಗಮದಲ್ಲಿ ತನುಮನಧನವ ಲೀಯವ ಮಾಡಿದಡೆ, ಆತನೇ ಸರ್ವಾಂಗಲಿಂಗಿಯಯ್ಯ, ಉರಿಲಿಂಗ ಪೆದ್ದಿ ಪ್ರಿಯ ವಿಶ್ವೇಶ್ವರಾ.

೨. ಪರಮ ಪವಿತ್ರ ನಿರ್ಮಲಲಿಂಗ ತನ್ನಂಗದ ಮೇಲೆ ಇರುತಿರಲು, ಅಂಗ ಶುದ್ಧ ಸೌಕರ್ಯವಿಲ್ಲದವನ ಮುಖವ ನೋಡಲಾಗದು. ಅವನ ಮುಟ್ಟಲೆಂತೂ ಆಗದು. ಮನದ ಮಲಿನವ ಕಳೆದು, ಪ್ರಾಣಲಿಂಗವ ಧರಿಸಬೇಕು. ತನುವಿನ ಮಲವ ಕಳೆದು, ಇಷ್ಟಲಿಂಗವ ಧರಿಸಬೇಕು. ಜೀವತ್ರಯಂಗಳ ಮಲವ ಕಳೆದು, ಪ್ರಸಾದವ ಧರಿಸಬೇಕು. ಮನದ ಮಲಿನವಾವುದೆಂದಡೆ, ಮನವ್ಯಾಕುಲ. ತನುವಿನ ಮಲಿನವಾವುದೆಂದಡೆ, ತನು ಗುಣ ವ್ಯಾಪ್ತಿ. ತನುತ್ರಯದ ಮಲಿನವಾವುದೆಂದಡೆ, ಈಷಣತ್ರಯ. ಜೀವತ್ರಯದ ಮಲಿನವಾವುದೆಂದಡೆ, ಅವಸ್ಥಾತ್ರಯ. ಕರಣಂಗಳ ಮಲವಾವುದೆಂದಡೆ. ಸಂಕಲ್ಪ, ವಿಕಲ್ಪ, ಅಸತ್ಯ ನಿಂದ್ಯ, ಮಿಥ್ಯಾವಾದವಾಡುವ, ತಸ್ಕರಿಸುವ, ಅನ್ಯರಿಗೆ ಕೈಯ್ಯಾನುವ. ಲಿಂಗವಿಪ್ಪ ಸುಕ್ಷೇತ್ರ ಕಾಯದ ಮಲಿನವ ಕಳೆದು, ಪ್ರಸಾದವ ಧರಿಸದಿರ್ದಡೆ, ಭವಮಾಲೆ ಹಿಂಗದು, ನರಕ ತಪ್ಪದಯ್ಯ ಮಹಾಲಿಂಗ ಕಲ್ಲೇಶ್ವರಾ.

೩. ಆಚಾರವಿಲ್ಲದ ಗುರು ಭೂತ ಪ್ರಾಣಿ. ಆಚಾರವಿಲ್ಲದ ಲಿಂಗ ಶಿಲೆ. ಆಚಾರವಿಲ್ಲದ ಜಂಗಮ ಮಾನವ. ಆಚಾರವಿಲ್ಲದ ಪಾದೋದಕ ನೀರು. ಆಚಾರವಿಲ್ಲದ ಪ್ರಸಾದ ಎಂಜಲು. ಆಚಾರವಿಲ್ಲದ ಭಕ್ತ ದುಷ್ಕರ್ಮಿ. ಇದು ಕಾರಣ ಅಟ್ಟವನೇರುವದಕ್ಕೆ ನಿಚ್ಚಣಿಕೆಯೇ ಸೋಪಾನವಯ್ಯ. ಹರಪದವನೇರುವದಕ್ಕೆ ಶ್ರೀಗುರು ಹೇಳಿದ ಸದಾಚಾರವೇ ಸೋಪಾನವಯ್ಯ. ಗುರು ಉಪದೇಶವ ಮೀರಿ, ಮನಕ್ಕೆ ಬಂದಂತೆ ವರ್ತಿಸುವ ಪಾಪಿಗಳ ಎನಗೊಮ್ಮೆ ತೋರದಿರಯ್ಯ ಮಹಾಲಿಂಗ ಗುರು ಶಿವಸಿದ್ಧೇಶ್ವರ ಪ್ರಭುವೇ.

೪. ಮೊನೆ ತಪ್ಪಿದಲಗು ಘನವೇನ ಮಾಡುವದು? ಅರಿವು ಹೀನವಾದಲ್ಲಿ ಕ್ರಿಯೆ ಏನು ಮಾಡುವದು? ವರ್ತನೆ ಶುದ್ಧವಿಲ್ಲದೆ, ಲಾಂಛನದುತ್ಕೃಷ್ಟತೆ ಏನ ಮಾಡುವದು? ತ್ರಿಕರಣ ಶುದ್ಧವಿಲ್ಲದ ಮಾಟ ದ್ರವ್ಯದ ಕೇಡು, ಭಕ್ತಿಗೆ ಹಾನಿ. ಇಂತೀ ಗುಣಂಗಳಲ್ಲಿ ಸದಾಶಿವಮೂರ್ತಿಲಿಂಗವನರಿಯಬೇಕು.

೫. ದೇಶಗುರಿಯಾಗಿ ಲಯವಾಗಿ ಹೋದವರ ಕಂಡೆ. ತಮಂಥ ಗುರಿಯಾಗಿ, ಲಯವಾಗಿ ಹೋದವರ ಕಂಡೆ. ಕಾಮ ಗುರಿಯಾಗಿ ಬೆಂದು ಹೋದವರ ಕಂಡೆ. ನೀ ಗುರಿಯಾಗಿ ಹೋದವರ ಕಾಣೆ, ಗುಹೇಶ್ವರಾ.

೬. ಹಂದಿ ಶ್ರೀಗಂಧವ ಹೂಸಿದಡೇನು? ಗಂಧ ರಾಜನಾಗಬಲ್ಲುದೆ? ನವಿಲು ನಲಿಯಿತ್ತೆಂದರೆ, ತಾ ಕೋಳಿ ಪುಚ್ಛವ ತೆರೆದು ಕೊಂಡಂತೆ ಕರ್ಮಿಗಳ ಭಕ್ತಿ. ಹೊರವೇಷದ ವಿಭೂತಿ ರುದ್ರಾಕ್ಷಿಯ ಹೂಸಿದಡೇನು? ತೆರನನರಿದು ಮರವೆಯ ಕಳೆದು, ಮಾತಿನಂತೆ ನೀತಿಯುಳ್ಳೊಡೆ ಅವರ ಆಚಾತರೆಂಬೆ ಕಾಣಾ ರಾಮನಾಥಾ.

೭. ವೇಷವ ಧರಿಸಿ ಭಾಷೆಯ ಕಲಿತು ದೇಶವ ಸುತ್ತಿ ಬಳಲಬೇಡ. ಜಗದೀಶನ ಪಾದವನೊಲಿದು ಪೂಜಿಸಿರಣ್ಣಾ. ಸವಿಯೂಟ ವಾಶೆಗೆ ಮನವೆಳಿಸಬೇಡ. ಪರಮೇಶ್ವರನ ಪಾವವನೊಲಿದು ಪೂಜಿಸಿರಣ್ಣಾ. ತರ್ಕ ಶಾಸ್ತ್ರ ಆಗಮ ಜಾಲದ ಹೊರಟೆಯ ಹೊಗದೆ ಮೂಲ ಮಂತ್ರವ ಮರೆಯದೆ ಸ್ಮರಿಸಿರಣ್ಣಾ. ಸಂಸಾರಿಗಳ ಸಂಗದೊಳಗಿರಬೇಡ. ಸದ್ಭಾವರ ಸಂಗದೊಳಿರ್ದು ಸತ್ಯವ ಸಾಧಿಸಿಕೊಳ್ಳಿರಣ್ಣಾ. ಪರರ ಯಾಚಿಸಿ ತನುವ ಹೊರೆಯಬೇಡ. ಶಿವನಿಕ್ಕಿದ ಭಿಕ್ಷೆಯೊಳಗಿರ್ದು ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನ ನೊಲಿಸಿರಣ್ಣಾ.

೮. ಲಿಂಗವಿಕಾರವ ನಾಕೇಳಿ. ಬಹು ವಿಧಾಂಗದ ಪ್ರಕೃತಿಯ ಮರದೇಳಿ. ನಿಮ್ಮ ಭಕ್ತಿಯ ಲಿಂಗದ ಕೂಟವ ನೆನೆದೇಳಿ.

ನಿಮ್ಮ ಗುರುವಾಜ್ಞೆಯು ನಿಮ್ಮ ವಿರಕ್ತಿಯು ಅರಿವಿನ ಸಾವಧಾನವ ಅರಿದೇಳಿ. ಸಾರಿದೆ. ಎವೆ ಹಳಚಿದಡಿಲ್ಲ, ಶುದ್ಧ ಸಿದ್ಧ ಪ್ರಸನ್ನ ಕುರಂಗೇಶ್ವರ ಲಿಂಗವ ಕೂಡಬಲ್ಲಡೆ.

೯. ದುಃಸ್ವಪ್ನವ ಕಾಣದಿರಿ. ದುರ್ವಿಕಾರದಲ್ಲಿ ಕೂಡದಿರಿ. ಮನೋವಿಕಾರದಲ್ಲಿ ಹರಿದಾಡದಿರಿ. ಪಂಚಾಕ್ಷರಿಯ ಜಪಿಸಿ. ಷಡಕ್ಷರವ ಸಂಬಂಧಿಸಿಕೊಳ್ಳಿ. ಮೂಲ ಮಂತ್ರವ ಆತ್ಮಂಗೆ ವೇಧಿಸಿಕೊಳ್ಳಿ. ಮರೆಯದಿರಿ ಗುರುವಾಜ್ಞೆಯ. ತೊರೆಯದಿರಿ ಶಿವಪೂಜೆಯ. ಅರಿದು ಮರೆಯದಿರಿ ಚರಸೇವೆಯ. ನೆರೆನಂಬಿ ಶುದ್ಧ ಸಿದ್ಧ ಪ್ರಸಿದ್ಧ ಪ್ರಸನ್ನ ಕುರಂಗೇಶ್ವರ ಲಿಂಗವ.

೧೦. ಭಾವಭ್ರಮೆವಂತರು ಜಾರದಿರಿ. ಜ್ಞಾನಹೀನರು ಬೇಗ ಪೋಗಿ. ತ್ರಿಪಥ ಮಲಕ್ಕೆ ಕಚ್ಚಿ ಮುಟ್ಟಿ ಹೊಡೆದಾಡುವರು ಅತ್ತಲಿರಿ. ನಿರುತ ಸ್ವಾನುಭಾವರು ಬನ್ನಿ. ಪರಬ್ರಹ್ಮಸ್ವರೂಪರು ಬನ್ನಿ. ಏಕಲಿಂಗ ನಿಷ್ಠಾಪರರು ದೃಢವಂತರು ಬನ್ನಿ. ಸನ್ಮಾರ್ಗಸತ್ಕ್ರಿಯಾವಂತರು ಬನ್ನಿ, ಎಂದು ಎನಗೆ ಕೊಟ್ಟ ಕಾಯಕ ಕೂಡಲಸಂಗಮದೇವರಲ್ಲಿ ಬಸವಣ್ಣಾ.

---

## ಸದಾಚಾರವೇ ಲಿಂಗಚಿನ್ಹ.

೧ ಅಂಗಸಂಗಿಯಾದವಂಗೆ ಲಿಂಗಸಂಗವಿಲ್ಲ. ಲಿಂಗಸಂಗಿಯಾದವಂಗೆ ಅಂಗಸಂಗವಿಲ್ಲ. ಲಿಂಗಸಂಗವೆಂಬುದೇ ಸದಾಚಾರ. ಅಂಗಸಂಗವಾದುದೇ ಅನಾಚಾರ. ಇದು ಕಾರಣವಾಗಿ, ಅಂಗಸಂಗವಂ ಬಿಟ್ಟು ಲಿಂಗಸಂಗವಾಗಿರಬೇಕು ನಮ್ಮ ಕೂಡಲಚನ್ನಸಂಗಯ್ಯನಲ್ಲಿ.

೨. ಅಂಗಾಶ್ರಯವಳಿದು ಲಿಂಗಾಶ್ರಯವಾದ ಬಳಿಕ, ಆ ಅಂಗಕ್ಕೆ ಲಿಂಗಾಚಾರವಲ್ಲದೆ, ಅಂಗಕ್ರಿ ಎಂಬುದು ಇಲ್ಲ ನೋಡಾ.

ಲಿಂಗದಲ್ಲಿ ನೈಷ್ಠಿಕವಂತನಾದ ಬಳಿಕ, ಅಂಗನಾಮುವಿಡಿದು ಬಳಲುವ ಬಳಲಿಕೆ ಎಂತೋ? ಅನಾಚಾರವ ಜರಿದು, ಆಚಾರವನರಿದ ಬಳಿಕ, ನಮ್ಮ ಕೂಡಲಚನ್ನಸಂಗನ ಶರಣರು ಅನ್ಯವನಾಚರಿಸುವರಲ್ಲ.

೩. ತನಗಲ್ಲದಾದುದ ಘಟ ಸೋಂಕಿದಲ್ಲಿ, ಅಲ್ಲಿಯೇ ಕಡಿವೆನು. ತನಗಲ್ಲದಾದುದ ಕೈಮುಟ್ಟಿದಲ್ಲಿ, ಅಲ್ಲಿಯೇ ತೆಗೆವೆನು. ತನಗಲ್ಲದಾದುದ ಕಿವಿ ಕೇಳಿದಲ್ಲಿ, ಅಲ್ಲಿಯೇ ಗೂಂಟವ ಬಲಿವೆನು. ತನಗಲ್ಲದಾದುದ ನಾಸಿಕ ವಾಸಿಸಿದಲ್ಲಿ, ಅಲ್ಲಿಯೇ ದಸಿಯುವಕ್ಕನೇರಿಸುವೆನು. ದೃಷ್ಟಿ ಅನುದಪ್ಪಿ ನೋಡಿದಲ್ಲಿ ಅಲ್ಲಿಯೇ ಕಿತ್ತಿಡುವೆನು. ಚಿತ್ತ ಅನುದಪ್ಪಿ ಮತ್ತೊಂದ ನೆನೆದಡೆ, ಆತ್ಮನನಲ್ಲಿಯೇ ಕಿತ್ತು ಹಾಕುವೆನು. ಇದಕ್ಕೆ ನೀವೇ ಸಾಕ್ಷಿ. ಮನಕ್ಕೆ ಮನೋಹರ ಶಂಖೇಶ್ವರ ಲಿಂಗವು.

೪. ಕುಲಸ್ವಾಮಿ, ನಿನ್ನಿಂದ ಹೆಜ್ಜೆಯಲ್ಲದೆ, ನಾನೊಂದು ಹೆಜ್ಜೆಯನಿಡೆನಯ್ಯ. ಎನಗೊಂದು ಹೆಜ್ಜೆ ಇಲ್ಲ. ನಿನ್ನ ಹೆಜ್ಜೆ, ಎನ್ನ ಹೆಜ್ಜೆ ಒಂದಾದ ಭೇದವ ಜಗದನ್ಯಾಯಿಗಳೆತ್ತ ಬಲ್ಲರೈ ರಾಮನಾಥಾ?

೫. ಅಂಗಜೀವಿಗಳೆಲ್ಲ ಅಶನಕ್ಕೆ ನೆರೆದು, ಲಿಂಗವಾರ್ತೆಯ ನುಡಿವರಯ್ಯ. ಕಾಯಜೀವಿಗಳೆಲ್ಲ ಕಳವಳಿಸಿ ನುಡಿವರಯ್ಯ. ಮನ ಒಂದ ಪರಿಯಲ್ಲಿ ನುಡಿವವರಿಗೆ ಗುಹೇಶ್ವರನೆಂಬ ಲಿಂಗ ನಿಮಗೆಲ್ಲಿಯದೋ?

೬. ತನುವಿನಲ್ಲಿ ನಿರ್ಮೋಹ, ಮನದಲ್ಲಿ ನಿರಹಂಕಾರ, ಪ್ರಾಣದಲ್ಲಿ ನಿರ್ಭಯ, ಚಿತ್ತದಲ್ಲಿ ನಿರಪೇಕ್ಷೆ, ವಿಷಯದಲ್ಲಿ ಉದಾಸೀನ, ಭಾವದಲ್ಲಿ ದಿಗಂಬರ, ಜ್ಞಾನದಲ್ಲಿ ಪರಮಾನಂದ ನೆಲೆಗೊಂಡ ಬಳಿಕ, ಸೌರಾಷ್ಟ್ರ ಸೋಮೇಶ್ವರ ಲಿಂಗವು ಬೇರಿಲ್ಲ ಕಾಣಿರೋ.

೭. ಉಚ್ಚೆಯ ಜವುಗಿನ ಬಚ್ಚಲ ತಂಪಿನಲ್ಲಿ ನಿಚ್ಚಕ್ಕೆ ನಿಚ್ಚ ಹೊರಳುವ ಹಂದಿಯಂತೆ, ಶಿವನಿಚ್ಚೆಯನರಿಯದೆ, ಮಾತನಾಡುವರ ಮೆಚ್ಚುವನೆ ಗುಹೇಶ್ವರಲಿಂಗವು?

೮. ಬಿರುಗಾಳಿ ಬೀಸಿ ಮರ ಮುರಿವಂತೆ ಸುಳುಹ ಸುಳಿಯದೆ, ತಂಗಾಳಿ ಪರಿಮಳದೊಳಗೂಡಿ ಸುಳಿವಂತೆ ಸುಳಿಯಬೇಕು. ಸುಳಿದಡೆ ನೆಟ್ಟನೆ ಭಕ್ತನಾಗಿ ನಿಲಬೇಕು. ನಿಂದು ಭಕ್ತನಾಗಲರಿಯುವ ಭ್ರಷ್ಟರನೇನೆಂಬೆ ಗುಹೇಶ್ವರಾ.

೯. ತಾಯಗರ್ಭದಲ್ಲಿ ಶಿಶು ತಾಯ ಕುರುಹನರಿಯದು. ಆ ತಾಯಿ ಶಿಶುವಿನ ಕುರುಹನೆಂದೂ ಅರಿಯಳು. ಮಾಯಾ ಮೋಹದಲ್ಲಿಪ್ಪ ಭಕ್ತರು ದೇವರನರಿಯರು. ಆ ದೇವರು ಭಕ್ತರನೆಂದೂ ಅರಿಯನು ಕಾಣಾ, ರಾಮನಾಥಾ.

# ಭಕ್ತಿಯ ವಚನಗಳು.

## ಭಾಗ ೨

# ಭಕ್ತಿಯ ವಚನಗಳು.

## ಮೋಕ್ಷಪದವನ್ನು ಬಯಸು.

೧. ಚಂದ್ರಮನಂತೆ ಕಳೆ ಸಮನಿಸಿತ್ತೆನಗೆ. ಸಂಸಾರವೆಂಬ ರಾಹು ಸರ್ವಗ್ರಾಸಿಯಾಗಿ ನುಂಗಿತ್ತಯ್ಯಾ. ಇಂದೆನ್ನ ದೇಹಕ್ಕೆ ಗ್ರಹಣವಾಯಿತ್ತು. ಇನ್ನೆಂದಿಂಗೆ ಮೋಕ್ಷವಹುದೋ ಕೂಡಲ ಸಂಗಮದೇವಾ?

೨. ಎಂದೋ ಸಂಸಾರ ದಂದುಗ ಹಿಂಗುವದು? ಎಂದೋ ಮನದಲ್ಲಿ ಪರಿಣಾಮವಹುದೆನಗೆ? ಎಂದೋ? ಎಂದೋ? ಕೂಡಲ ಸಂಗಮದೇವಾ, ಇನ್ನೆಂದೋ? ಪರಮ ಸಂತೋಷದಲ್ಲಿಹುದೆನಗೆಂದೋ?

೩. ಸುಖವ ಪಡೆದಿಹೆನೆಂದು ಹಡೆವಡೆ, ನಿಬ್ಬೆಗದಿಂದ ಮತ್ತೊಂದು ದುಃಖವು ಕೈಕೊಂಬುದು. ದುಃಖಕ್ಕೆ ಎಡೆ ಇಲ್ಲ. ಸಂಸಾರದೊಳಗಣ ಸುಖವಿಂತುಟು. ಮತ್ತೆ ಕಡು ದುಃಖವನೆಂದಿಂಗೆ ನೀಗಿ, ಎಂದು ನಿಮ್ಮೊಡಗೂಡಿ ಬೇರಾಗದೆಂದಿಪ್ಪೆನೋ ಕಪಿಲಸಿದ್ಧ ಮಲ್ಲಿಕಾರ್ಜುನಾ?

೪. ನಾನೆಲ್ಲಿಂದ ಬಂದೆ, ಎನಗೀ ದೇಹ ಬಂದ ಪರಿ ಆವುದು, ಇನ್ನು ಮುಂದೆ ಎಯ್ದುವ ಗತಿಯಾವುದು, ಎಂಬ ನಿತ್ಯ ವಿಚಾರ ಹುಟ್ಟಿನವರಿಗೆ ಎಂದೆಂದಿಗೂ ಬಳಲಿಕೆ ಬಿಡದು. ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ, ನೀವು ಬರಿಸಿದ ಭವಾಂತರದಲ್ಲಿ ಬರುತಿಹರಾಗಿ ನಾನು ಕಂಡು ಮರುಗುತಿರ್ದೆನು.

೫. ಎನ್ನ ಜೀವ ಮನಪ್ರಾಣಂಗಳಿಂದ ಸಮಸ್ತ ಯುಗಾಂತ್ಯದಲ್ಲಿ ಬರಬಾರದ ಯೋನಿಯಲ್ಲಿ ಬಂದೆನಯ್ಯಾ. ಉಣಬಾರದಾಹಾ

ರಂಗಳನುಂಡೆನಯ್ಯ. ಮಾಡಬಾರದ ವ್ಯವಹಾರವ ಮಾಡಿದೆನಯ್ಯ. ನುಡಿಯಬಾರದ ವಿವಾದವ ನುಡಿದೆನಯ್ಯ. ನಡೆಯಬಾರದ ಅನಾಚಾರದಲ್ಲಿ ನಡೆದೆನಯ್ಯ. ತಿರುಗಬಾರದ ದೇಶವ ತಿರುಗಿದೆನಯ್ಯ. ಹುಸಿಯನೆ ಮನೆಗಟ್ಟಿದೆನಯ್ಯ. ಹುಸಿಯನೆ ಹಾಸಿ ಹೊದಿದೆನಯ್ಯ. ಹುಸಿಯನೆ ಆಭರಣವ ಮಾಡಿ ಸರ್ವಾಂಗಕ್ಕೆ ಆಚ್ಛಾದಿಸಿ ಕೊಂಡೆನಯ್ಯ. ಎಲೆ ದೇವಾ ನಿನ್ನೊಲುಮೆಯಿಂದ ಏನಾದಡಾಗಲಿ. ಎನ್ನಲ್ಲಿ ನೋಡಿದಡೆ ಅಣುಮಾತ್ರ ಸುಗುಣವಿಲ್ಲಯ್ಯ. ಇನ್ನೆನಗೆ ಎಂದಿಂಗೆ ಮೋಕ್ಷವಹುದೋ ನಿಃಪ್ರಪಂಚ ನಿರಾತಂಕ ನಿರಾಲಂಬ ಮೂರ್ತಿ ಶ್ರೀ ಗುರು ಲಿಂಗಜಂಗಮವೇ.

## ಶುದ್ಧ ಮನಸ್ಸುಳ್ಳವನಾಗು.

### ಭಾಗ ೧

೧. ಭವಕ್ಕೆ ಬೀಜವಾದುದು ತನುವೋ ಮನವೋ ಎಂದು ವಿಚಾರಿಸಿ ನೋಡಲು, ಮನವೇ ಕಾರಣವಾಗಿರ್ಪುದರಿಯದೆ ಕೆಟ್ಟ ಮನದ ಸಂಗದಿಂದೆ ಮರ್ತ್ಯ ಲೋಕದಲ್ಲಿ ಹುಟ್ಟಿ, ತಾಪತ್ರಯಾಗ್ನಿಯಿಂದೆ ಕಂದಿ ಕುಂದಿ ನೊಂದು ಬೆಂದೆನಯ್ಯ. ಈ ಮನದ ಸಂಗದಿಂದೆ ಭವ ಭವದಲ್ಲಿ ತೊಳಲಿ, ಬಳಲಿದೆನಯ್ಯ. ಈ ಮನದ ಸಂಗದಿಂದಲೇ ಅನಂತ ಮರವೆಯ ಜೋಹಗಳಲ್ಲಿ ಸೆರೆ ಸಿಕ್ಕಿದೆನಯ್ಯ. ಈ ಮನದ ಸಂಗವ ಬಿಡಿಸಿ, ನಿಮ್ಮ ನೆನಹಿನ ಸಂಗದಲ್ಲಿರಿಸಿ ಸಲಹಯ್ಯ ಎನ್ನ ಅಖಂಡೇಶ್ವರಾ.

೨. ಮನವೆಂಬ ಮರ್ಕಟನು ತನುವೆಂಬ ವೃಕ್ಷವನೇರಿ, ಇಂದ್ರಿಯಂಗಳೆಂಬ ಶಾಖೆ ಶಾಖೆಗೆ ಹಾರಿ, ವಿಷಯಗಳೆಂಬ ಹಣ್ಣು ಫಲಂ

ಗಳ ಗ್ರಹಿಸಿ, ಭವದತ್ತ ಮುಖವಾಗಿ, ಹೋಗುತ್ತಿದೆ ನೋಡಾ. ಈ ಮನವೆಂಬ ಮರ್ಕಟನ ನಿಮ್ಮ ನೆನವೆಂಬ ಪಾಶದಲ್ಲಿ ಕಟ್ಟಿ, ಎನ್ನನುಳುಹಿಕೊಳ್ಳಯ್ಯ ಅಖಂಡೇಶ್ವರಾ.

೩. ತನು ವಿಕಾರ ಕತ್ತಲೆಯಲ್ಲಿ ಸಿಕ್ಕಿ, ಕಂಗೆಟ್ಟು ಕಳವಳಿಸಿ ತೊಳಲಿ, ಬಳಲಿದೆನಯ್ಯಾ. ಮನ ವಿಕಾರ ಮರವೆಯಲ್ಲಿ ಸಿಕ್ಕಿ, ಮಣ್ಣು ಮಸಿಯಾಗಿ ಬಣ್ಣಗೆಟ್ಟೆನಯ್ಯಾ. ಈ ತನು ಮನದ ವಿಕಾರವ ಮಾಣಿಸಿ ನಿಮ್ಮ ಭಕ್ತಿ ವಿಚಾರದಲ್ಲಿರಿಸಿ ಸಲಹಯ್ಯ ಎನ್ನನು ಅಖಂಡೇಶ್ವರಾ.

೪. ಮತಿಗೆಟ್ಟೆನಯ್ಯಾ ಮನದಾಸೆಯ ಕಚ್ಚಿ. ಧೃತಿಗೆಟ್ಟೆನಯ್ಯಾ ತನುವಿನಾಶೆಯ ಮೆಚ್ಚಿ. ಈ ತನುಮನದಾಶೆಯ ಕೆಡಿಸಿ, ನಿಮ್ಮ ಭಕ್ತಿಯ ಲೇಸ ತೋರಿಸಿ ಬದುಕಿಸಯ್ಯಾ ಎನ್ನನು ಅಖಂಡೇಶ್ವರಾ.

೫. ಮನವಿದು ಒಮ್ಮೆ ಪ್ರಪಂಚಿನತ್ತ ಹರಿವುದು. ಒಮ್ಮೆ ಪರಮಾರ್ಥದತ್ತ ತಿರುಗುವದು. ಒಂದ ಹಿಡಿಸಿ ಒಂದ ಬಿಡಿಸುವದು. ಇಂತೀ ಸಂದೇಹವನಿಕ್ಕಿ ದಂದುಗಗೂಡಿಸಿ, ಮುಂದುಗೆಡಿಸಿ ಕಾಡುತ್ತಿದೆ. ಈ ಮನದ ಮರುಳತನವ ಬಿಡಿಸಿ, ನಿಮ್ಮ ಶ್ರೀಪಾದದಲ್ಲಿರಿಸೆನ್ನ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ.

೬. ಏನಿದ್ದರೇನಿದ್ದರೊಲ್ಲದು ನಿಮ್ಮನುಭಾವಕ್ಕೆನ್ನ ಮನವು. ಡಂಭಕನೆಂಬವ ನಾನು ಕಂಡಯ್ಯಾ. ಕೂಡಲಸಂಗಮದೇವನ ಪೂಜಿಸಿ ಮಾನವರಾಸೆ ಬಿಡದಾಗಿ.

೭. ಒಡೆಯನ ಕಂಡರೆ, ಕಳ್ಳನಾಗದಿರು ಮನವೇ. ಭವದ ಬಾಧೆಯ ತಪ್ಪಿಸಿಕೊಂಬುವರೆ, ನೀನು ನಿಯತವಾಗಿ, ಭಯಭರಿತನಾಗಿ ಅಹಂಕಾರಿಯಾಗದೆ ಶರಣೆನ್ನು ಮನವೇ. ಕೂಡಲಸಂಗನ ಶರಣರಲ್ಲಿ ಭಕ್ತಿಯ ನೂನುವರೆ, ಕಿಂಕರನಾಗಿ ಬದುಕು ಮನವೇ.

೮. ಒಪ್ಪಿಹ ಪೈಲಾರನಲ್ಲಿ ಒಳಗೆಲ್ಲಿ ಸಣಬು. ಹೊರಗಣ ಬಣ್ಣವೇ ಕರ ಲೇಸಾಯಿತ್ತಯ್ಯಾ. ಶ್ವಾನನ ನಿದ್ರೆ ಅಜ್ಞಾನಿಯ ತಪದಂತೆ ಆಯಿತ್ತಯ್ಯಾ ಎನ್ನ ಮತಿ ಕೂಡಲಸಂಗಮದೇವಾ.

೯. ಲೋಕೋಪಚಾರಕ್ಕೆ ಮಜ್ಜನಕ್ಕೆರೆವೆನಯ್ಯಾ. ಮನದ ತಾಮಸ ಬಿಡದು. ಮನದ ಕಪಟ ಬಿಡದು. ಶಿವ ಶರಣೆಂಬುದು ಅಳವಡದಯ್ಯಾ. ಎನ್ನ ಮನವಲ್ಲಿ ಎರಡುಳ್ಳನ್ನಕ್ಕರ, ಕೂಡಲಸಂಗಮದೇವನೆಂತೊಲಿವ?

೧೦. ಕೆಲಕ್ಕೆ ಶುದ್ಧನಾದೆನಲ್ಲದೆ, ಮನಕ್ಕೆ ಶುದ್ಧನಾಗೆನಯ್ಯಾ. ಕೈ ಮುಟ್ಟಿ ಪೂಜಿಸುವಡೆ, ಕೈ ಶುದ್ಧಿ ಇಲ್ಲವಯ್ಯಾ. ಮನಮುಟ್ಟಿ ಪೂಜಿಸುವಡೆ, ಎನ್ನ ಮನ ಶುದ್ಧವಿಲ್ಲವಯ್ಯಾ. ಭಾವ ಶುದ್ಧವಾದಡೆ, ಕೂಡಲ ಸಂಗಮದೇವಯ್ಯಾ ನಿತ್ತ ಬಾ ಎಂದೆತ್ತಿಕೊಳ್ಳನೇಕಯ್ಯಾ?

೧೧. ಹೃದಯದಿ ಕತ್ತರಿ, ತುದಿಯ ನಾಲಿಗೆ ಬೆಲ್ಲೆಂಬೋ. ಆಡಿಹೆನೆಂಬೋ. ಹಾಡಿಹೆನೆಂಬೋ. ನಿಚ್ಚ ನಿಚ್ಚ ಶಿವರಾತ್ರಿಯ ಮಾಡಿಹನೆಂಬೋ. ಆನು ಎನ್ನಂತೆ. ಮನ ಮನದಂತೆ, ಕೂಡಲಸಂಗಮದೇವ ತಾನು ತನ್ನಂತೆ.

೧೨. ಶಬ್ದ ಸಂಭಾಷಣೆಯ ನುಡಿಯ ವರ್ಣಿಸಿ ನುಡಿವೆ. ತೊಡೆಹದ ಕೆಲಸದ ಬಣ್ಣದಂತೆ, ಕಡಿಹಕ್ಕೆ ಒರೆಗೆ ಬಾರದು ನೋಡಾ. ಎನ್ನ ಮನದಲೊಂದು, ಹೃದಯದಲೊಂದು, ವಚನದಲೊಂದು ನೋಡಾ. ಕೂಡಲಸಂಗಮದೇವಾ, ಆನು ಭಕ್ತನೆಂದು ಹುಸಿಯ ಮುಸಕವನೇನು ಬಣ್ಣಿಸುವೆನಯ್ಯಾ?

೧೩. ಲೌಕಿಕರ ಕಂಡು ಆಡುವೆ ಹಾಡುವೆ. ತಾರ್ಕಿಕರ ಕಂಡು ಆಡುವೆ ಹಾಡುವೆ. ಸಹಜ ಗುಣವೆನ್ನಲ್ಲಿಲ್ಲವಯ್ಯಾ ನಿಜ ಭಕ್ತಿ ಎನಗಿಲ್ಲ ತಂದೆ. ಏಕೋಭಾವ ಎನಗುಳ್ಳರೆ, ಯಾಕೆ ನೀ ಕರುಣಿಸಯ್ಯಾ ಕೂಡಲಸಂಗಮದೇವಾ?

## ಸಂಸಾರವು ದುಃಖಮಯವು.

೧. ಇಲಿಗಡಹನೊಡ್ಡಿದಲ್ಲಿರ್ಪಂತೆ, ಎನ್ನ ಸಂಸಾರ ತನುವು ಕೆಡುವನ್ನಕ್ಕ ಮಾಣದು. ಹೆರರ ಛಿದ್ರಿಸುವದನು ತನು ಕೆಡುವ

ನ್ನಕ್ಕ ಮಾಣದು. ಹೆರರ ಛಿದ್ರಿಸುವವನು ತನು ಕೆಡುವನ್ನಕ, ಮಾಣದು. ಅಕಟಕಟಾ! ಸಂಸಾರ ಅಸತ್ಯ, ಕೂಡಲಸಂಗಮದೇವಾ.

೨. ಕಪ್ಪೆ ಸರ್ಪನ ನೆಳಲಲ್ಲಿ ಇರ್ಪಂತೆ ಎನಗಾಯಿತ್ತಯ್ಯಾ. ಅಕಟಕಟಾ! ಸಂಸಾರವು ವೃಥಾ ಹೋಯಿತ್ತಲ್ಲಾ! ಕರ್ತೃ ಕೂಡಲ ಸಂಗಮದೇವಾ, ಇದನು ತಪ್ಪಿಸಿ ನನ್ನನು ರಕ್ಷಿಸಯ್ಯಾ ಪ್ರಭುವೇ.

೩. ಬಟ್ಟೆಯಲ್ಲಿ ಹೋಗುತ್ತಿಪ್ಪ ಮನುಜನೊಬ್ಬನನ್ನು ಹುಲಿ, ಕಾಡುಕಿಚ್ಚು, ರಕ್ಕಸಿ, ಕಾಡಾನೆಗಳು ನಾಲ್ಕು ದಿಕ್ಕಿನಲ್ಲಿ ಅಟ್ಟಿ ಬರುತ್ತಿರಲು, ಅವಂ ಕಂಡು, ಭಯದಿಂದ ಹೋಗಲು ದಿಕ್ಕು ತೋರದೆ, ಹಾಳು ಭಾವಿಯಂ ಕಂಡು, ತಲೆಯೂರಿ ಬೀಳುವಲ್ಲಿ ಹಾವ ಕಂಡು, ಬೀಳಲಮ್ಮದೆ, ಇಲಿ ಕಡಿದ ಬಳ್ಳಿಯ ಹಿಡಿದು ನಿಲ್ಲಲು, ಜೇನುಹುಳು ಮೈಸೂರುವಾಗ, ಮೂಗಿನ ತುದಿಯಲೊಂದು ಹನಿಯು ಮಧು ಬಿಂದು ಬೀಳಲಾಗಿ, ಆ ಮಧುವಂ ಕಂಡು, ಹಿರಿದಪ್ಪ ದುಃಖವನೆಲ್ಲವ ಸ್ಮರಿಸಿ, ನಾಲಿಗೆಯಲ್ಲಿ ಆ ಮಧುವ ಸೇವಿಸುವನಂತೆ, ಈ ಸಂಸಾರ ಸುಖವ ವಿಚಾರಿಸಿ ನೋಡಿದಡೆ, ದುಃಖದಾಗರವು. ಇದನರಿದು ಸಕಲ ವಿಷಯಂಗಳಲ್ಲಿಯು ಸುಖವಿಂತುಟೆಂದು ನಿರ್ವಿಷಯಿಯಾಗಿ ನಿಂದ ನಿಲವು ನೀನೇ ನಿಮ್ಮಲಿಗೆಯ ಚನ್ನರಾಮಾ.

೪. ಸಂಸಾರವೆಂಬ ಮಹಾ ಘೋರಾರಣ್ಯದಲ್ಲಿ ಹೊಲಬು ತಪ್ಪಿ ಬಳಲುತ್ತಿಹೆ ನೋಡಯ್ಯಾ. ಇರುಳು ಹಗಲೆನ್ನದೆ ಸಂಸಾರದಲ್ಲಿ ಸಾವುತ್ತಿಹೆ ನೋಡಯ್ಯಾ. ಇಂತಪ್ಪ ಸಂಸಾರಾರಣ್ಯದಲ್ಲಿ ಹೊಲಬುಗೆಟ್ಟು ನೆಲೆಯಗಾಣದೆ ಹೋದರು ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ ನಿಮ್ಮನರಿಯದೆ.

೫. ಪಂಚೇಂದ್ರಿಯವೆಂಬ ಹೆಡೆಯನುಳ್ಳ ಸಂಸಾರ ಸರ್ಪ ದಷ್ಟವಾಗಲು, ಪಂಚ ವಿಷಯವೆಂಬ ವಿಷ ಹತ್ತಿ ಮೂರ್ಛಿತರಾದರಲ್ಲ

ಸಮಸ್ತ ಲೋಕವೆಲ್ಲ. ಸರ್ಪರ ಕಚ್ಚಿ ಕೂಡಿಯಾಡುವ ಸರ್ಪನ ಬಾಯ ಕಟ್ಟಲರಿಯದೆ ಮರಣವಾದರಲ್ಲ ನಿಜಗುರು ಸ್ವತಂತ್ರ ಸಿದ್ಧ ಲಿಂಗೇಶ್ವರನನರಿಯದವರೆಲ್ಲ.

೬. ಆವಾವ ದೇಹ ತೊಟ್ಟರೂ ಆ ದೇಹಕ್ಕೆ ತಕ್ಕ ಸಂಸಾರ ಬಿಡದು. ಆಧ್ಯಾತ್ಮಿಕ, ಆಧಿದೈವಿಕ, ಆಧಿಭೌತಿಕವೆಂಬ ತಾಪತ್ರ ಯಾಗ್ನಿಯಲ್ಲಿ ಬೇಯದೆ ಮಾಬರೇ? ಹಿಂದೆ ಮಾಡಿದ ಕರ್ಮ ಹಿಂಡಿ ಸದೆ ಬಿಡುವುದೇ? ಸುಖ ಲೇಶವುಂ ಕಾಣದೆ ಬಳಲುತ್ತಿದೆ ಜಗವೆಲ್ಲ. ಇದನರಿದು ಮಲಿಕೋಶ ಶರೀರ ಸಂಸಾರವ ಹೇಸಿ ಬಿಡು ಮರುಳೇ. ಮುಂದೆ ನಿನಗೆ ಜಯ ಪದವಹುದು. ನಿಜಗುರು ಸ್ವತಂತ್ರ ಸಿದ್ಧಲಿಂ ಗೇಶ್ವರನಲ್ಲಿ ಸುಖಿಯಪ್ಪೆ ಮರುಳೇ.

೭. ನಾನೊಂದ ನೆನೆದರೆ, ತಾನೊಂದ ನೆನೆವುದು. ನಾನಿತ್ತ ಲೆಳೆದರೆ, ತಾನತ್ತಲೆಳೆವುದು. ತಾ ಬೇರೆ ಎನ್ನನಳಲಿಸಿ ಕಾಡಿತ್ತು. ತಾ ಬೇರೆ ಎನ್ನ ಬಳಲಿಸಿ ಕಾಡಿತ್ತು. ಕೂಡಲಸಂಗಮದೇವನ ಕೂಡಿ ಹೆನೆಂದರೆ ತಾನೆನ್ನ ಮುಂದುಗೆಡಿಸಿತ್ತು ಮಾಯೆ.

೮. ಇಂದಿಂಗೆಂತ್ತು ನಾಳಿಂಗೆಂತು ಬೆಂದೊಡಲ ಹೊರೆಯ ಹೊತ್ತಿತ್ತೆನ್ನ ಸಂಸಾರ? ಹಿಂದೆ ನಾನಾ ಯೋನಿಯಲ್ಲಿ ಬಂದೆನೆಂಬ ಹ್ಯೇಯವಿಲ್ಲ. ಮುಂದೆ ಮುಕ್ತಿಯಾಗಬೇಕೆಂಬ ಯುಕ್ತಿ ಇಲ್ಲ. ಎಂ ದೆಂದು ಸದಾಶಿವನ ಕುಂದದೆ ನೆನೆಯಲೀಯದೆ, ಕೊಂದುದಯ್ಯ ಈ ಮಾಯೆ ಕೂಡಲಸಂಗಮದೇವಾ.

## ಭಕ್ತಿಯುಳ್ಳವನಾಗಿರು.

೧. ನಂಬಿ ಕರೆದಡೆ, 'ಓ' ಎಂಬ ಶಿವನು. ನಂಬದೆ ಕರೆದಡೆ, 'ಓ' ಎಂಬನೇ ಶಿವನು? ನಂಬಲರಿಯರು, ನಚ್ಚಲರಿಯರು ಡಂ

ಭಿನ ಭಕ್ತರು. ನಂಬದೆ ನಚ್ಚದೆ ಬರಿದೆ ಕರೆದಡೆ, ಶಂಭು ಮೌನದಲ್ಲಿಪ್ಪ ಕೂಡಲಸಂಗಮದೇವಾ.

೨. ನಂಬರು, ನೆಚ್ಚರು, ಬರಿದೆ ಕರೆವರು. ನಂಬಲರಿಯರು ಲೋಕದ ಮನುಜರು. ನಂಬಿ ಕರೆದಡೆ, ಓ, ಎನ್ನನೇ ಶಿವನು? ನಂಬದೆ ನೆಚ್ಚದೆ, ಬರಿದೆ ಕರೆವರ ಕೊಂಬೆ ಮೆಟ್ಟಿ ಕೂಗೆಂದ ನಮ್ಮ ಕೂಡಲಸಂಗಮದೇವಾ.

೩. ನಾದಪ್ರಿಯನು ಶಿವನೆಂಬರು, ನಾದಪ್ರಿಯ ಶಿವನಲ್ಲವಯ್ಯ! ವೇದಪ್ರಿಯ ಶಿವನೆಂಬರು, ವೇದಪ್ರಿಯ ಶಿವನಲ್ಲವಯ್ಯ! ನಾದವ ನುಡಿಸಿದ ರಾವಣಂಗೆ ಅರೆಯಾಯುಷ್ಯವಾಯಿತ್ತು. ವೇದವನೋದಿದ ಬ್ರಹ್ಮಂಗೆ ಶಿರವು ಹೋಯಿತ್ತು. ನಾದಪ್ರಿಯನು ಅಲ್ಲ. ವೇದಪ್ರಿಯನು ಅಲ್ಲ. ಭಕ್ತಿ ಪ್ರಿಯನು ನಮ್ಮ ಕೂಡಲಸಂಗಮದೇವಾ.

೪. ನಚ್ಚಿದೆನೆಂದರೆ, ಮೆಚ್ಚಿದೆನೆಂದರೆ, ಸಲೆ ಮಾರುವೋದೆನೆಂದರೆ, ತನುವನಲ್ಲಾಡಿಸಿ ನೋಡುವೆ ನೀನು. ಮನವನಲ್ಲಾಡಿಸಿ ನೋಡುವೆ ನೀನು, ಧನವನಲ್ಲಾಡಿಸಿ ನೋಡುವೆ ನೀನು. ಇವೆಲ್ಲಕ್ಕಂಜದಿದ್ದರೆ, ಭಕ್ತಿ ಕಂಪಿತ ನಮ್ಮ ಕೂಡಲಸಂಗಮದೇವಾ.

೫. ಶಬ್ದ ಸುಖಕ್ಕೆ ಮೆಚ್ಚಿ, ಮಾತಿಂಗೆ ಮಾತು ಕೊಟ್ಟು ಕೆಟ್ಟೆನಯ್ಯ! ಅನುಭಾವಕ್ಕೆದೆಯಾಗದೆ, ಬೆಬ್ಬನೆ ಬೆರೆತೆನಯ್ಯ. ಅಮೃತದ ಕೊಡನ ತುಂಬಿ, ಒಡೆಯ ಹೊಯ್ದು ಅರಸಲುಂಟೆ? ಸ್ವಾಮಿ ಭೃತ್ಯಸಂಬಂಧವೆನ್ನ ಭಕ್ತಿ. ಪ್ರತ್ಯುತ್ತರ ನಾಯಕ ನರಕ ಕೂಡಲ ಸಂಗಮದೇವಾ.

೬ ಮಸಿಯನೇಸುಕಾಲ ಬೆಳಗಿದರೆ, ಬಿಳಿದಾಗ ಬಲ್ಲುದೆ? ಕರ್ಮಸ್ಥಿತಿ ಬೆನ್ನ ಬಿಡದು. ಅನಂತಕೋಟಿ ಸ್ನಾನವ ಮಾಡಿದಡೇನು? ಒಂದು ನಿಮಿಷದ ಉದಾಸೀನವೇ ಕೆಡಿಸಿತ್ತು. ಕೂಡಲ ಸಂಗಮದೇವಾ ನಿಮ್ಮ ನಂಬಿಯೂ ನಂಬದ ಡಂಭಕ ನಾನಯ್ಯ.

೭. ವ್ಯಾಧನೊಂದು ಮೊಲನ ತಂದರೆ, ಸಲುವ ಹಾಗಕ್ಕೆ ಬೆಲೆಗೈವರಯ್ಯ. ನೆಲನಾಳ್ವನ ಹೆಣನೆಂದರೆ, ಒಂದು ಹಾಗಕ್ಕೆ ಕೊಂಬುವರಿಲ್ಲ ನೋಡಯ್ಯ. ಮಲಸಿಂಪ ಕರಕಷ್ಟ ನರನ ಬಾಳುವೆ. ಸಲೆ ನಂಬು ಕೂಡಲಸಂಗಮದೇವನ.

೮. ಕತ್ತೆ ಬಲ್ಲುದೆ, ಕಸ್ತುರಿಯ ವಾಸನೆಯ? ತೊತ್ತು ಬಲ್ಲಳೆ, ಗುರು ಹಿರಿಯರುತ್ತಮರೆಂಬುದ? ಭಕ್ತಿಯನರಿಯದ ವ್ಯರ್ಥ ಜೀವಿಗಳು ನಿಮ್ಮನೆತ್ತ ಬಲ್ಲರೈ ರಾಮನಾಥಾ?

೯. ಬರು ಶಠಗನ ಭಕ್ತಿ ದಿಟವೆಂದು ನೆಚ್ಚಲುಬೇಡ. ಮಠದೊಳಗಣ ಬೆಕ್ಕು ಇಲಿಯ ಕಂಡು ಪುಟನೆಗೆದಂತಾಯಿತ್ತು ಕಾಣಾ ರಾಮನಾಥಾ.

೧೦. ಭಕ್ತಿಯ ಬಲ್ಲವರು ನಚ್ಚಿ ಮಚ್ಚಿ ಮನವನೊಚ್ಚತಗೊಡುವರು. ಭಕ್ತಿಯನರಿಯದ ಬಲು ಪಾಪಿ ಜೀವಿಗಳು ಕಚ್ಚಿವರು ಬೊಗಳುವರು ರಾಮನಾಥಾ.

೧೧. ಭಕ್ತರೇ ಸಮರ್ಥರು, ಅಸಮರ್ಥರೆನಲುಂಟೆ? ಚನ್ನನೆತ್ತ? ಚೋಳನೆತ್ತ? ಚನ್ನನೊಡನುಂಡ ಶಿವನು. ಅಪಿಯಯ್ಯ! ಚನ್ನ ಚೋಳನ ಮನೆಯ ಕಂಪಣಿಗನಯ್ಯ! ಕೂಡಲಸಂಗಮದೇವ ಭಕ್ತಿ ಲಂಪಟನಯ್ಯ!

೧೨. ಭಕ್ತಿಯ ಭಾವ ನಿಷ್ಠೆ ನಿಬ್ಬೆರಿಸಿಲಾಗಿ, ಶಿವನ ತನ್ನ ವಶವ ಮಾಡಿತ್ತು. ಭಕ್ತಿ ಶಿವನ ನಡುಗಿಸಿತ್ತು, ನುಡಿಸಿತ್ತು. ಭಕ್ತಿ ಶಿವನ ನುಣೆಸಿ ಉಡಿಸಿ ತೊಡಿಸಿತ್ತು. ಭಕ್ತಿ ಶಿವನ ಹಾಡಿಸಿ ಕುಣಿದಾಡಿಸಿತ್ತು. ಭಕ್ತಿ ಇಲ್ಲದೆ ವಿರಕ್ತಿ ಇಲ್ಲ, ಜ್ಞಾನವಿಲ್ಲ. ಇದು ಕಾರಣ ಭಕ್ತಿಯೇ ಮುಕ್ತಿ ಜನನಿ. ತಾನೆ ಬೇರಿಲ್ಲ. ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನ ನಿಜವನೆಯ್ದುವಡೆ ಭಕ್ತಿಯಿಂದಲ್ಲದಾಗದು.

೧೩. ಶಿವಭಕ್ತಿ ಎಂಬುದು ಯುಕ್ತಿಯ ಪರಿಯಂತಲ್ಲ. ಮೂಗರು ಕಂಡ ಕನಸಿನಂತಿಪ್ಪುದು ಕಾಣಿರೋ. ಹೇಳಿ ಕೇಳಿ ಮಾಡುವದು

ಯುಕ್ತಿ ಭಕ್ತಿ. ಸಾಧಕದಿಂದ ಮಾಡುವದು ಅಭ್ಯಾಸ ಭಕ್ತಿ. ಮನ ಕೂರ್ತು ಮಾಡುವದು ಮುಕ್ತಿಭಕ್ತಿ. ಕೇಡಿಲ್ಲದೆ ಮಾಡುವದು ನಿತ್ಯ ಭಕ್ತಿ. ಇದ್ದಂತಿದ್ದು ನಿಜವಪ್ಪುದು ನಿಜಭಕ್ತಿ. ಆ ನಿಜಭಕ್ತಿಯಲ್ಲಿ ಭರಿತರು ಸೌರಾಷ್ಟ್ರ ಸೋಮೇಶ್ವರ ನಿಮ್ಮ ಶರಣರು.

೧೪. ಸತ್ಯವಿಲ್ಲದ ಭಕ್ತಿ ಸಾವಿರವರುಷ ಮಾಡಿದರೇನೋ? ನಿಷ್ಠೆ ಇಲ್ಲದ ಪೂಜೆ ಏಸು ಕಾಲ ಪೂಜಿಸಿದರೇನೋ? ಅಭ್ಯಾಸವಾಯಿತ್ತಲ್ಲದೆ ಸಹಜವಲ್ಲ, ಸನ್ಮತವಲ್ಲ, ನಿಜವಲ್ಲ. ಒಬ್ಬರನೊಬ್ಬರ ಕಂಡು, ಮಾಡುವರಲ್ಲದೆ, ತಮ್ಮ ತಾವು ವಿಚಾರಿಸಿಕೊಳಲರಿಯರು. ಇಂತಪ್ಪವರು ಭಕ್ತರೆನಿಸಲರಿಯರು. ಕೂಡಲಚನ್ನಸಂಗಮದೇವಾ ನೀ ಸಾಕ್ಷಿಯಾಗಿ 'ಛೀ ಛೀ' ಎಂಬೆನು.

೧೫. ಚಂದ್ರಕಾಂತದ ಸಿಲೆಯಲ್ಲಿ ಜಲವಿಲ್ಲದನ್ನಕ್ಕ ಸೀತೋದಕ ಒಸರುವ ಪರಿ ಇನ್ನೆಂತೋ? ಸೂರ್ಯ ಕಾಂತದ ಸಿಲೆಯಲ್ಲಿ ಅಗ್ನಿ ಇಲ್ಲದನ್ನಕ್ಕ ಉಷ್ಣವ ತೋರುವ ಪರಿ ಎನ್ನೆಂತೋ? ಶರಣಂಗೆ ಭಕ್ತಿಕಾಯವಿಲ್ಲದನ್ನಕ್ಕ ಕೂಡಲಸಂಗಯ್ಯನನರಿವ ಪರಿ ಇನ್ನೆಂತೋ?

೧೬. ನುಡಿಯೊಳಗೆ ಸತ್ಯ, ಹೃದಯದಲ್ಲಿ ಯುಕ್ತಿ, ಅರಿವಿನಲ್ಲಿ ವಿರಕ್ತಿ ದೊರೆಕೊಂಡರೆ, ಅಂತವರಲ್ಲಿಯೇ ಭಕ್ತಿ ದೊರೆಕೊಂಬುದು. ಆ ಭಕ್ತಿ ತಾನೆ ಮುಕ್ತಿ ಮಾತೆಯಾದ ಕಾರಣ ಭಕ್ತಿಯಿಂದ ಶಿವನಲ್ಲಿ ನಿರ್ಮಲ ಚಿತ್ತವನಿರಿಸಿ ನೆನೆವುದು ನಮ್ಮ ನಿಜ ಗುರು ಸ್ವತಂತ್ರ ಸಿದ್ಧಲಿಂಗೇಶ್ವರನಾ.

## ಪರಮಾತ್ಮನ ರಕ್ಷಣೆ.

೧. ವಿಷಯವೆಂಬ ಹಸರನೆನ್ನ ಮುಂದೆ ತಂದು, ಪಸರಿಸದಿರಯ್ಯ. ಪಶುವೇನ ಬಲ್ಲದು ಹಸುರೆಂದೆಳಸುವದಲ್ಲದೆ? ವಿಷಯ

ರಹಿತನ ಮಾಡಿ, ಭಕ್ತಿ ರಸವ ದಣಿಯೆ ಹೊಯಿಸಿ, ಸುಬುದ್ಧಿ ಎಂಬ ಉದಕವನೆರೆದು, ನೋಡಿ ಸಲಹಯ್ಯ ಕೂಡಲಸಂಗಮದೇವಾ.

೨. ಕೆಸರಲ್ಲಿ ಬಿದ್ದ ಪಶುವಿನಂತೆ ದೆಸೆದೆಸೆಗೆ ಬಾಯಬಿಡುತ್ತಿದ್ದೆನಯ್ಯ. ಆರೈವರಿಲ್ಲ, ಅಕಟಕಟಾ! ಪಶುವೆಂದೆನ್ನ ಕೂಡಲಸಂಗಮದೇವ ಕೊಂಬು ಹಿಡಿದೆತ್ತುವನ್ನಕ್ಕ.

೩. ಬೆಳೆಯುದ ಭೂಮಿಯಲೊಂದು ಪ್ರಳಯದ ಕಸ ಹುಟ್ಟಿ ತಿಳಿಯಲೀಯದು, ಎಚ್ಚರಲೀಯದು. ಎನ್ನವಗುಣವೆಂಬ ಕಸವ ಕಿತ್ತು ಸಲಹಯ್ಯ, ಲಿಂಗ ತಂದೆ. ಸುಳಿ ತೆಗೆದು ಬೆಳೆವೆನು ಕೂಡಲಸಂಗಮದೇವಾ.

೪. ಸಮುದ್ರದೊಳಗಣ ಸಿಂಪಿಯಂತೆ ಬಾಯ ಬಿಡುತ್ತಲಿದ್ದೇನೆ. ನೀವಲ್ಲದೆ ಮತ್ತಾರೂ ಎನ್ನನರಿವರಿಲ್ಲ ನೋಡಯ್ಯ. ಕೂಡಲಸಂಗಮದೇವಾ, ನೀವಲ್ಲದೊಳಕೊಂಬುವರಿಲ್ಲ ನೋಡಯ್ಯ.

೫. ನರವಿಂಧ್ಯದೊಳಗೆನ್ನ ಹುಲುಗಿಳಿಯ ಮಾಡಿ, ಸಲಹುತ್ತ "ಶಿವಾ" ಎಂದೋದಿಸಯ್ಯ. ಭಕ್ತಿ ಎಂಬ ಪಂಜರದೊಳಗಿಕ್ಕಿ, ಸಲಹು ಕೂಡಲಸಂಗಮದೇವಾ.

೬. ಅತ್ತಲಿತ್ತ ಸಾರದಂತೆ ಹೆಳವನ ಮಾಡಯ್ಯ ತಂದೆ. ಸುತ್ತಿ ಸುಳಿದು ನೋಡದಂತೆ ಅಂಧಕನ ಮಾಡಯ್ಯ ತಂದೆ. ಮತ್ತೊಂದ ಕೇಳದಂತೆ ಕಿವುಡನ ಮಾಡಯ್ಯ ತಂದೆ. ನಿಮ್ಮ ಶರಣರ ಪಾದವಲ್ಲದೆ ಅನ್ಯ ವಿಷಯಕ್ಕೆಳಸದಂತೆ ಇರಿಸು ಕೂಡಲಸಂಗಮದೇವಾ.

೭. ಸಟೆ ಇಲ್ಲದಂತೆ, ಪ್ರಪಂಚವಿಲ್ಲದಂತೆ, ವೈಶಿಕವಿಲ್ಲದಂತೆ ನಡಿಸಯ್ಯ ಲಿಂಗ ತಂದೆ. ಒಂದು ನಿಮಿಷವಾದರೆಯೂ ನಿಮ್ಮ ಶರಣರ ಸಂಗದಲ್ಲಿ ಇರಿಸಯ್ಯ. ಬೇರೆ ಮತ್ತೆನ್ನ ಭವವ ತೋರದಿರಯ್ಯ. ಹೊಲಬುಗೆಟ್ಟಿನಯ್ಯ ಕೂಡಲಸಂಗಮದೇವಾ.

೮. ಇವನಾರವನಿವನಾರವ ಇವನಾರವನೆಂದೆಣಿಸದಿರಯ್ಯಾ. ಇವ ನಮ್ಮವ ಇವ ನಮ್ಮವನೆಂದೆಣಿಸಯ್ಯಾ. ಕೂಡಲಸಂಗಮದೇವಯ್ಯಾ ನಿಮ್ಮ ಮಗನೆಂದೆಣಿಸಯ್ಯಾ.

೯. ಎಂತು ಶಿವಭಕ್ತಿಯ ನಾನುಸರಿಸುವೆನಯ್ಯಾ. ಎಂತು ಶಿವಾಚಾರವೆನಗೆ ಸಾಧ್ಯವಪ್ಪುದಯ್ಯಾ. ಕಾಮ, ಕ್ರೋಧ, ಲೋಭ, ಮೋಹ, ಮದ. ಮತ್ಸರಂಗಳಿಂದ ಕಟ್ಟುವಡೆದನು ಹಸಿವು, ತೃಷೆ, ವ್ಯಸನಂಗಳಿಂದ ಕುದಿವುತ್ತಲಿದ್ದೇನೆ. ಪಂಚೇಂದ್ರಿಯ ಸಪ್ತ ಧಾತು ಹುರಿಹಂಚುಮಾಡಿ ಕಾಡಿಹವಯ್ಯಾ. ಅಯ್ಯೋ, ಅಯ್ಯೋ, ಎನ್ನ ಹುಯ್ಯಲ ಕೇಳಯ್ಯಾ ಕೂಡಲಸಂಗಮದೇವಾ.

೧೦. ಆಶಾಪಾಶದಿಂದ ತೊಳಲಿತ್ತಯ್ಯಾ ಎನ್ನ ಕಾಯವು. ಆಶೆಯಿಂದ ಹೂಸಕುಳಿಗೊಂಡಿತ್ತಯ್ಯಾ ಎನ್ನ ಮನವು. ಆಶೆ ಎಂಬ ಮರವೆಯಲ್ಲಿ ಮನೆಮಾಡಿತ್ತಯ್ಯಾ ಎನ್ನ ಪ್ರಾಣವು. ಆಶೆ ಎಂಬ ಪೊಡೆಗಿಚ್ಚಿನಲ್ಲಿ ಹೊಡೆದಾಡಿ ಸತ್ತಿತ್ತಯ್ಯಾ ಎನ್ನ ಭಾವವು. ಇನ್ನೆನಗೆ ಗತಿಪಥವ ತೋರಿ ರಕ್ಷಿಸಯ್ಯಾ, ಭವಪಾಶ ರಹಿತ ಪರಬ್ರಹ್ಮ ಮೂರ್ತಿ ಶ್ರೀಗುರುಲಿಂಗಜಂಗಮವೇ.

೧೧. ಸಂಸಾರದ ಸುಖವೆತ್ತ? ನಿಮ್ಮ ನಿಜಸುಖವೆತ್ತ? ಕತ್ತಲೆ ಎತ್ತ? ಬೆಳಗೆತ್ತ? ಎನ್ನಂತರಂಗದೊಳಗಿರ್ದು, ತೋರುವೆ. ಅಡಗುವೆ. ಅದೇನು ಗಾರುಡಿಗತನ? ಎನಗೆ ಸವಿವಾಲು ಸಕ್ಕರೆಯನುಣಕಲಿಸಿ ಬೇವನುಣಕಲಿಸಿಹೆನೆಂದಡೆ, ಅದು ಹಿತವಹುದೇ? ನಿನ್ನ ನಿಜಸುಖವ ಸವಿಗಲಿಸಿ, ಸಂಸಾರಸುಖವನುಣಿಸಿಹೆನೆಂದರೆ, ಅದು ಮನಕೊಂಬುದೇ? ಎನ್ನೊಡನೆ ವಿನೋದವೇಕೆ? ನನಗೆ ಬೇಡ ಬೇಡ. ಎನ್ನ ನೀನರಿದು ಸಲಹು. ನಿನಗೆ ಎನ್ನಾಣೆಯಯ್ಯಾ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ.

೧೨. ಎರವಿನ ಬದುಕು ಸ್ಥಿರವಲ್ಲ. ಅಭ್ರಚ್ಛಾಯೆಯಂತೆ, ನಿಮಿಷದಲ್ಲಿ ತೋರಿಯಡಗಲುಳ್ಳ ಈ ಸಂಸಾರದಲ್ಲಿ ಏನು ಲೇಸ

ಕಂಡು ನಚ್ಚುವೆ? ನಚ್ಚದಿರು. ನಚ್ಚಿದವರು ಕೆಟ್ಟ ಕೇಡಿಂಗೆ ಕಡೆ ಇಲ್ಲ. ಬರಿಯ ಭ್ರಮೆಯು ಶರೆಯು ಸಂಸಾರ. ಇದರಲ್ಲೇನೂ ಲೇಸಿಲ್ಲವೆಂದರಿದು, ದೃಢವಿಡಿ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನ ಚರಣವನು.

೧೩. ಜನನ ಮರಣಂಗಳಲ್ಲಿ ಬರಿಸಬಾರದ ಭಾಷೆ, ನಿತ್ಯ ನೀನೆಂದು ಮರೆ ಪೊಕ್ಕ ಕಾರಣ. ಇಹದಲ್ಲಿ ಪರದಲ್ಲಿ ಇರಿಸಬಾರದ ಭಾಷೆ. ತನ್ನಲ್ಲಿ ತನಗೆ ವಿವರಣೆ ಇಲ್ಲದ ಕಾರಣ. ಪುಣ್ಯಪಾಪಂಗಳನುಣ್ಣಿಸಬಾರದ ಭಾಷೆ, ತಾನು ಪಾದೋದಕ ಪ್ರಸಾದ ಜೀವಿಯಾಗಿ. ತಾ ಸಹಿತ ನಾನಿಪ್ಪೆ ನಾ ಸಹಿತ ತಾನಿಪ್ಪ ಕಾರಣ ವಂಚನೆ ಬಾರದು ಎನಗೆ. ಶಂಭು ಜಕ್ಕೇಶ್ವರದೇವಾ ಸದ್ಗುರು ಆಜ್ಞೆಯಿಂದ ನೀನೊಲಿದು ಸಲಹೆನ್ನ ಪ್ರಾಣಲಿಂಗವಾಗಿ.

---

## ಪರಮಾತ್ಮನ ಕ್ಷಮೆ.

೧ ಎನ್ನ ತಪ್ಪು ಅನಂತಕೋಟಿ. ನಿಮ್ಮ ಸೈರಣೆಗೆ ಲೆಕ್ಕವಿಲ್ಲ. ಇನ್ನು ತಪ್ಪಿದೆನಾದಡೆ ನಿಮ್ಮ ಪಾದವೇ ದಿಬ್ಯ. ಕೂಡಲಸಂಗಮದೇವಯ್ಯಾ, ನಿಮ್ಮ ಪ್ರಮಥರ ಮುಂದೆ ಕೆನ್ನರಿ ಬೊಮ್ಮಣ್ಣನೇ ಸಾಕ್ಷಿ.

೨. ಆನು ಮಾಡಿದ ತಪ್ಪನೆಣಿಸಿಹೆನೆಂದಡೆ, ಗಣನೆ ಇಲ್ಲ. ನಡೆದು ತಪ್ಪುವೆ, ಮಾಡಿ ತಪ್ಪುವೆ, ನೀಡಿ ತಪ್ಪುವೆ, ಕೂಡಿ ತಪ್ಪುವೆ, ಅರಿದು ತಪ್ಪುವೆ, ಮರೆದು ತಪ್ಪುವೆ. ಎನ್ನ ತಪ್ಪನೊಪ್ಪಮಾಡಿಕೊಂಬುದಲ್ಲದೆ, ಚಿತ್ತಕ್ಕೆ ತರಲಾಗದು ಕೂಡಲಸಂಗಮದೇವಾ.

೩. ಎಡದ ಪಾದದಲೊದ್ದರೆ, ಬಲದ ಪಾದವ ಹಿಡಿವೆ. ಬಲದ ಪಾದದಲೊದ್ದರೆ, ಎಡದ ಪಾದವ ಹಿಡಿವೆ. ತ್ರಾಹಿ. ತ್ರಾಹಿ.

ತಪ್ಪೆನ್ನದು, ಕ್ಷಮೆ ನಿಮ್ಮದು. ಕೂಡಲಸಂಗಮದೇವಾ ನಿಮ್ಮ ಕರು ಣದ ಕಂದ ನಾನು.

೪. ಹೆಂಡಿರೆನ್ನದೆ ಮಕ್ಕಳೆನ್ನದೆ ತೊತ್ತಿರೆನ್ನದೆ ಬಂಟರೆನ್ನದೆ ಹಗೆಗಳೆನ್ನದೆ, ತಪ್ಪೆನ್ನದಯ್ಯಾ. ಜಾಗ್ರತ್ಸ್ವಪ್ನ ಸುಷುಪ್ತಿಯಲ್ಲಿ ತಪ್ಪೆನ್ನದಯ್ಯಾ. ನಾಚಯ್ಯ ಪ್ರಿಯ ಮಲ್ಲಿನಾಥಯ್ಯ ನೀನು ಇರ್ದವರ ನೀನೆನ್ನದ ತಪ್ಪೆನ್ನದಯ್ಯಾ.

೫ ವೇದಶಾಸ್ತ್ರವನೋದುವದಕ್ಕೆ ಹಾರುವನಲ್ಲ. ಇರಿದು ಮೆರೆಯುವದಕ್ಕೆ ಕ್ಷತ್ರಿಯನಲ್ಲ. ವ್ಯವಹರಿಸುವದಕ್ಕೆ ವೈಶ್ಯನಲ್ಲ. ಒಕ್ಕಲಮಗನ ತಪ್ಪನೋಡದೆ ಒಪ್ಪುಗೊಳ್ಳಯ್ಯಾ ಕಾಮಭೀಮ ಜೀವದನದೊಡೆಯ ನೀನೇ ಬಲ್ಲೆ.

೬. ಎನ್ನಯ್ಯಾ ನಿಮ್ಮ ನರಸುತ್ತಲಿದ್ದೇನೆ. ಎನ್ನಯ್ಯಾ ಕೂಡಲಸಂಗಮದೇವಾ ಭ್ರಮರಿನ ಲೇಸಿನಂತೆ ಕಾರುಣ್ಯವ ಮಾಡು. ತಪ್ಪೆನ್ನದು, ಶಿವಧೋ, ಶಿವಧೋ. ಅಯ್ಯಾ ಕರ್ಮದಾಗರವ ಹೊಕ್ಕು, ವಿಷಯದ ಬಲೆಯಲ್ಲಿ ಸಿಲುಕಿದೆನಯ್ಯಾ. ದೇಹಮೋಹವೆಂಬ ಮಹಾದುಃಖಕ್ಕೀಡಾಗಿ, ಅಯ್ಯಾ, ಸಾಯುತ್ತಿದ್ದೇನೆ, ಬೇವುತ್ತಿದ್ದೇನೆ. ಅಯ್ಯಾ ತಪ್ಪೆನ್ನದು. ಈ ಮೊರೆಯ ವಿಚಾರಿಸಿ, ಕಾರುಣ್ಯವ ಮಾಡು. ಅಯ್ಯಾ ಆಳಿನಪಮಾನ ಆಳ್ದಂಗೆಂಬಂತೆ, ಅಯ್ಯಾ ಎನ್ನಳಲು ತಪ್ಪದು ಎನಗೆ. ಅಯ್ಯಾ ಕಾರುಣ್ಯವ ಮಾಡು, ಕಾರುಣ್ಯವ ಮಾಡು ಕೂಡಲಸಂಗಮದೇವಾ.

೭. ತ್ರಿವಿಧ ತ್ರಿವಿಧದಲ್ಲಿ ತಪ್ಪಿದ ತಪ್ಪುಕ ನಾನಯ್ಯಾ. ಒಮ್ಮೆಗೆ ಕರುಣಿಸಯ್ಯಾ. ಇದನರಿದು ಇನ್ನು ತಪ್ಪಿದೆನಾದರೆ, ನೀವು ಮಾಡಿದ್ದೇ ಸಲುವುದು ಕೂಡಲಸಂಗಮದೇವಾ.

೮. ಎನ್ನೊಳಗೆ ನೀವು ಹುಡುಕಿದರೆ ಎಳ್ಳನಿತು ಸುಗುಣವಿಲ್ಲಯ್ಯಾ. ಅಣುಮಾತ್ರ ಸುಲಕ್ಷಣವಿಲ್ಲಯ್ಯಾ. ಸಪ್ತಸಮುದ್ರ ಸಪ್ತದ್ವೀಪಗಳಷ್ಟು ಅಪರಾಧ ಉಂಟಯ್ಯಾ, ತಂದೆ. ಎನ್ನ ಅಪರಾಧವ ನೋಡದೆ ನಿಮ್ಮ ಕರುಣ ದೃಕ್ಕಿಂದ ಸಲಹಯ್ಯಾ. ಪರಮಾರಾಧ್ಯ ಪರಾತ್ಪರ ಮೂರ್ತಿ

ಶ್ರೀಗುರುಲಿಂಗ ಜಂಗಮವೇ ನೀವು ಈರೇಳು ಲೋಕಕ್ಕೆ ಅಪರಾಧ ಕ್ಷಮಿತ್ರರೆಂಬ ಬಿರುದುಂಟು ನೋಡಾ ಹರಹರಾ.

೯. ಎನ್ನೊಳಗೆ ನೋಡಿದರೆ ಎಳ್ಳನಿತು ಹುರುಡಿಲ್ಲವಯ್ಯಾ ದೇವಾ. ಹೊನ್ನು, ಹೆಣ್ಣು, ಮಣ್ಣು ನನ್ನದು, ಪುತ್ರ, ಮಿತ್ರ, ಕಳತ್ರಾದಿಗಳು ನನ್ನವು, ಧನ ಧಾನ್ಯ, ಆನೆ, ಕುದುರೆ, ಎತ್ತು, ತೊತ್ತು ಮಂದಿ ಮಕ್ಕಳು ಅಷ್ಟೈಶ್ವರ್ಯದಲ್ಲಿ ನಾ ಬಲ್ಲಿದನೆಂದು ಬಲು ಹಮ್ಮಿನಿಂದ ಗುರುಹಿರಿಯರ ಕಂಡರೆ ತಲೆವಾಗದಯ್ಯಾ ಎನ್ನ ಚಿತ್ತವು. ಇಂಥ ಚಿತ್ತದಿಂದೆ ನುಗ್ಗು ನುರಿಯಾದೆನಯ್ಯಾ. ನಿಃಕಳಂಕ ಮೂರ್ತಿ ಸಚ್ಚಿದಾನಂದ ಎನ್ನಪರಾಧವ ನೋಡದೆ ಕಾಯಯ್ಯಾ. ಕರುಣಾಂಬುನಿಧಿ ಅನಾದಿ ಶ್ರೀಗುರುಲಿಂಗ ಜಂಗಮವೇ.

೧೦. ನೀವೇ ಸಕಲಲೋಕ ಸೃಷ್ಟಿಕರ್ತಾರರನೆಂದು ಹೇಳಿತ್ತಯ್ಯಾ ವೇದ, ಶಾಸ್ತ್ರಾಗಮ, ಶೃತಿಗಳು. ನೀವೇ ಸರ್ವಲೋಕಾಧಾರ ಮೂರ್ತಿ ಎಂದು ಹೇಳಿದವಯ್ಯಾ ಸಮಸ್ತ ಪುರಾಣ ಉಪನಿಷತ್ತುಗಳು. ನೀವೇ ಸರ್ವ ಚೈತನ್ಯವೆಂದು ಹೇಳಿದವಯ್ಯಾ ತರ್ಕ ವ್ಯಾಕರಣಗಳು. ನೀವೇ ನಿಜಮೋಕ್ಷಮಂದಿರವೆಂದು ಹೇಳಿದವಯ್ಯಾ ಪ್ರಮಥಗಣಂಗಳೆರಡೆಂಭತ್ತುಕೋಟಿ ವಚನಂಗಳು. ನೀವೇ ಚಿದೈಶ್ವರ್ಯ ಚಿದಾಭರಣ ಚಿದ್ಬ್ರಹ್ಮವೆಂದು ಸೂಚಿಸಿದವಯ್ಯಾ ಪರಮ ಬೋಧಾಮೃತಗಳು. ದೇವಾ ಎನ್ನಪರಾಧವೆಂಬ ಅಜ್ಞಾನಕ್ಕೆ ನೀವೇ ಜ್ಞಾನ ಚಕ್ಷುವಯ್ಯಾ ಶ್ರೀಗುರು ಲಿಂಗಜಂಗಮವೇ.

# ಶುದ್ಧ ಮನಸುಳ್ಳವನಾಗಿರು.

## ಭಾಗ ೨

೧. ಅಂತರಂಗ ಶುದ್ಧವಿಲ್ಲದವರೊಳಗು ಅತ್ತಿಯ ಹಣ್ಣಿನಂತೆ ಕ್ಷುದ್ರ ಬಿಡದು ನೋಡಯ್ಯಾ. ಅಂತರಂಗ ಶುದ್ಧವುಳ್ಳವರೊಳಗೆ ಬಾಳೆಯ ಹಣ್ಣಿನಂತೆ ಸುಗುಣ ತೋರುವದು ನೋಡಯ್ಯಾ. ಇದು ಕಾರಣ ಅಂತರಂಗ ಶುದ್ಧವಿಲ್ಲದವರ ಸಂಗವಲ್ಲಿ ಇರಬಾರದು ಶರಣರು ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ.

೨. ಲೋಕದ ಚೇಷ್ಟೆಗೆ ರವಿ ಬೀಜವಾದಂತೆ, ಕರಣಂಗಳ ಚೇಷ್ಟೆಗೆ ಮನವೇ ಬೀಜ. ಎನಗುಳ್ಳುದೊಂದು ಮನ, ಆ ಮನ ನಿಮ್ಮಲ್ಲಿ ಸಿಲ್ಕಿದ ಬಳಿಕ, ಎನಗೆ ಭವವುಂಟೇ ಚನ್ನಮಲ್ಲಿಕಾರ್ಜುನಾ?

೩. ಅಂತರಂಗ ಶುದ್ಧವಿಲ್ಲದವರು ಬಹಿರಂಗದಲ್ಲಿ ಸದಾಚಾರ ಸತ್ಕ್ರಿಯೆಯ ಸರ್ವಜನ ಮೆಚ್ಚು ಮಾಡುತ್ತಿದ್ದರೇನು? ಅದು ಲೋಕದ ರಂಜನೆಯಲ್ಲದೆ ಶಿವ ಮೆಚ್ಚ, ಶಿವಶರಣರು ಮೆಚ್ಚರು. ಬಿತ್ತಿದ ಬೆಳೆಯನುಂಬಂತೆ, ಮಾಡಿದ ಕರ್ಮ ಫಲವನುಂಬ ಕೈಕೂಲಿಕಾರಂಗೆ ಮುಕ್ತಿಯುಂಟೇ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ?

೪. ಅನ್ನವನಿಕ್ಕಿದರೇನು? ಪುಣ್ಯವಹುದು. ವಸ್ತ್ರವ ಕೊಟ್ಟರೇನು? ಪುಣ್ಯವಹುದು. ಹಣವ ಕೊಟ್ಟರೇನು? ಸಿರಿಯಹುದು. ತ್ರಿಕರಣ ಶುದ್ಧವಾದರೆ, ಮುಕ್ತಿಯಹುದು, ಕೂಡಲಚನ್ನಸಂಗಮದೇವಯ್ಯಾ.

೫. ಚೇಳಿಂಗೆ ಬಸುರಾದದ್ದೇ ಕಡೆ, ಬಾಳಿಗೆ ಫಲವಾದದ್ದೇ ಕಡೆ, ನೋಡಾ. ರಣರಂಗದಲ್ಲಿ ಓಲೆಕಾರಂಗೆ ಓಸರಿಸಿದ್ದೇ ಕಡೆ. ಮಾಡುವ ಭಕ್ತಂಗೆ, ಮನ ಹೀನವಾದರೆ, ಅದೇ ಕಡೆ ಕೂಡಲಸಂಗಮದೇವಾ.

೬. ವಚನದ ಹುಸಿ ನುಸುಳೆಂತು ಮಾಬುದೆನ್ನ? ಮನದ ಮರ್ಕಟತನವೆಂತು ಮಾಬುದೆನ್ನ? ಹೃದಯ ಕಲ್ಮಷವೆಂತು ಮಾಬುದೆನ್ನ? ಕಾಯವಿಕಾರಕ್ಕೆ ತೋರಿ ಸಲುವಾದೆನು. ಎನಗಿದು ವಿಧಿಯೇ ಕೂಡಲಸಂಗಮದೇವಾ?

೭. ಕೊಂಬೆಯ ಮೇಲಣ ಮರ್ಕಟನಂತೆ ಲಂಘಿಸುವದು ಎನ್ನ ಮನವು. ನಿಂದಲ್ಲಿ ನಿಲ್ಲಲೀಯದೆನ್ನ ಮನವು. ಹೊಂದಿದಲ್ಲಿ ಹೊಂದಲೀಯದೆನ್ನ ಮನವು. ಕೂಡಲಸಂಗಮದೇವಾ, ನಿಮ್ಮ ಚರಣ ಕಮಲದಲ್ಲಿ ಭ್ರಮರನಾಗಿರಿಸು ನಿಮ್ಮ ಧರ್ಮ.

೮. ಅಂದಣವನೇರಿದ ಸೊಣಗನಂತೆ, ಕಂಡಡೆ ಬಿಡದು ತನ್ನ ಮುನ್ನಿನ ಸ್ವಭಾವವನು. ಸುಡು ಸುಡು ಮನವಿದು ವಿಷಯಕ್ಕೆ ಹರಿವುದು. ವ್ಯಥ, ನಿಮ್ಮನನುದಿನ ನೆನೆಯಲೀಯದು. ಎನ್ನೊಡೆಯ ಕೂಡಲಸಂಗಮದೇವಾ, ನಿಮ್ಮ ಚರಣವ ನೆನೆವಂತೆ ಕರುಣಿಸು, ಸೆರಗೊಡ್ಡಿ ಬೇಡುವೆ, ನಿಮ್ಮ ಧರ್ಮ.

೯. ತುಪ್ಪದ ಸವಿಗೆ ಅಲಗ ನೆಕ್ಕುವ ಸೊಣಗನಂತೆ ಎನ್ನ ಬಾಳುವೆ. ಸಂಸಾರಸಂಗ ಬಿಡದು. ನೋಡೆನ್ನ ಮನವು. ಈ ನಾಯಿತನವ ಮಾಣಿಸು, ಕೂಡಲಸಂಗಮದೇವಯ್ಯಾ, ನಿಮ್ಮ ಧರ್ಮ.

೧೦. ಕೋಟ್ಯಾನು ಕೋಟಿ ಜಪವನ್ನು ಮಾಡಿ, ಕೋಟಲೆಗೊಳಲೇಕೆ ಮನವೇ? ಕಿಂಚಿದ್ಗೀತವನಂತ ಕೋಟಿ ಜಪ. ಜಪವೆಂಬುದೇಕೆ ಮನವೇ? ಕೂಡಲಸಂಗನ ಶರಣರ ಕಂಡು ಆಡಿ ಹಾಡಿ ಬದುಕು ಮನವೇ.

೧೧. ಸುರರ ಬೇಡಿದರಿಲ್ಲ. ನರರ ಬೇಡಿದರಿಲ್ಲ. ಬರಿದೆ ಧೃತಿಗೆಡಬೇಡ ಮನವೇ. ಆರನಾದಡೆಯೂ ಬೇಡಿ ಬೇಡಿ, ಬರಿದೆ ಧೃತಿಗೆಡಬೇಡ, ಮನವೇ. ಕೂಡಲಸಂಗಮದೇವನಲ್ಲದೆ, ಆರ ಬೇಡಿದರಿಲ್ಲ ಮನವೇ.

೧೨. ಬೆಲ್ಲವ ತಿಂದ ಕೋಡಗನಂತೆ, ಸಿಹಿಯ ನೆನೆಯದಿರಾ ಮನವೇ. ಕಬ್ಬ ತಿಂದ ನರಿಯಂತೆ ಹಿಂದನೆಣಿಸದಿರಾ ಮನವೇ. ಗಗನ ವನಡರಿದ ಕಾಗೆಯಂತೆ ದೆಸೆದೆಸೆಗೆ ಹಂಬಲಿಸದಿರಾ ಮನವೇ. ಕೂಡಲಸಂಗನ ಶರಣರ ಕಂಡು, ಲಿಂಗವೆಂದು ನಂಬು ಕಂಡೆಯಾ ಮನವೇ.

೧೩. ನನ್ನ ಚಿತ್ತವು ಅತ್ತಿಯ ಹಣ್ಣು ನೋಡಯ್ಯಾ. ವಿಚಾರಿಸಿ ನರೆ, ಏನೂ ಹುರುಳಿಲ್ಲವಯ್ಯಾ. ಪ್ರಪಂಚಿನ ಡಂಭಿಸಲ್ಲಿ ಎನ್ನನೊಂದು ರೂಪವ ಮಾಡಿ, ಸೀವರಿಸಿದಿರಯ್ಯಾ ಕೂಡಲಸಂಗಮದೇವಾ.

೧೪. ಮರನನೇರಿದ ಮರ್ಕಟನಂತೆ, ಹಲವು ಕೊಂಬೆಗೆ ಹಾಯುತಲಿದ್ದೇನೆ. ಬೆಂದ ಮನವ ನಾನೆಂತು ನಂಬುವೆನಯ್ಯಾ? ಎಂತು ನೆಚ್ಚುವೆನಯ್ಯಾ? ಎನ್ನ ತಂದೆ ಕೂಡಲಸಂಗಮದೇವನಲ್ಲಿಗೆ ಹೋಗಲೀಯದಯ್ಯಾ.

೧೫. ದಂದುಗ ಬಿಡದು ಮನ ಸಂದೇಹ ಹಿಂಗದಾಗಿ. ಮುನ್ನ ಲಿಂಗವ ಕಂಡಿಹೆನೆಂದಡೆ, ಹುಸಿ ನೋಡಾ. ಬೆಂದ ಕರಣಾದಿಗಳು ಒಂದು ಪಥವನರಿಯವು. ಎಂತು ಶಿವಪಥವೆನಗೆ ಸಾಧ್ಯವಪ್ಪುದಯ್ಯಾ? ಎನ್ನ ತಂದೆ ಕೂಡಲಸಂಗಮದೇವಾ ನಿಮ್ಮ ಶರಣರ ಬಳಿವಿಡಿದರೆ, ಎನ್ನ ದಂದುಗ ಹಿಂಗುವದು.

೧೬. ತನ್ನಿಚ್ಛೆಯ ನುಡಿದರೆ, ಮೆಚ್ಚುವದೀ ಮನವು. ಇದಿರಿಚ್ಛೆಯ ನುಡಿದರೆ, ಮೆಚ್ಚದೀ ಮನವು. ಕೂಡಲಸಂಗನ ಶರಣರ ನೆಚ್ಚದ ಮೆಚ್ಚದ ಮನವ ಕಿಚ್ಚಿನೊಳಗಿಕ್ಕು.

೧೭. ವಚನದ ಹುಸಿ ನುಸುಳೆಂತು ಮಾಬುದೆನ್ನ? ಮನದ ಮರ್ಕಟತನವೆಂತು ಮಾಬುದೆನ್ನ? ಹೃದಯ ಕಲ್ಮಷವೆಂತು ಮಾಬುದೆನ್ನ? ಕಾಯ ವಿಕಾರಕ್ಕೆ ತೋರಿ ಸಲುವಾದೆನು. ಎನಗಿದು ವಿಧಿಯೇ ಕೂಡಲಸಂಗಮದೇವಾ?

೧೮. ತನ್ನ ಜನ್ಮಾಂತರದ ಮಹಾ ದುಃಖವನೆಣಿಸಿಕೊಂಡು, ಒಂದು ವೇಳೆ ಮಹಾ ತತ್ವಜ್ಞಾನಾನಂದ ನಿಜ ಜ್ಞಾನಿಯಾಗುವದಯ್ಯಾ. ಮತ್ತೊಂದು ವೇಳೆ ಮಲತ್ರಯ ಪಾಶಬದ್ಧನಾಗಿ ಮಹಾ ಭ್ರಷ್ಟತನದಿಂದೆ ಚರಿಸುವದಯ್ಯಾ. ಒಂದು ವೇಳೆ ಪರಮವಿರಕ್ತಿಯ ಹೇಳುವದಯ್ಯಾ. ಒಂದು ವೇಳೆ ಭ್ರಷ್ಟತನದಿಂದೆ ಚರಿಸುವದಯ್ಯಾ. ಒಂದು ವೇಳೆ ಪುರಾಣ ವೈರಾಗ್ಯದಿಂದ ಮಹಾ ತ್ಯಾಗಿಯಾಗುವದಯ್ಯಾ. ಮಹಾ ಲೋಭತ್ವದಿಂದೆ ಭವಪಾಶದಲ್ಲಿ ಬಿದ್ದು ತೊಳಲುವದಯ್ಯಾ. ಇಂಥ ಜಡಜೀವ ಮನದ ಸಂಗವ ತೊಲಗಿಸಿ ರಕ್ಷಿಸಯ್ಯಾ, ಎನ್ನ ಸೂತ್ರಧಾರಿ ಸಚ್ಚಿದಾನಂದ ಸಕಲಾಗಮಂಗಳ ಮೂರ್ತಿ ಮೋಕ್ಷ ಪ್ರದಾಯಕ ಶ್ರೀಗುರುಲಿಂಗಜಂಗಮವೇ.

---

## ಪರಮಾತ್ಮನ ಕಾರುಣ್ಯ.

### ಭಾಗ ೧

೧. ಮೇರು ಗುಣವನರಸುವದೇ ಕಾಗೆಯಲ್ಲಿ? ಪರುಷ ಗುಣವನರಸುವದೇ ಕಬ್ಬುನದಲ್ಲಿ? ಸಾಧು ಗುಣವನರಸುವನೇ ಅವಗುಣಿಯಲ್ಲಿ? ಚಂದನ ಗುಣವನರಸುವದೇ ತರುಗಳಲ್ಲಿ? ಸರ್ವಗುಣ ಸಂಪನ್ನ ಲಿಂಗವೇ ನೀನೆನ್ನಲ್ಲಿ ಅವಗುಣವನರಸುವದೇ ಕೂಡಲಸಂಗಮದೇವಾ?

೨. ಅಡವಿಯಲ್ಲಿರ್ದ ಗೋವು ಮನೆಯಲ್ಲಿರ್ದ ಕರುವಿಗೆ ಚಿಂತಿಸಿ, ಬಂದ ಹಾಲ ನೀಡಿ, ಮೋಹವ ಮಾಡುವದಲ್ಲದೆ, ಆ ಕರುವೆತ್ತ ಬಲ್ಲುದಯ್ಯಾ? ನಾನು ಕರ್ಮದೇಹವಿಡಿದು ಪರಿಭವದಲ್ಲಿ ತೊಳಲುತ್ತಿರಲು, ನೀನು ದಯಹುಟ್ಟಿ ಎನ್ನ ಮರವೆಯ ಸಂಸಾರವಂ ತೊಲಗಿಸಿ, ಕರುಣದಿಂದ ಸಲಹಬೇಕೆಂಬ ಚಿಂತೆ ನಿನಗಲ್ಲದೆ ನಾನೇನ ಬಲ್ಲೆನಯ್ಯಾ ಅಖಂಡೇಶ್ವರಾ?

೩. ಹಾವು, ಕಿಚ್ಚು, ಮುಟ್ಟಿಹ ಶಿಶುವೆಂದು, ಹೆತ್ತ ತಾಯಿ ಮಗನ ಬೆಂಬತ್ತಿ ಬಪ್ಪಂತೆ ಇಪ್ಪೆ, ಎನ್ನೊಡನೊಡನೆ ಕೂಡಲಸಂಗಮದೇವ ಕಾಯ್ದುಕೊಂಡಿಪ್ಪನಾಗಿ.

೪. ಚಂದ್ರೋದಯಕ್ಕೆ ಅಂಬುಧಿ ಹೆಚ್ಚುವದಯ್ಯಾ. ಚಂದ್ರ ಕುಂದೆ ಕುಂದುವದಯ್ಯಾ. ಚಂದ್ರಂಗೆ ರಾಹು ಅಡ್ಡ ಬಂದಲ್ಲಿ, ಅಂಬುಧಿ ಬೊಬ್ಬಿಟ್ಟೀತೇ? ಅಂಬುಧಿಯ ಮುನಿಯು ಆಪ್ರೋಷಣವ ಮಾಡಿಕೊಂಬಲ್ಲಿ, ಚಂದ್ರಮನಡ್ಡ ಬಂದನೆ? ಆರಿಗಾರು ಮಿಲ್ಲ. ಕೆಟ್ಟವಂಗೆ ಕೆಳೆ ಇಲ್ಲ. ಜಗದನಂಟ ನೀನೇ ದೇವಾ ಕೂಡಲಸಂಗಮ ಪ್ರಭುವೇ.

೫. ಒಲೆ ಹತ್ತಿ ಉರಿದರೆ ನಿಲಬಹುದಲ್ಲದೆ, ಧರೆ ಹತ್ತಿ ಉರಿದರೆ ನಿಲಬಾರದು. ಏರಿ ನೀರುಂಬರೆ, ಬೇಲಿ ಕೆಯ್ಯ ಮೇವರೆ, ನಾರಿ ತನ್ನಯ ಮನೆಯಲ್ಲಿ ಕಳವರೆ, ತಾಯಿ ಮೊಲೆವಾಲು ನಂಜಾಗಿ ಕೊಲುವರೆ, ಇನ್ನಾರಿಗೆ ದೂರುವೆನಯ್ಯಾ ಕೂಡಲಸಂಗಮದೇವಾ?

೬. ಅಯ್ಯಾ ಎಳೆಗರು ತಾಯನರಸಿ ಬಳಲುವಂತೆ, ಅಯ್ಯಾ ನಾ ನಿಮ್ಮನರಸಿ ಬಳಲುತ್ತಿದ್ದೇನೆ. ಅಯ್ಯಾ, ನೀವೆನ್ನ ಮನಕ್ಕೆ ಪ್ರಸನ್ನವ ಮಾಡಿ, ಕಾರುಣ್ಯವ ಮಾಡಿರಯ್ಯಾ. ನೀವೆನ್ನ ಮನಕ್ಕೆ ನೆಲೆವನೆಯಾಗಿ ಕಾರುಣ್ಯವ ಮಾಡು. ನೀನಿನಿತು ಲೇಸನೀಯಯ್ಯಾ. ಎಂಬೇಂ ಎಂಬೇಂ ಕೂಡಲಸಂಗಮದೇವಾ.

೭. ಏಕೆನ್ನಬಾರದ ಭವಂಗಳಲ್ಲಿ ಬರಿಸಿದೆ? ಏಕೆನ್ನ ಘೋರ ಸಂಸಾರದಲ್ಲಿರಿಸಿದೆ? ಏಕೆನ್ನ ಕರುಣಿಸಲೊಲ್ಲದೆ, ಕಾಡಿಹೆ ಹೇಳಾ, ಹೇಳಾ ಎನ್ನ ಲಿಂಗವೇ? ನಾಮಾಡಿದ ತಪ್ಪೇನು? ಸಾಕಲಾದುದೆಂದು ಅತ್ತೊತ್ತಿ ನುಡಿದರೆ, ನಾ ನಿಮ್ಮ ಬಿಡುವೆನೇ ಶಂಭು ಜಕ್ಕೇಶ್ವರಾ?

೮. ಮುನಿದೆಯಾದಡೆ, ಒಮ್ಮೆ ಜರಿದಡೆ ಸಾಲದೆ? ಅಕಟಕಟಾ ಮದನಂಗೆ ಮಾರುಗುಡುವರೆ? ಹಗೆಗೆ ಮಾರುಗೊಟ್ಟು, ನಿನ್ನವರನೊಪ್ಪಿಸುವರೇ ಕೂಡಲಸಂಗಮದೇವಾ?

೯. ಅಕಟಕಟಾ, ಶಿವ ನಿನಗಿನಿತು ಕರುಣವಿಲ್ಲ. ಅಕಟಕಟಾ ಶಿವ ನಿನಿಗಿನಿತು ಕೃಪೆ ಇಲ್ಲ. ಯಾಕೆ ಹುಟ್ಟಿಸಿದೆ? ಕೂಡಲಸಂಗಮದೇವಾ ಕೇಳಯ್ಯ, ಎನಗೆ ಮತ್ತೊಂದು ತರುಮರಾದಿಗಳಿದ್ದಿಲ್ಲವೇ?

೧೦. ನರಕೂರಂಬಿನಲ್ಲಿ ಎಚ್ಚವಂಗೊಲಿದೆಯಯ್ಯ. ಅರಳಂಬಿನಲ್ಲಿ ಎಚ್ಚ ಕಾಮನನುರುಪಿದೆ. ಇರುಳು ಹಗಲೆನ್ನದೆ, ಪ್ರಾಣಘಾತಕವ ಮಾಡಿದ ಬೇಡನ ಕೈಲಾಸಕ್ಕೊಯ್ದೆಯಯ್ಯ. ಎನ್ನನೇತಕ್ಕೊಲ್ಲೆ ಕೂಡಲಸಂಗಮದೇವ?

೧೧. ಕಾಳಿದಾಸಂಗೆ ಕಣ್ಣನಿತ್ತೆ. ವಹಿಲಯ್ಯನ ನಿಜಪುರಕೊಯ್ದೆ. ನಂಬಿ ಕರೆದಡೆ, "ಓ" ಎಂದೆ. ತೆಲಗು ಜೊಮ್ಮಯ್ಯಂಗೆ ಒಲಿದೆ. ದೇವಾ ಕೂಡಲಸಂಗಮದೇವ ಎನ್ನನೇತಕ್ಕೊಲ್ಲಿರಯ್ಯ?

೧೨. ನೀನೊಲಿದರೆ ಕೊರಡು ಕೊನರುವದಯ್ಯ. ನೀನೊಲಿದರೆ ಬರಡು ಹಯನಹುದಯ್ಯ. ನೀನೊಲಿದರೆ ವಿಷವೆಲ್ಲ ಅಮೃತವಹುದಯ್ಯ. ನೀನೊಲಿದರೆ ಸಕಲ ಪದಾರ್ಥ ಇದಿರಲ್ಲಿಪ್ಪವು ಕೂಡಲಸಂಗಮದೇವಾ.

# ಪರಮಾತ್ಮನಿಗೆ ಶರಣ ಹೊಗು.

೧. ಹೊಲಬುಗೊಂಡು ಅರಸಬೇಡ. ಬರಿದು ತೆರಬೇಡ. ಒಲಿದರೊಮ್ಮೆ ಶಿವಶರಣೆನ್ನಿರಯ್ಯಾ. ಒಂದು ಸೊಲ್ಲಿಂಗೆ ಮುಕ್ತಿಸಿದ್ಧಿ. ಕೂಡಲಸಂಗಮದೇವ ಭಕ್ತಿಲಂಪಟನಾಗಿ.

೨. ತನ್ನನರಿಸಿ ಬಪ್ಪವರ ತಾನರಸಿ ಬಪ್ಪ ನೋಡಾ! ಎನ್ನ ದೇವ ಎಲ್ಲಿರ್ದ್ದನಲ್ಲಿಗೆ ಹೋಗಿ ಬಾರಾ ಎಂದು ಮನವೊಳಗೆ ಅಚ್ಚೊತ್ತಿಕೊಂಬೆನು ಎನ್ನ ಕಪಿಲಸಿದ್ಧ ಮಲ್ಲಿಕಾರ್ಜುನಾ.

೩. ವೇದಪ್ರಿಯನಲ್ಲಯ್ಯಾ ನೀನು. ಮುಕ್ತಿಪ್ರಿಯನಲ್ಲಯ್ಯಾ ನೀನು. ಕ್ರಿಪ್ರಿಯನಲ್ಲಯ್ಯಾ ನೀನು. ನೀನು ಇವೆಲ್ಲಕ್ಕೆ ಅಸಾಧ್ಯ ಕಂಡಯ್ಯಾ. ನೀನು ಭಕ್ತಿಪ್ರಿಯನೆಂದು ಮರೆಹೊಕ್ಕೆ, ಕಾಯಯ್ಯ, ನೀನು ಕಪಿಲಸಿದ್ಧ ಮಲ್ಲಿಕಾರ್ಜುನಾ.

೪. ಎನ್ನಯೋಗ ಕ್ಷೇಮ ನಿಮ್ಮದಯ್ಯಾ. ಎನ್ನ ಹಾನಿ ವೃದ್ಧಿ ನಿಮ್ಮದಯ್ಯ? ಎನ್ನ ಮಾನಾಪಮಾನ ನಿಮ್ಮದಯ್ಯಾ. ಬಳ್ಳಿಗೆ ಕಾಯಿ ದಿಮ್ಮಿತ್ತೇ ಕೂಡಲಸಂಗಮದೇವಾ?

೫. ಅಂಗದ ನೋಟವು ಸಿಂಗರದ ಗಾತ್ರವು ಹಿಂಗದು ಮನದಲ್ಲಿ. ನಾನಾ ವಿಕಾರದಿ ಬೆಂದಿಹೆನೆಂದು ಅರಿಯಲಿಲ್ಲಾಗಿ, ಸಂದೇಹ ಬಿಡದು. ಮುಂದುಗಾಣದು ಲೋಕ. ಬೆಂದ ಮಾಯಕ್ಕಂಜಿ, ನಿಮ್ಮ ಮರೆಹೊಕ್ಕೆ ಕೂಡಲಸಂಗಮದೇವಾ.

೬. ವಿಕಳನಾದೆನು ಪಂಚೇಂದ್ರಿಯ ಧಾತುವಿನಿಂದ. ಮತಿಗೆಟ್ಟೆನು ಮನದ ವಿಕಾರದಿಂದ. ಧೃತಿಗೆಟ್ಟೆನು ಧನದ ವಿಕಾರದಿಂದ. ಗತಿಗೆಟ್ಟೆನು ಕಾಯವಿಕಾರದಿಂದ. ಶರಣು ಹೊಕ್ಕೆನು ಕೂಡಲಸಂಗಮದೇವಯ್ಯಾ.

೭. ಆಳಿಗೊಂಡಿಹರೆಂದು ಅಂಜಲದೇಕೆ? ನಾಸ್ತಿಕವ ಮಾಡಿಹರೆಂದು ನಾಚುವದೇಕೆ? ಆರಾದಡಾಗಲಿ, ಶ್ರೀಮಹಾದೇವಂಗೆ ಶರ

ದೇವ ಚೆನ್ನಮಲ್ಲಿಕಾರ್ಜುನಯ್ಯ ಎನ್ನ ಸುತ್ತಿದ ಮಾಯಾ ಪ್ರಪಂಚವ ಬಿಡಿಸಾ ನಿಮ್ಮ ಧರ್ಮ.

೭. ಸ್ಥಲಂಗಳನರಿದಿಹೆನೆಂದಡೆ, ತ್ರಿವಿಧ ಸ್ಥಲವೆನಗಿಲ್ಲ. ಷಟ್ಸ್ಥಲವ ಮುನ್ನವೇ ಅರಿಯೆ. ತತ್ವವನರಿದಿಹೆನೆಂದಡೆ, ಇಪ್ಪತ್ತೈದರ ಗೊತ್ತಿನವ ನಾನಲ್ಲ. ಏಕಸ್ವಾದ ಸತ್ಕ್ರಿಯೆಯನರಿದಿಹೆನೆಂದಡೆ, ಭಕ್ತಿ ಜ್ಞಾನ ವೈರಾಗ್ಯ ತ್ರಿವಿಧ ಲಕ್ಷಣವಿದ ನಾನಲ್ಲ. ನಿಷ್ಠೆಯಲ್ಲಿ ದೃಷ್ಟವ ಕಂಡಿಹೆನೆಂದಡೆ, ವಿಶ್ವಾಸವೆನಗಿಲ್ಲ. ವಿರಕ್ತಿಯಲ್ಲಿ ಭೇದಿಸಿಹೆನೆಂದಡೆ. ತ್ರಿವಿಧ ಮಲದ ಮೊತ್ತದೊಳಗೆ ಮತ್ತನಾಗಿದ್ದೇನೆ. ಮತ್ತೆ ನಿಶ್ಚಯವನರಿದಿಹೆನೆಂದಡೆ, ಆತ್ಮಂಗೆ ಲಕ್ಷವಿಪ್ಪುದೊಂದು ಗೊತ್ತು ಕಾಣೆ. ಇಂತೀ ಕಷ್ಟ ತನುವಿನಲ್ಲಿ ಬಂದು, ಧೂರ್ತನಾಗಿ ಕೆಟ್ಟು ಹೋಗುತ್ತಿದ್ದೇನೆ. ಗುಡಿಸಿದ ಹಿಕ್ಕೆಯಲ್ಲಿ ಬಂದು, ತನ್ನ ನಿಷ್ಠೆಯ ತೋರಿ, ಎನಗೆ ಸದ್ಭಕ್ತಿಯ ಬೀರಿ, ವಿಶ್ವಾಸಿಗಳ ಕೃತ್ಯದೊಳಗಾಗಿ, ನಿತ್ಯ ನೇಮಂಗಳಲ್ಲಿ ಅಚ್ಚೊತ್ತಿದಂತಿರು. ನೀನೇ ಮುಕ್ತನಹೆ. ಜಗಕ್ಕೆ ಕರ್ತನಹೆ. ಎನ್ನ ಹಿಕ್ಕೆಗೆ ಬಂದು ಸಿಕ್ಕಿದೆಯಲ್ಲಾ, ಮಹಾ ಮಹಿಮ ವೀರಬೀರೇಶ್ವರಲಿಂಗಾ

೮. ಎನ್ನ ಕಾಯದ ಕರಣವ ಕಳೆಯಯ್ಯಾ. ಎನ್ನ ಜೀವದು ಪಾಧಿಯ ಕಳೆಯಯ್ಯಾ. ಎನ್ನ ಪ್ರಾಣದ ಪ್ರಪಂಚವ ತೊಲಗಿಸಯ್ಯಾ. ಎನ್ನ ಭಾವದ ಭ್ರಮೆಯ ಕೆಡಿಸಯ್ಯಾ. ಎನ್ನ ಮನದ ವ್ಯಾಕುಳವ ಮಾಣಿಸಯ್ಯಾ. ಎನ್ನ ಕರಣೇಂದ್ರಿಯಂಗಳ ಕಷ್ಟ ಗುಣವ ನಷ್ಟವ ಮಾಡಯ್ಯಾ. ಎನ್ನೊಳಗೆ ನಿಮ್ಮ ಕರುಣಾಮೃತವ ತುಂಬಯ್ಯಾ ಗುರುವೇ ಅಖಂಡೇಶ್ವರಾ.

# ಪರಮಾತ್ಮನ ಕಾರುಣ್ಯ.

## ಭಾಗ ೨

೧. ದೇವರ ದೇವ ನೀನೆಂದೆನಿಸಿಕೊಂಡೆ. ಬಾಣನ ಬಾಗಿಲ ಕಾಯ್ವುದೇನಯ್ಯಾ? ನಿತ್ಯ ತೃಪ್ತ ನೀನೆನಿಸಿಕೊಂಡೆ. ಚನ್ನನ ಮನೆಯ ಉಂಬುದೇನಯ್ಯಾ? ಕರುಣಾಕರ ನೀನೆನಿಸಿಕೊಂಡೆ. ಸಿರಿಯಾಳನ ಮಗನ ಬೇಡುವದೇನಯ್ಯಾ? ನಿಮ್ಮ ಮಹಿಮೆಯ ನೀವೇ ಬಲ್ಲಿರಿ. ಎನ್ನನುದ್ಧರಿಸಯ್ಯಾ ಶಂಭುಜಕ್ಕೇಶ್ವರಾ.

೨. ಆಶೆ ಎಂಬ ಪಾಶದಲ್ಲಿ ಭವಬಂಧನನಾಗಿದ್ದೆನಯ್ಯಾ. ಸಕೃತ್ ನಿಮ್ಮ ನೆನೆಯಲು ಎನಗೆ ತೆರಹಿಲ್ಲವಯ್ಯಾ. ಕರುಣಾಕರ ಅಭಯಕರ ಕರದಾನಿ ಕರುಣಿಸಯ್ಯಾ. ಸಂಸಾರ ಬಂಧನವ ಮಾಣಿಸಿ ಎನಗೆ ಕೃಪೆ ಮಾಡಿ, ನಿಮ್ಮ ಶ್ರೀಪಾದ ಪದ್ಮದಲ್ಲಿ ಭ್ರಮರನಾಗಿರಿಸು ಭಕ್ತ ಜನ ಮನೋ ವಲ್ಲಭ ಕೂಡಲಸಂಗಮದೇವಾ.

೩. ಅಷ್ಟವಿಧಾರ್ಚನೆಯ ಮಾಡಿ ಒಲಿಸುವೆನೆ ಆಯ್ಯಾ? ನೀನು ಬಹಿರಂಗ ವ್ಯವಹಾರ ದೂರಸ್ಥನು. ಅಂತರಂಗದಲ್ಲಿ ಧ್ಯಾನ ಮಾಡಿ ಒಲಿಸುವೆನೆ ಅಯ್ಯಾ? ನೀನು ನಾದಾತೀತನು. ಭಾವಜ್ಞಾನದಿಂದ ಒಲಿಸುವೆನೆ ಅಯ್ಯಾ? ನೀನು ಮತಿಗತೀತನು. ಹೃದಯ ಕಮಲ ಮಧ್ಯದಲ್ಲಿ ಇಂಬಿಟ್ಟು ಕೊಂಬೆನೆ ಅಯ್ಯಾ? ನೀನು ಸರ್ವಾಂಗ ಪರಿಪೂರ್ಣನಯ್ಯಾ. ಒಲಿಸಲೆನ್ನಳವಲ್ಲ. ನೀನು ಒಲಿದುದೇ ಸುಖವಯ್ಯಾ ಚನ್ನಮಲ್ಲಿಕಾರ್ಜುನಯ್ಯಾ.

೪. ಇಂದಿಂಗೆಂದು ನಾಳಿಂಗೆಂದು ಬೆಂದ ಒಡಲಿಂಗೆ ಚಿಂತಿಸಿ ಭ್ರಮೆಗೊಂಡು ಬಳಲ ಬೇಡ ಮರುಳೇ. ಎಂಬತ್ತು ನಾಲ್ಕು ಲಕ್ಷಯೋನಿಯೊಳಗಾದ ಸಹಸ್ರ ಜೀವರಿಗೆ ಭೋಗವನು ಭೋಗವಿಷಯ ಜ್ಞಾನವನು ಕೊಟ್ಟು ಸಲಹುವ ದೇವನು ತನ್ನ ಸಲಹಲಾರನೇ? ಇದನರಿದಿದು ಮತ್ತೇಕೆ ಚಿಂತಿಸುವೆ ಮರುಳೇ? ಹುಟ್ಟಿಸಿದ ದೇವನು ರಕ್ಷಿಸಿದ

ಲ್ಲದೆ ಮಾಣನೆಂಬುದನರಿಯಾ? ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನು ಕರುಣಿ ಕೃಪಾಳುವೆಂಬುದನರಿಯಾ ಮರುಳೇ?

೫. ಹೆಗ್ಗಣವನಿಕ್ಕಿ ನೆಲಗಟ್ಟು ಕಟ್ಟಿದಂತೆ ಆಯಿತ್ತೆನ್ನ ಕಾಯಗುಣ. ಅಹಂಕಾರ ಪ್ರಬೋಧೆಗಳೇಕಯ್ಯ? ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಂಗಳನಿಕ್ಕಿ ಎನ್ನ ಮಾಡಿದಿರಿ. ಎನ್ನ ಬಾಧಿಸಲೆಂತು ಲಿಂಗಯ್ಯ ತಂದೆ? ಆಧಿ ವ್ಯಾಧಿಗಳೆಲ್ಲವ ಕಳೆದು ನಿರ್ವಾಣವಪ್ಪ ಪದವ ಕರುಣಿಸಯ್ಯ ಕೂಡಲಸಂಗಮದೇವಾ.

೬. ಒಂದು ಯೋನಿಯಲ್ಲಿ ಬಂದ ದುಃಖವ ಎಂದೆಂದಿಗೂ ಕಳೆಯಲಾರೆ. ಇನ್ನು ಎಂಬತ್ತು ನಾಲ್ಕು ಲಕ್ಷನೆಂದರೆ ನಾನಿನ್ನೇವೆನಯ್ಯ? ಒಂದುವನರಿಯದ ಶಿಶು ನಾ ನೊಂದೆನಯ್ಯ. ಎನ್ನ ಕಂದ ಬಾರೆಂದು ಕಂಬನಿಯ ತೊಡೆದೆತ್ತಿ ಆನಂದದಿಂದ ಕಪ್ಪರೆವೆಯ ಮಾಡು ಉಳಿಯು ಮಹೇಶ್ವರಾ.

೭. ಅಯ್ಯಾ ನೀ ಮಾಡಲಾದ ಜಗತ್ತು, ಅಯ್ಯಾ ನೀ ಮಾಡಲಾದ ಸಂಸಾರ, ಅಯ್ಯಾ ನೀ ಮಾಡಲಾದ ಮರವೆ, ಅಯ್ಯಾ ನೀ ಮಾಡಲಾದ ದುಃಖ, ಅಯ್ಯಾ ನೀ ಬಿಡಿಸಿದರೆ ಬಿಟ್ಟಿತ್ತು. ತಾಮಸವಯ್ಯ! ನಾನೀ ಮಾಯೆಯ ಗೆದ್ದೆನೆಂಬ ಹಮ್ಮಿದ್ದೇಕೆ ಕೂಡಲಸಂಗಮದೇವಾ?

೮. ಅರತುದಯ್ಯ ಅಂಗಗುಣ. ಒರೆತುದಯ್ಯ ಭಕ್ತಿರಸ. ಆವರಿಸಿತಯ್ಯ ಅಂಗ ಲಿಂಗವನು. ಏನೆಂದರಿಯೆನಯ್ಯ ಲೌಕಿಕದ ಮದವ. ಲಿಂಗ ಭ್ರಾಂತನಾದೆನಯ್ಯ. ಕೂಡಲಸಂಗಮದೇವಾ ನಿಮ್ಮ ಕರುಣವೆನ್ನನೆಡೆಗೊಂಡಿತ್ತಾಗಿ.

೯. ಉರಿಯೊಳಗಣ ಕರ್ಪೂರಕ್ಕೆ ಕರಿಯುಂಟೇ ಅಯ್ಯ? ಬಯಲಮರೀಚಿಯ ಜಲಕ್ಕೆ ಕೆಸರುಂಟೇ ಅಯ್ಯ? ವಾಯುವನಪ್ಪಿದ ಪರಿಮಳಕ್ಕೆ ನಿರ್ಮಾಲ್ಯ ಉಂಟೇ ಅಯ್ಯ? ನೀವು ನೆರೆ ಒಲಿದ ಬಳಿಕ ಎನಗೆ

ಭವ ಉಂಟೆ? ಕೂಡಲಸಂಗಮದೇವ ನಿಮ್ಮ ಚರಣ ಕಮಲದೊಳಗೆ ಎನ್ನನಿಂಬಿಟ್ಟು ಕೊಳ್ಳಯ್ಯ.

೧೦. ನೆನಿಸುವೆ, ಮರಿಸುವೆ. ಎನ್ನ ಗುಣದೋಷ ನಿಮ್ಮದು. ಕೇಳಯ್ಯ ಎನ್ನ ಬಿನ್ನಪವ. ನಿಮ್ಮ ನೆನೆವವ ನಾನಲ್ಲ ಕಂಡಯ್ಯ. ನಿಮ್ಮಿಂದ ನಿಮ್ಮನೆ ನೆನೆವೆನು. ಕೃಪೆ ಮಾಡು ಕಪಿಲಸಿದ್ಧ ಮಲ್ಲಿಕಾರ್ಜುನಾ.

---

## ಪರಮಾತ್ಮನ ಪೂಜೆ.

೧. ನೀರಲ್ಲಿ ಪುಟ್ಟಿದ ಗುಳ್ಳೆಗೆ ಕಬ್ಬುನದ ಕಟ್ಟು ಕೊಟ್ಟು, ಸುರಕ್ಷಿತವ ಮಾಡುವ ಭರವ ನೋಡಾ! ಮಹಾದಾನಿ ಕೂಡಲಸಂಗಯ್ಯನ ಪೂಜಿಸಿ, ಬದುಕೊ ಕಾಯುವ ನಿಶ್ಚಯಿಸದೆ.

೨. ನೆರೆ ಕೆನ್ನೆಗೆ, ತೆರೆ ಗಲ್ಲಕ್ಕೆ ಶರೀರಗೂಡು ಹೋಗದ ಮುನ್ನ ಹಲ್ಲು ಹೋಗಿ, ಬೆನ್ನು ಬಾಗಿ, ಅನ್ಯರಿಗೆ ಹಂಗಾಗದ ಮುನ್ನ, ಕಾಲ ಮೇಲೆ ಕಯ್ಯನೂರಿ, ಕೋಲ ಹಿಡಿಯದ ಮುನ್ನ, ಮುಪ್ಪಿಂದೊಪ್ಪ ವಳಿಯದ ಮುನ್ನ, ಮೃತ್ಯು ಮುಟ್ಟದ ಮುನ್ನ, ಪೂಜಿಸು ಕೂಡಲ ಸಂಗಮದೇವನ.

೩. ಹೊತ್ತಾರೆ ಎದ್ದು, ಅಗವಣಿ ಪತ್ರರೆಯ ತಂದು ಹೊತ್ತು ಹೋಗದ ಮುನ್ನ ಪೂಜಿಸು ಲಿಂಗವ. ಹೊತ್ತು ಹೋದ ಬಳಿಕ ನಿನ್ನ ನಾರು ಬಲ್ಲರು? ಹೊತ್ತು ಹೋಗದ ಮುನ್ನ, ಮೃತ್ಯು ಒಯ್ಯದ ಮುನ್ನ, ತೊತ್ತುಗೆಲಸವ ಮಾಡು ಕೂಡಲಸಂಗಯ್ಯನ.

೪. ಬಿತ್ತಿದ ಬಿತ್ತು, ಪೃಥ್ವಿಯ ಕೂಡಿ, ಅಪ್ಪುವಿನ ದ್ರವದಿಂದ ಮಸ್ತಕ ಒಡೆವುದಲ್ಲದೆ, ಉಷ್ಣದ ದಾವರಕ್ಕೆ ಬೆಂಕೆಯ ಬೇಗೆಗೆ ಮಸ್ತಕ

ಒಡೆವುದುಂಟೇ? ಲಿಂಗವು ಭಕ್ತಿ ಶ್ರದ್ಧೆಗೆ ವಿಶ್ವಾಸ ಸುಸಂಗಿಗೆ ನಿಶ್ಚಯವಪ್ಪ ಲಿಂಗವು ದೃಷ್ಟವಪ್ಪುದಲ್ಲದೆ, ಉನ್ಮತ್ತರಪ್ಪ ವಿಶ್ವಾಸ ಘಾತಕಂಗೆ ವಂದಿಸಿ ನಿಂದಿಸುವಂಗೆ ಹಿಂದು ಮುಂದು ಬಂದುದ ಬಾಯ್ಗೆಡೆಯುವಂಗೆ ಎನ್ನಯ್ಯ ಪ್ರಿಯ ಇಮ್ಮಡಿ ನಿಃಕಳಂಕ ಮಲ್ಲಿಕಾರ್ಜುನನು ಸಂದಿಸನವರಿಗೆ.

೫. ಮನವೇ ಸರ್ಪ, ತನುವೇ ಹೇಳಿಗೆ, ಹಾವಿನೊಡತಣ ಹುದುವಾಳಿಗೆ. ಇನ್ನಾವಾಗ ಕೊಂದಿಹುದೆಂದರಿಯೆ. ಇನ್ನಾವಾಗ ತಿಂದಿಹುದೆಂದರಿಯೆ. ನಿಚ್ಚಕ್ಕೆ ನಿಚ್ಚ ಪೂಜಿಸ ಬಲ್ಲಡೆ, ಅದೇ ಗರುಡ, ಕೂಡಲಸಂಗಮದೇವಾ.

೬. ಈಶ್ವರನ ಮೂರ್ತಿಯ ಕರಕಮಲಕ್ಕೆ ತಂದಲ್ಲಿ ಕಣ್ಮನ ಮೂರ್ತಿ ಧ್ಯಾನದಲ್ಲಿ ಹೆರೆ ಹಿಂಗದೆ, ಅಕ್ಕರಿಂದ ಭಾವ ಭ್ರಮಿಸದೆ, ಚಿತ್ತ ಸಂಚಲಿಸದೆ, ಮನ ವಚನ ಕಾಯ ಭಿನ್ನ ಭಾವವಿಲ್ಲದೆ, ಪೂಜಿಸುವ ಕೈ ತಾನಾಗಿ, ಅರಿವ ಮನವು ತಾನಾಗಿ, ಹೊತ್ತಿಪ್ಪ ಅಂಗದ ನೆಲೆಯು ತಾನಾಗಿ, ಹೆರೆ ಹಿಂಗದ ಪೂಜೆಯ ಮಾಡುತಿಪ್ಪಾತನ ಅಂಗವೇ ಲಿಂಗ, ಆತನಿಪ್ಪುದೇ ಅವಿಮುಕ್ತ ಕ್ಷೇತ್ರ. ಇಂತಪ್ಪ ಮಹಾ ಮಹಿಮ ನಾರಾಯಣ ಪ್ರಿಯ ರಾಮನಾಥ ತಾನು ತಾನೆ.

೭. ಕುರಿಯೊಡೆಯ ಹಲವರ ನಡುವೆ ನಿಂದರೆ, ತನ್ನೊಡೆಯನ ನರಿವಂತೆ ಸಕಲೇಂದ್ರಿಯ ಬಹು ದುಃಖದಲ್ಲಿದ್ದರೂ, ತತ್ಕಾಲಕ್ಕರ್ಚನೆ ನೇಮ ಕೃತ್ಯ ತಪ್ಪದೆ ಮಾಡಬೇಕು. ಇದು ನಿಶ್ಚಯದರಿವು, ಸದಾಶಿವ ಮೂರ್ತಿ ಲಿಂಗವನರಿವುದಕ್ಕೆ ಇದೇ ಗೊತ್ತು.

೮. ಉದ್ದವ ನೇರುವದಕ್ಕೆ ಗದ್ದುಗೆ ಇಲ್ಲದೆ ಎಯ್ದಬಾರದು. ಚಿದ್ರೂಪನನರಿವುದಕ್ಕೆ ಅರ್ಚನೆ ಪೂಜನೆ ನಿತ್ಯ ನೇಮವಿಲ್ಲದೆ ಕಾಣಬಾರದು. ಅದನು ಸತ್ಯದಿಂದ ಮಾಡಿ ಅಸತ್ಯ ಮರೆದಡೆ, ಇದೇ ಸತ್ಯ ನಾಸ್ತಿ ನಾಥಾ.

೯. ಧರೆಯು ಕೃಷಿ ಶುದ್ಧವಾಗಿಯಲ್ಲದೆ, ಸಸಿ ಶುದ್ಧವಲ್ಲ. ಅರ್ಚನೆ ಅರ್ಪಿತ, ಮೂರ್ತಿ ಧ್ಯಾನದಿಂದಲ್ಲದೆ, ಶುದ್ಧವಿಲ್ಲ. ಇದು ನಿಶ್ಚಯ ಈಶಾನ್ಯ ಮೂರ್ತಿ ಮಲ್ಲಿಕಾರ್ಜುನ ಲಿಂಗವನರಿವುದಕ್ಕೆ.

೧೦. ಅಂಗವನರಿವನ್ನಕ್ಕ ಶಿವಲಿಂಗ ಪೂಜೆಯ ಮಾಡಬೇಕು. ಆತ್ಮನ ಕ್ಷುಧೆಯುಳ್ಳನ್ನಕ್ಕ ಬಂದ ಪದಾರ್ಥವ ಲಿಂಗಾರ್ಪಿತ ಮಾಡಬೇಕು. ಇದು ಅರಿವಿನ ಬಿತ್ತು, ಜ್ಞಾನದ ಗೊತ್ತು, ಸರ್ವ ಮಯದ ಯುಕ್ತಿ, ಈಶಾನ್ಯ ಮೂರ್ತಿ ಮಲ್ಲಿಕಾರ್ಜುನ ಲಿಂಗವನರಿವ ಶಕ್ತಿ.

೧೧. ಹೊತ್ತಾರೆ ಎದ್ದು ಲಿಂಗದೇವನ ದೃಷ್ಟಿಯಾರೆ, ನೋಡದವನ ಸಂಸಾರವೇನವನ, ನಡೆ ಏನವನ, ನುಡಿ ಏನವನ, ಸಂಸಾರವೇನವನ, ಬಾಳುವೆ ಏನವನ, ಬೀಗುವ ಏನವನ, ಸಂಸಾರವೇನವನ? ಕೂಡಲಸಂಗಮದೇವಾ, ನಿಮ್ಮ ಮುಟ್ಟಿ ನೋಡಿ ನೆನೆದು ಪೂಜಿಸದವನ ಬದುಕೇನವನ?

೧೨. ಕಾಯದ ಮೇಲೆ ಲಿಂಗವ ಧರಿಸಿ, ದೇವಪೂಜೆಯ ಮಾಡಿ, ಕಾಯವಳಿದು, ದೇವತಾ ಭೋಗವನೆಯ್ದುವೆಂಬ ಗಾವಿಲರ ಎನಗೊಮ್ಮೆ ತೋರದಿರಯ್ಯಾ! ಕಾಯವನು, ಜೀವವನು, ಲಿಂಗದಲ್ಲಿರಿಸಬಲ್ಲಡೆ ಮಹಾದೇವನೆಂದು ಬೇರುಂಟೇ? ಆ ಮಾಹೇಶ್ವರಂಗೆ ನಮೋನಮೋ ಎಂಬೆನು ಕಾಣಾ ಮಹಾಲಿಂಗ ಗುರು ಶಿವಸಿದ್ಧೇಶ್ವರ ಪ್ರಭುವೇ.

೧೩. ಉದಯವಾಯಿತ್ತ ಕಂಡು, ಉದರಕ್ಕೆ ಕುದಿವರಯ್ಯ! ಕತ್ತಲೆಯಾಯಿತ್ತ ಕಂಡು, ಮಜ್ಜನಕ್ಕೆರೆವರಯ್ಯ! ಲಿಂಗಕ್ಕೆ ನೇಮವಿಲ್ಲ. ಕಾಯ ಒಂದೆಸೆ, ಜೀವ ಒಂದೆಸೆ, ಗುಹೇಶ್ವರನೆಂಬ ಲಿಂಗವು ಒಂದೆಸೆ.

# ಪರಮಾತ್ಮನ ಧ್ಯಾನ.

## ಭಾಗ ೧

೧. ವಾರವೆಂದರಿಯೆ, ದಿನವೆಂದರಿಯೆ, ಏನೆಂದರಿಯೆನಯ್ಯ. ಇರುಳೆಂದರಿಯೆ, ಹಗಲೆಂದರಿಯೆ, ಏನೆಂದರಿಯೆನಯ್ಯ. ನಿಮ್ಮವ ಪೂಜಿಸಿ ಎನ್ನವ ಮರೆದೆ ಕೂಡಲಸಂಗಮದೇವಾ.

೨. ನಿಮ್ಮ ನೋಟವನಂತ ಸುಖ. ಕೂಟ ಪರಮ ಸುಖವಯ್ಯ. ಅಷ್ಟಕೋಟಿ ರೋಮಂಗಳೆಲ್ಲ ಕಂಗಳಾಗಿ ನೋಡುತ್ತಿದ್ದೆನು. ಕೂಡಲ ಸಂಗಮದೇವಾ, ನಿಮ್ಮ ನೋಡಿ, ಮನದಲ್ಲಿ ರತಿ ಹುಟ್ಟಿ, ನಿಮಿರ್ದವೆನ್ನ ಕಂಗಳು.

೩. ವಚನದಲ್ಲಿ ನಾಮಾಮೃತ ತುಂಬಿ, ನಯನದಲ್ಲಿ ಮೂರುತಿ ತುಂಬಿ, ಮನದಲ್ಲಿ ನಿಮ್ಮ ನೆನಹು ತುಂಬಿ, ಕಿವಿಯಲ್ಲಿ ನಿಮ್ಮ ಕೀರ್ತಿಯು ತುಂಬಿ, ಕೂಡಲಸಂಗಮದೇವಾ, ನಿಮ್ಮ ಚರಣಕಮಲದೊಳು ನೊಗದ ಬಂಡನುಂಬ ತುಂಬಿಯಾಗಿರ್ದೆನು.

೪. ಅಡಿಗಡಿಗೆ ಲಿಂಗವ ನಡರಿಯಡರಿ, ಕಂಗಳು ಕಡೆಗೋಡಿ ವರಿದವಯ್ಯ. ಎನ್ನಶ್ರುಜಲಂಗಳು ಆಲಿಗಲ್ಲ ರೂಹಿನಂತೆ. ತನು ಪುಳಕಿತವಾಗೆ ಅರಗಿನ ಪುಥ್ಥಳಿಯಂತೆ. ಬೆವರು ಬಿಂದುಗಳೆಲ್ಲ ಭಕ್ತಿರಸದ್ರವವಯ್ಯ. ಕೂಡಲಸಂಗಮದೇವಯ್ಯ ನಿಮ್ಮ ದರ್ಶನ ಸ್ಪರ್ಶನದಿಂದ ಮನ ಒಲಿದು ನೆರೆವ ಭರವ ನಾನೇನೆಂಬೆನಯ್ಯ ?

೫. ಮನ ಮನ ಬೆರಸಿದಲ್ಲಿ, ತನು ಕರಗದಿರ್ದಡೆ, ನೋಂಕಿನಲ್ಲಿ ಪುಳಕಂಗಳು ಹೊರ ಹೊಮ್ಮದಿರ್ದಡೆ, ಕಂಗಳಶ್ರುಜಲಂಗಳು ಸುರಿಯದಿರ್ದಡೆ, ನುಡಿವಲ್ಲಿ ಗದ್ಗದಂಗಳು ಹೊರಹೊಣ್ಮದಿರ್ದಡೆ, ಕೂಡಲಸಂಗಮದೇವರ ಭಕ್ತಿಗಿದೇ ಚಿನ್ಹ. ಎನ್ನಲ್ಲಿ ಇಲ್ಲವಾಗಿ ಆನು ಡಂಭಕ ಕಾಣಿರೇ.

೬. ಅಂಗೈಯ್ಯೊಳಗಣ ಲಿಂಗವ ನೋಡುತ್ತ, ಕಂಗಳು ಕಡೆಗೋಡಿವರಿಯುತ್ತ, ಎಂದಿಪ್ಪೆನೋ! ನೋಟವೇ ಪ್ರಾಣವಾಗಿ ಎಂದಿಪ್ಪೆನೋ! ಕೂಟವೇ ಪ್ರಾಣವಾಗಿ ಎಂದಿಪ್ಪೆನೋ! ಎನ್ನ ಅಂಗವಿಕಾರದ ಸಂಗವಳಿದು ಕೂಡಲಸಂಗಮಯ್ಯ ಜಯ ಲಿಂಗ, ಲಿಂಗ, ಎನುತಿರ್ಪೆನು.

೭. ಲಿಂಗ ಕರಸ್ಥಲಕ್ಕೆ ಬಂದ ಮತ್ತೆ, ಕಂಗಳು ತುಂಬಿವರಿಯದಿರ್ದಡೆ ಅಂಗಲಿಂಗ ಪೂಜೆ ಏಕೆ? ಲಿಂಗವ ಜಿಹ್ವೆಯಲ್ಲಿ ನೆನೆವಾಗ, ಅಂಗವ ಮರೆಯದಿರ್ದಡೆ ಆ ಲಿಂಗದ ನೆನಹು ಅದೇಕೆ? ಲಿಂಗವಾರ್ತೆಯ ಕಿವಿ ತುಂಬ ಕೇಳಿ, ಸರ್ವಾಂಗ ಜೊಂಪಿಸಿ ಮನ ಮಗ್ನವಾಗಿ ಇರದಿರ್ದಡೆ, ಉರಿಲಿಂಗ ತಂದೆಯ ಸಿರಿಯ ನೆನೆಯಲೇಕೆ?

೮. ಆಡಿ ಕಾಲು ದಣಿಯವು. ನೋಡಿ ಕಣ್ಣು ದಣಿಯವು. ಮಾಡಿ ಕೈ ದಣಿಯವು. ಹಾಡಿ ನಾಲಿಗೆ ದಣಿಯದು. ಇನ್ನೇವೆ? ಇನ್ನೇವೆ? ನಾ ನಿಮ್ಮ ಕೈಯ್ಯಾರೆ ಪೂಜಿಸಿ, ಮನ ದಣಿಯಲೊಲ್ಲದು. ಇನ್ನೇವೆ? ಇನ್ನೇವೆ? ಕೂಡಲಸಂಗಮದೇವ ಕೇಳಯ್ಯ. ನಿಮ್ಮುದರವ ಬಗಿದಾನು ಹೊಗುವ ಭರವೆನಗೆ.

೯. ಕಾಯಸಂಗ ನಿಸ್ಸಂಗವಾಗಿ, ಇನ್ನಾವ ಸಂಗವನರಿಯೆನಯ್ಯ. ಮಿಗೆ ಒಲಿದೆನಾಗಿ, ಅಗಲಲಾರೆನಯ್ಯ. ನಗೆಮೊಗದರಸಾ, ಅವಧಾರು. ಕೂಡಲಸಂಗಮದೇವಾ ಬಗಿದು ಹೋಗುವೆ ನಾ ನಿಮ್ಮ ಮನವ.

೧೦. ಕಂಡ ಕನಸು, ನಿಧಾನವ ಕಂಡೆನಯ್ಯ. ಬಿಡಲಾರದ ನಿಧಾನವ ಕಂಡೆನಯ್ಯ. ಕೂಡಲಸಂಗಯ್ಯನೆಂಬ ನಿಧಾನವ ಕಂಡು, ಬಿಡಲಾರೆನಯ್ಯ.

೧೧. ಎನಗೆ ನಿಮ್ಮ ನೆನಹಾದಾಗಳೇ ಉದಯ. ಎನಗೆ ನಿಮ್ಮ ಪಾದ ಮರಹಾದಾಗಳೇ ಅಸ್ತಮಾನ. ಎನಗೆ ನಿಮ್ಮ ನೆನಹವೇ

ಜೀವಾಳ. ಎನಗೆ ನಿಮ್ಮ ನೆನಹಹೇ ಪ್ರಾಣ. ಕಾಣಾ ಸ್ವಾಮಿ. ಎನ್ನ ಹೃದಯದಲ್ಲಿ ನಿಮ್ಮ ಚರಣದುಂಡಿಗೆಯ ನೊತ್ತಯ್ಯ. ಎನ್ನ ವದನದಲ್ಲಿ ಷಡಕ್ಷರಿಯ ಬರೆಯಯ್ಯಾ ಕೂಡಲಸಂಗಮದೇವಾ.

೧೨. ಸುರರು, ಕಿನ್ನರರು, ಕಿಂಪುರುಷರೆಂಬುವರನಾರುಬಲ್ಲರು? ಎನ್ನ ಚಿತ್ತವು ನಿಮ್ಮಮೇಲೆ ಲಿಂಗಯ್ಯ. ಎನ್ನ ಭಾವವು ನಿಮ್ಮಮೇಲೆ ಸಂಗಯ್ಯ. ಕೂಡಲಸಂಗಮದೇವಾ ನಾನನ್ಯವೆಂಬುದನರಿಯೆನಯ್ಯ.

೧೩. ಮಂಗಳಮಯ ಲಿಂಗವ ಮನ ಹಿಂಗದೆ, ಸುಸಂಗಿಯಾಗಿ, ಮಹಾಲಿಂಗ ಪ್ರಸಂಗಿಯಾಗಿಪ್ಪಾತನ ಅಂಗವೆನಗೆ ಮಂಗಳ ತರಂಗ. ಆತನ ಪ್ರಸಂಗದಲ್ಲಿರಿಸಾ ಉರಿಲಿಂಗದೇವಾ.

---

## ಪರಮಾತ್ಮನ ಧ್ಯಾನ.

### ಭಾಗ ೨

೧೪. ತಾಳ ಮಾನ ಸರಸ ನಾನರಿಯೆ. ವಜೆ ಬಜಾವಣೆಯ ಲೆಕ್ಕವ ನಾನರಿಯೆ. ಅಮೃತಗಣ, ದೇವಗಣ ನಾನರಿಯೆ. ಕೂಡಲಸಂಗಮದೇವಾ ನಿನಗೆ ಕೇಡಿಲ್ಲವಾಗಿ, ಆನು ಒಲಿದಂತೆ ಹಾಡುವೆ.

೧೫. ಎನ್ನ ಕಾಯವ ದಂಡಿಗೆಯ ಮಾಡಯ್ಯ. ಎನ್ನ ಶಿರವ ಸೋರೆಯ ಮಾಡಯ್ಯ. ಎನ್ನ ನರವ ತಂತಿಯ ಮಾಡಯ್ಯ. ಎನ್ನ ಬೆರಳ ಕಡ್ಡಿಯ ಮಾಡಯ್ಯ. ಮೂವತ್ತೆರಡು ರಾಗವ ಹಾಡಯ್ಯ. ಎನ್ನ ಉರದಲೊತ್ತಿ ನಿನ್ನ ಜಯ ಗಾನವಂ ಬಾರಿಸು, ಕೂಡಲಸಂಗಮದೇವಾ.

೧೬. ಎಡರಡಿಸಿದಲ್ಲಿ, ಮೃಡ, ನಿಮ್ಮ ನೆನೆವರು. ಎಡರಡಿಸಿದ ವಿಪತ್ತು ಕಡೆಯಾಗಲೊಡನೆ, ಮೃಡ ನಿಮ್ಮನೆಡಹಿಯೂ ಕಾಣರು ರಾಮನಾಥಾ.

೧೭. ಚಕೋರಂಗೆ ಚಂದ್ರಮನ ಬೆಳಗಿನ ಚಿಂತೆ. ಕಮಲಾಂಬುಜಕ್ಕೆ ಭಾನುವಿನ ಉದಯದ ಚಿಂತೆ. ಭ್ರಮರಂಗೆ ಪರಿಮಳದ ಬಂಡುಂಬ ಚಿಂತೆ. ಎನಗೆ ಕೂಡಲಸಂಗಮದೇವರ ನೆನೆವುದೇ ಚಿಂತೆ.

೧೮. ಬಡತನಕ್ಕೆ ಉಂಬುವ ಚಿಂತೆ, ಉಂಡರೆ ಉಡುವ ಚಿಂತೆ, ಉಡಲಾದರೆ ಇಡುವ ಚಿಂತೆ, ಇಡಲಾದರೆ ಹೆಂಡಿರ ಚಿಂತೆ, ಹೆಂಡಿರಾದರೆ ಮಕ್ಕಳ ಚಿಂತೆ. ಮಕ್ಕಳಾದರೆ ಬದುಕಿನ ಚಿಂತೆ, ಬದುಕಾದರೆ ಕೇಡಿನ ಚಿಂತೆ, ಕೆಡದಿರೆ ಮರಣದ ಚಿಂತೆ, ಹಲವು ಚಿಂತೆಯಲ್ಲಿ ಇಪ್ಪವರನ್ನು ಕಂಡೆನು. ಶಿವಚಿಂತೆ ಇಪ್ಪವರೊಬ್ಬರನೂ ಕಾಣೆನೆಂದಾತ ನಮ್ಮ ಅಂಬಿಗರ ಚೌಡಯ್ಯ ನಿಜ ಶರಣನು.

೧೯. ಅಂಗಯ್ಯ ಲಿಂಗವಲ್ಲಿ ಕಂಗಳು ನಟ್ಟು ಎವೆ ಹಳಚದೆ ಮನ ಕವಲಿಡದೆ, ಚಿತ್ರದ ರೂಹಿನ ತೆರನಂತೆ ಲಿಂಗವ ನೋಡಿ ನೋಡಿ ಕಂಗಳಲಚ್ಚೊತ್ತಿ, ಮನದಲ್ಲಿ ನೆನೆನೆನೆದು, ಮರೆವ ಲಿಂಗಮುಖ ಸಂಪನ್ನರನೇ ಲಿಂಗವೆಂಬೆನು ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ.

೨೦. ಹಿಂಡನಗಲಿ ಹಿಡಿವಡೆದ ಕುಂಜರ ತನ್ನ ವಿಂಧ್ಯವ ನೆನೆವಂತೆ ನೆನೆವೆನಯ್ಯ. ಬಂಧನಕ್ಕೆ ಬಂದ ಗಿಳಿ ತನ್ನ ಬಂಧುವ ನೆನೆವಂತೆ ನೆನೆವೆನಯ್ಯ. ಕಂದ ನೀನಿತ್ತ ಬಾರೆಂದು ನೀವು ನಿಮ್ಮಂದವ ತೋರಯ್ಯ ಚನ್ನಮಲ್ಲಿಕಾರ್ಜುನಾ.

೨೧. ವನದ ಕೋಗಿಲೆ ಮನೆಗೆ ಬಂದರೆ, ತನ್ನ ವನವ ನೆನೆವುದ ಮಾಣ್ಬುದೇ? ಮಲೆಯ ಗಜವು ಮನೆಗೆ ಬಂದರೆ, ತನ್ನ ಮಲೆಯ ನೆನೆವುದ ಮಾಣ್ಬುದೇ? ಕೂಡಲಸಂಗನ ಶರಣರು ಮರೆದು ಮರ್ತ್ಯಕ್ಕೆ ಬಂದರೆ, ತಮ್ಮ ಆದಿ ಮಧ್ಯಾಂತರಂಗದ ಲಿಂಗವ ನೆನೆವುದ ಮಾಣ್ಬರೇ?

೨೨. ಅಂಗಯ್ಯ ಲಿಂಗವ ಕಂಗಳು ತುಂಬಿ ನೋಡಿ, ಮನ ಹಾರೈಸಿದಲ್ಲಿ ಅಂಗೇಂದ್ರಿಯಂಗಳೆಲ್ಲ ಲಿಂಗೇಂದ್ರಿಯಂಗಳಾದವು. ಅಂಜದಿರು ಮನವೇ, ಲಿಂಗವು ನಿನಗೆ ದೂರವೆಂದು. ಮನೋಮಧ್ಯದ

ಲ್ಲಿಪ್ಪ, ಅಂಗದ ಕಂಗಳಲ್ಲಿಪ್ಪ, ಪ್ರಾಣದ ಭಾವದಲ್ಲಿಪ್ಪ. ಅಂಗ ಪ್ರಾಣ ಭಾವ ಭರಿತ ಸರ್ವಾಂಗ ಲಿಂಗವಾದ ಬಳಿಕ, ಲಿಂಗಮಧ್ಯೆ ಪ್ರಾಣ, ಪ್ರಾಣ ಮಧ್ಯೆ ಲಿಂಗ. ಇದು ಕಾರಣ ಉತ್ಪತ್ತಿ ಸ್ಥಿತಿ ಲಯ ಉಂಟೆಂದು ಅಂಜದಿರು. ಅಂಜಿಕೆ ಇಲ್ಲ, ಅಳುಕಿಲ್ಲ, ಬಂದುದೇ ಲಿಂಗದ ಲೀಲೆ, ಇದ್ದುದೇ ಲಿಂಗದಾನಂದ, ಭಾವಲೀಯವಾದುದೇ ಲಿಂಗ ನಿರವಯವು. ಇದು ಸತ್ಯ ಶಿವಬಲ್ಲ, ಉರಿಲಿಂಗಪೆದ್ದಿ ಪ್ರಿಯ ವಿಶ್ವೇಶ್ವರಾ.

೨೩. ಜಗದ ಸುತ್ತಿಪ್ಪುದು ನಾಶ ಮಾಯೆಯಯ್ಯಾ. ನಿನ್ನ ಸುತ್ತಿಪ್ಪುದು ಎನ್ನ ಮನ ನೋಡಯ್ಯಾ. ಜಗಕ್ಕೆ ಬಲ್ಲಿದ ನೀನು. ನಿನಗೆ ಬಲ್ಲಿದ ನಾನು ಕಂಡಯ್ಯಾ. ಜಗವು ನಿನ್ನೊಳಗೆ, ನೀನು ಎನ್ನೊಳಗೆ. ಕರಿಯು ಕನ್ನಡಿಯೊಳಗೆ ಅಡಗಿದಂತೆ ನೀನೆನ್ನೊಳಡಗಿದೆ ಕೂಡಲ ಸಂಗಮದೇವಾ.

೨೪. ಆರಾದರೂ ನಿಮ್ಮ ನೆನೆವರಯ್ಯಾ. ನಾ ನಿಮ್ಮ ನೆನೆವನಲ್ಲ. ಅದೇನು ಕಾರಣವೆಂದಡೆ, ಎನ್ನ ನೆನೆವ ಮನವೇ ನೀವೆಯಾದಿರಾಗಿ. ಆರಾದರೂ ನಿಮ್ಮ ಪೂಜಿಸುವರಯ್ಯಾ. ನಾ ನಿಮ್ಮ ಪೂಜಿಸುವನಲ್ಲ. ಅದೇನು ಕಾರಣವೆಂದರೆ, ಎನ್ನ ತನುವಿಗೆ ನೀವೇ ಪೂಜೆಯಾದಿರಾಗಿ. ಆರಾದರೂ ನಿಮಗರ್ಪಿಸುವರಯ್ಯಾ. ನಾ ನಿಮಗರ್ಪಿಸುವನಲ್ಲ. ಅದೇನು ಕಾರಣವೆಂದರೆ, ಎನ್ನ ಸರ್ವಾಂಗವೆಲ್ಲವೂ ನಿಮಗರ್ಪಿತವಾಯಿತ್ತಾಗಿ. ಇದು ಕಾರಣ ಭಕ್ತದೇಹಿಕ ದೇವ, ದೇವ ದೇಹಿಕ ಭಕ್ತನೆಂಬ ಶ್ರುತಿಯು ನಡೆದು ನಿಮ್ಮ ಮುಟ್ಟಿ, ನಾನು ಅಭಿನ್ನನಾದೆ ಕಾಣಾ ಕೂಡಲಸಂಗಮ ದೇವಾ.

೨೫. ನಡೆವ ಕಾಲು, ಆನುವ ಕೈ, ಬೇಡುವ ಬಾಯಿ ಸರ್ವವ ನೊಡಗೂಡುವ ಮನ ಉಡುಗಿ ಘನಲಿಂಗದಲ್ಲಿ ತಲ್ಲೀಯವಾದವನಂಗ ಮರುಳ ಕಂಡ ಕನಸಿನಂತೆ, ಮೂಗನ ಕಾವ್ಯದಂತೆ, ಜಲಲಿಪಿಯಂತೆ, ವಾರಿಯ ಧೂಮ್ರದಂತೆ ಇದಾರಿಗೆಯೂ ಅಸಾಧ್ಯ, ಆತುತವೈರಿ ಮಾರೇಶ್ವರಾ.

೨೬. ನಚ್ಚುಗೆ ಮನ ನಿಮ್ಮಲ್ಲಿ, ಮೆಚ್ಚುಗೆ ಮನ ನಿಮ್ಮಲ್ಲಿ, ಸಲಹುಗೆ ಮನ ನಿಮ್ಮಲ್ಲಿ, ಅಳಲುಗೆ ಮನ ನಿಮ್ಮಲ್ಲಿ, ಬಳಲುಗೆ ಮನ ನಿಮ್ಮಲ್ಲಿ, ಕರಗುಗೆ ಮನ ನಿಮ್ಮಲ್ಲಿ, ಕೊರಗುಗೆ ಮನ ನಿಮ್ಮಲ್ಲಿ, ಎನ್ನ ಪಂಚೇಂದ್ರಿಯಂಗಳು ಕರ್ಪುರ ಉಂಡ ಉರಿಯಂತೆ ನಿಮ್ಮಲ್ಲಿ ಬೆರಸುಗೆ ಚನ್ನಮಲ್ಲಿಕಾರ್ಜುನಯ್ಯ.

# ಕಠಿಣ ಶಬ್ದಗಳ ಅರ್ಥ.

ಅಗಡು = ತುಂಟತನ, ಕ್ಷುದ್ರತನ
ಅಗ್ಗವಣಿ = (ಅಗ್ಗಣಿ, ಅಘವಣಿ) ಪವಿತ್ರನೀರು
ಅಂತಿಗ = ಅಂಥವ
ಅಜ = ಬ್ರಹ್ಮ
ಅಟಮಟ = ಕಾಪಟ್ಯ, ಠಕ್ಕುತನ
ಅಟ್ಟಿಟ್ಟಿಕೆ = ಬೆನ್ನು ಹತ್ತುವದು, ತೊಂದರೆಕೊಡುವದು ಒತ್ತುವದು
ಅಡಗ = ಮಾಂಸ
ಅದ್ದು = ಮುಳುಗಿಸು, ಕೆಡವು
ಅನಾಮಿಕ = ಪಾಪಿಷ್ಠ
ಅನುಸರಣೆ = ಅನಾಚಾರ
ಅರಸು = ಹುಡುಕು
ಅರೆ = (೧) ತಿಕ್ಕು, (೨) ಅರ್ಧ, (೩) ಕಲ್ಲು, ಕಲ್ಲುಬಂಡೆ, ಕಲ್ಲು ಹಾಸಿಕೆ
ಅಲೆ = ತೆರೆ (೨) ಸಂಚರಿಸು
ಅವಂದಿರ = ಅಂಥವರ
ಅಳಿ = ಕ್ಷುದ್ರ (೨) ನಾಶಮಾಡು
ಅಳುಪು = ತೊಂದರೆಕೊಡು, (೨) ಕೆಂಗೆಡಿಸು
ಆದ್ಯರು = ಪುರಾತನರು, ಪೂರ್ವಜರು
ಆಮಿಷ = ಆಶೆ
ಆಲಿ = ಕಣ್ಣು, (೨) ಅಣೇಕಲ್ಲು
ಆಲಿಗಲ್ಲು = ಆಣೇಕಲ್ಲು
ಇದಿರು = ಭಿನ್ನತೆ, ವಿರುದ್ಧ
ಈಷಣ = ಲೋಭ, ಆಶೆ
ಉಚ್ಚಹ = ಉತ್ಸಾಹ, ಆನಂದ
ಉಡುಗು = ಕ್ಷೀಣವಾಗು
ಉಂಡಿಗೆ = ಗುರ್ತು, ಮುದ್ರೆ, ಮೊಹರು
ಉದ್ದಂಡ = ಗರ್ವವುಳ್ಳ, ಸೊಕ್ಕಿನ
ಉಪಾಧಿ (ಉಪಾಧಿಕೆ) = ಮೇಲೆ ಇರುವದು, ತೋರಿಕೆ, ಸುಳ್ಳು
ಒಯ್ಯಾಲೆ = ಜೋಕಾಲಿ
ಉಲುಹು = ಸಪ್ಪಳ, ಧ್ವನಿ
ಏತ = ಮಟ್ಟಿ, ಯಾತ
ಒಟ್ಟಲು = ರಾಸಿ
ಒರೆ = ತಿಕ್ಕು, (೨) ಹೊರಬೀಳು ಒಸರು (೩) ತಿಳಿಸು (೪) ಆಚ್ಛಾದನ
ಓಡು = ಮಣ್ಣಿನ ಪಾತ್ರೆ

ಓರಂತೆ=ಸಮಾಧಾನವೃತ್ತಿಯಿಂದ
ಓಸರಿಸು = ಹಿಂಜರಿ
ಕನಲಿಕೆ = ಸಿಟ್ಟು
ಕಂಬಳ = ದಿನಗೂಲಿ
ಕರ=ಅತಿಶಯ, ಬಹಳ, ದೊಡ್ಡ
ಕರಿ = ಕರಕಾದ ಸ್ಥಿತಿ
ಕರುಳ = ಪ್ರೀತಿ, ದಯೆ
ಕಷ್ಟರು = ದುಷ್ಟರು
ಕಾಕು = ಕೀಳು
ಕಾಳಿಕೆ = ಕಪ್ಪು (೨) ದೋಷ
ಕಾಳೋರಗ = ಸರ್ಪ
ಕುಂಜರ = ಆನೆ
ಕುಟಿಲ = ಕಾಪಟ್ಯ, ಸುಳ್ಳು
ಕುಹಕ = ಕಾಪಟ್ಯ, ಠಕ್ಕಿಸುವವ (೨) ಡೊಂಬ
ಕೂರ್ತು = ಉದ್ದೇಶಿಸಿ
ಕೂಸಿ = ಗಣೆ
ಕೂಪ (ಕೋಪರ)= ಪ್ರೀತಿಸುವವ
ಕೂರ್ = ಪ್ರೀತಿಸು
ಕೂರ = ತೀಕ್ಷ್ಣ, ಹದನಾದ
ಕೆಮ್ಮನೆ = ನಿರರ್ಥಕವಾಗಿ
ಕೆಯಿ = ಹೊಲ
ಕೆಳೆ (ಕೆಳೆಯ) = ಸ್ನೇಹಿತ
ಕೆಳೆಗೊಳ್ಳು = ಸ್ನೇಹ ಮಾಡು
ಕೈದು = ಶಸ್ತ್ರ

ಕೊಳುಕೊಡೆ = ಕೊಡತಗೊಳ್ಳುವ ವ್ಯವಹಾರ, ಲೇವಾದೇವಿ
ಕೋಡಿವರೆ = ತುಂಬಿಹರಿ
ಗಡಣ = ಸಮೂಹ
ಗೆಲ್ಲ (ಗೆಲ) = ಜಯ
ಜಂಜಡ = ತೊಂದರೆ
ಜವುಗು = ಜವುಳು
ಜಾತಿಗಾರ = ಬಹುರೂಪಿ
ಜೀವಾಳ=ಚೈತನ್ಯ ಕೊಡುವಂಥಾದ್ದು ಸಾರ, ಆಧಾರ, ಆಶ್ರಯ
ಠಾವು = ಸ್ಥಳ
ಡಿಂಗರಿಗ = ಸೇವಕ
ತಮಂಧ = ಕಗ್ಗತ್ತಲೆ
ತರಗು = ಒಣಗು
ತವರಾಜ = ಸಕ್ಕರೆ (೨) ಅಮೃತ
ತಸ್ಕರಿಸು = ತುಡುಗು ಮಾಡು
ತಿಮಿರ = ಕತ್ತಲೆ
ತೆರ = ರೀತಿ
ತೆರೆ = ನಿರಿಗೆ
ತೊಡೆ = ಅಳಿಕಿಸು, ಒರಿಸು, ತೊಳೆ
ತೊಡೆಹ = ಮೇಲೆ ಹಚ್ಚುವದು, (೨) ಗಿಲಾಯಿ, ಗಿಲೀಟು
ತೊರೆ = ನದಿ(೨)ತ್ಯಜಿಸು, ಬಿಟ್ಟುಬಿಡು
ತ್ರಾಹಿ = ರಕ್ಷಿಸು, ಕಾಪಾಡು
ದಂದುಗ = ತೊಂದರೆ, ಶ್ರಮ

ದಿಬ್ಯ = ದಿವ್ಯ, ದೇವರಿಗೆ ಸಂಬಂಧಿಸಿದ, (ಶ್ರೇಷ್ಠವಾದ), ಸುಂದರ

ದೆಸೆವಳಯ = ದಿಗ್ಮಂಡಲ

ದೊರೆ = ಶ್ರೇಷ್ಠವಾದ, ಮಹತ್ತಾದ (೨) ಸಮವಾದದ್ದು (೩) ಹೋಲಿಕೆಯುಳ್ಳದ್ದು

ನಾಣು = ನಾಚಿಕೆ

ನಿಚ್ಚ = ನಿತ್ಯ

ನಿಚ್ಚನಿಚ್ಚ = ಯಾವಾಗಲೂ

ನಿಡು = ಸರಳವಾದ, ನೆಟ್ಟನ್ನ

ನಿಬ್ಬೆಗ = ಶಾಂತ, ಸೌಮ್ಯ

ನಿಯತ = ಬಿಗಿಯಾದ, ಬಿಗಿಹಿಡಿದ

ನಿರ್ವಾಣ (ನಿರಿಯಾಣ) = ಮೋಕ್ಷ, ಕೈವಲ್ಯ

ನಿಲವು = ಸ್ಥಿತಿ

ನಿಸ್ಪೃಹ = ಆಶೆಇಲ್ಲದವ (೨) ನಿರ್ಭಿಡೆ

ನಿಕ್ಷೇಪ = ಇಡಲ್ಪಟ್ಟವಸ್ತು (೨) ದ್ರವ್ಯ

ನೆರವಿ = ಸಮೂಹ

ನೆಲೆ = ಮರ್ಮ

ನೆಲೆವನೆ = ಉಪ್ಪರಿಗೆ

ನೇಣು = ಹಗ್ಗ

ನೋನು (ನೂನು) = ಬೇಡಿಕೊಳ್ಳು (೨) ಹರಿಕೆಹೊರು, (೩) ಪೂಜೆಮಾಡು

ಪಡಿಪುಚ್ಚ = ಸಂಶಯ

ಪತ್ತಿಗ = ಸ್ನೇಹಿತ (೨) ಭಾಗಿದಾರ

ಪಸಾರ = ಒಡವೆ (೨) ಮಾರತಕ್ಕ ಪದಾರ್ಥ

ಪಿಸುಣ = ಜೀನತನ (೨) ಚಾಡಿಕಾರ

ಪೊರಳ್ಚು = ಹೊರಳಿಸು

ಬಗೆ = ಇಚ್ಛಿಸು, (೨) ತಿಳಿ, (೩) ಮನಸ್ಸು

ಬಟ್ಟೆ = ದಾರಿ

ಬಂಡು = ಪರಾಗ

ಬಳ್ಳ = ಶೇರು, (೨) ಮಾಪು

ಬೀಗು = ಉಬ್ಬು, ಗರ್ವಿಸು

ಬೆಚ್ಚು = ಬೆರಿಸು, (೨) ಅಂಜು, (೩) ಬೆಸಿಗೆ

ಬೆಬ್ಬಳಿಸು = ವ್ಯಾಕುಲಪಡು

ಬೆರೆ = ಕೂಡು (೨) ಗಟ್ಟಿಯಾಗಿರು (೩) ಸೊಕ್ಕಿನಿಂದ ನಡೆ

ಬೆಸಗೊಳ್ಳು = ಪ್ರಶ್ನೆಮಾಡು

ಬೆಂಗುಂಡ = ಚುಕ್ಕಾಣಿ (೨) ಲಂಗರ

ಬೇಹ = ಬೇಕಾದ (೨) ಬೇಡುವ

ಭಂಗ = ಅಪಮಾನ
ಭಾಜನ = ಪಾತ್ರ (೨) ಗುರಿ
ಭೈತ್ರ = ನಾವು, ಡೋಣಿ
ಮತ್ತರ = ಭೂಮಿಯ ಒಂದು ಅಳತೆ
ಮನ್ನಣೆ = ಮಾನ
ಮರೀಚಿ = ಕಿರಣ
ಮಸಕ = ಮನಸಿನ ಹೊಯ್ದಾಟ (೨) ಇಂದ್ರಿಯವಿಕಾರ (೩) ಸಿಟ್ಟು
ಮಾಟ = ಕ್ರಿಯೆ
ಮಾಣು = ಬಿಡು (೨) ಬೇಡ
ಮಾಬುದು = ಬಿಡುವುದು
ಮಾರು = ಪ್ರತಿ, ಬದಲು
ಮುಕುರ = ಕನ್ನಡಿ
ಮುಡುಹು = ಭುಜ
ಮೊನೆ = ಹದನ, (೨) ತುದಿ, (೩) ಕಾಳಗ
ರಾಟಣ = ಚಕ್ರ
ರೂಹು = ರೂಪು
ಲೇಸಿಗ = ಹಿತಸ್ಥ
ಲೋಗರು = ಜನರು
ಲೆಂಕ = ಸೇವಕ
ವಿಕಳ = ಮನಸಿನ ಉದ್ವೇಗ
ವಿಭವ = ಪ್ರಕಾಶ
ವಿಸ್ಕಂದ = ಚಾಂಚಲ್ಯ
ವ್ಯತಿಕರಿಸು = ಬೇರೆಮಾಡು
ವೈಶಿಕ = ಕಾಪಟ್ಯ (೨) ಸುಳ್ಳುತನ (೩) ಠಕ್ಕುತನ
ಶಠಗ = ಕೆಟ್ಟ ಮನುಷ್ಯ
ಸನ್ನಿಹಿತ = ಸಮೀಪದಲ್ಲಿ ಇರುವ
ಸಮನಿಸು = ಒದಗು
ಸಾರಾಯ = ಮರ್ಮಜ್ಞ
ಸಿಕ್ಕು = ತೊಡಕು
ಸುರಿಗೆ = ಕತ್ತಿ
ಸೂಳ್ = ಸಾರೆ, ಬಾರೆ
ಸೂಳು = ದೊಡ್ಡಧ್ವನಿ
ಸೊಡರು = ದೀಪ, ಬೆಳಕು
ಸೊನೆ = ರಸ, (೨) ಮಳೆ
ಸೊಮ್ಮು = ಒಡವೆ, ದ್ರವ್ಯ
ಸೊಲ್ಲು = ಧ್ವನಿ
ಸೋಕು = ಸೋಂಕು (೨) ಸಂಬಂಧ
ಸೋರೆ = ಈಸುಗುಂಬಳಕಾಯಿ
ಸ್ವಯ = ತಾದಾತ್ಮ್ಯಭಾವವುಳ್ಳ
ಹಡಿಕೆ = ಹೊಲಸು
ಹದುಳಿಗ = ಸುಖವುಳ್ಳವ
ಹಮ್ಮು = ನಾನೆಂಬ ಭಾವ (೨) ಸೊಕ್ಕು
ಹವಣು = ಪ್ರಮಾಣ, ಅಳತೆ
ಹಾರು = ಇಚ್ಛಿಸು, ನಿರೀಕ್ಷಿಸು
ಹೀಲಿ = ನವಲಗರಿ